ಚನ್ನಪಟ್ಟಣದ ಕರಕುಶಲತೆಯ ಉದ್ಯಮ
ಒಂದು ಅಧ್ಯಯನ

ಚರಿತ್ರೆ ಎಂ.ಫಿಲ್. ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
'ಎಂ.ಫಿಲ್. ನಿಬಂಧ'

ಸಂಶೋಧನಾ ವಿದ್ಯಾರ್ಥಿನಿ :
ಲತಾ ಪಿ.
ರಿ. ನಂ: **KRSMH-00568**

ಮಾರ್ಗದರ್ಶಕರು :
ಡಾ. ಹೆಚ್.ಎಸ್. ಬಸವೇಗೌಡ
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ,
ಮಹಿಳಾ ಸರ್ಕಾರಿ ಕಾಲೇಜು, ಮದ್ದೂರು, ಮಂಡ್ಯ ಜಿಲ್ಲೆ.

ಅಧ್ಯಯನ ಕೇಂದ್ರ :
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ)
ಮಂಡ್ಯ.

ಇತಿಹಾಸ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ.

2011–12

ಚನ್ನಪಟ್ಟಣದ ಕರಕುಶಲತೆಯ ಉದ್ಯಮ ಒಂದು ಅಧ್ಯಯನ

ಚರಿತ್ರೆ ಎಂ.ಫಿಲ್. ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
'ಎಂ.ಫಿಲ್. ನಿಬಂಧ'

ಸಂಶೋಧನಾ ವಿದ್ಯಾರ್ಥಿನಿ :
ಲತಾ ಪಿ.
ರಿ. ನಂ: **KRSMH-00568**

ಮಾರ್ಗದರ್ಶಕರು :
ಡಾ. ಹೆಚ್.ಎಸ್. ಬಸವೇಗೌಡ
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ,
ಮಹಿಳಾ ಸರ್ಕಾರಿ ಕಾಲೇಜು, ಮದ್ದೂರು, ಮಂಡ್ಯ ಜಿಲ್ಲೆ.

ಅಧ್ಯಯನ ಕೇಂದ್ರ :
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ)
ಮಂಡ್ಯ.

ಇತಿಹಾಸ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ.

2011–12

986

ಸಂಶೋಧನಾ ವಿದ್ಯಾರ್ಥಿನಿಯ ಪ್ರಮಾಣ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ **ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ 2011–12ನೇ** ಸಾಲಿಗೆ ಇತಿಹಾಸ ಎಂ.ಫಿಲ್. ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್. ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು **"ಚನ್ನಪಟ್ಟಣದ ಕರಕುಶಲತೆಯ ಉದ್ಯಮ–ಒಂದು ಅಧ್ಯಯನ"** ವಿಷಯವನ್ನು ಆಯ್ಕೆ ಮಾಡಿಕೊಂಡು **ಡಾ. ಹೆಚ್.ಎಸ್. ಬಸವೇಗೌಡ** ರವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ, ನಿಬಂಧದ ಅಧ್ಯಾಯಗಳನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಿರುವುದಿಲ್ಲ ಮತ್ತು ಕನ್ನಡ ವಿಶ್ವವಿದ್ಯಾಲಯವು ನೀಡುವ ಎಂ.ಫಿಲ್. ಪದವಿಗಾಗಿ ಈ ನಿಬಂಧವನ್ನು ಒಪ್ಪಿಸಿದ್ದೇನೆ.

Latha. P.

(ಲತಾ ಪಿ.)
ಸಂಶೋಧನಾ ವಿದ್ಯಾರ್ಥಿನಿ, ಚರಿತ್ರೆ ವಿಭಾಗ,
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ), ಮಂಡ್ಯ
(ಕನ್ನಡ ವಿ.ವಿ. ಹಂಪಿ – ಮಾನ್ಯತೆ ಪಡೆದಿದೆ)

ದಿನಾಂಕ: 25-06-12
ಸ್ಥಳ : ಮಂಡ್ಯ

ಮಾರ್ಗದರ್ಶಕರ ಪ್ರಮಾಣ ಪತ್ರ

"ಚನ್ನಪಟ್ಟಣದ ಕರಕುಶಲತೆಯ ಉದ್ಯಮ-ಒಂದು ಅಧ್ಯಯನ" ಎಂಬ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ **ಶ್ರೀಮತಿ ಲತಾ ಪಿ.** ರವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತಿದ್ದೇನೆ.

ಸ್ಥಳ : ಮಂಡ್ಯ
ದಿನಾಂಕ: 25.06.12

H-S. B-G-

(ಹೆಚ್.ಎಸ್. ಬಸವೇಗೌಡ)

Dr. H. S. BASAVEGOWDA
M.A., M.Ed., M.Phil., Ph.D.
Assistant Professor
H.O.D., Dept. of History
Govt. College for Women
Maddur, Mandya Dist.-571 428.

ಚನ್ನಪಟ್ಟಣ ಕರಕುಶಲತೆಯ ಉದ್ಯಮ
ಒಂದು ಅಧ್ಯಯನ

ಪರಿವಿಡಿ

ಅಧ್ಯಾಯ		ಪು.ಸಂ.

ಛಾಯಾಚಿತ್ರಗಳ ಪಟ್ಟಿ

ಅಧ್ಯಾಯ–1

ಪೀಠಿಕೆ, ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ

ಅಧ್ಯಾಯ–1

ಪೀಠಿಕೆ, ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ

"ಚನ್ನಪಟ್ಟಣದ ಬಣ್ಣದ ಬೊಂಬೆ
ಚಿನ್ನದ ಹಾಗೆ ಹೊಳೆಯುವ ಬೊಂಬೆ
ರನ್ನದ ಹಾಗೆ ಮಿನುಗುವ ಬೊಂಬೆ
ಕಣ್ಣನು ಮಿಟುಕಿಸಿ ಆಡುವ ಬೊಂಬೆ.

ಮರದಲಿ ಮಾಡಿದ ಚೆಲುವಿನ ಗೊಂಬೆ
ಕರಚಳಕದಿ ಕೊರೆ ಕೊರೆದಿಹ ಗೊಂಬೆ
ಗರಗರ ತಿರುಗುವ ಮಾಟದ ಗೊಂಬೆ!"[1]

1.1 ಪೀಠಿಕೆ:

ಮೈಸೂರು ಸಂಸ್ಥಾನವು ಭವ್ಯವಾದ ಇತಿಹಾಸ ಮತ್ತು ಸಂಸ್ಕೃತಿಯನ್ನು ಹೊಂದಿದೆ. ಅದು ಅದರಲ್ಲಿನ ವೈವಿಧ್ಯಮಯವಾದ ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಜೀವನ ಲಕ್ಷಣಗಳನ್ನು ಒಳಗೊಂಡ ಸಂಕೀರ್ಣ ವ್ಯವಸ್ಥೆಯ ಸಂಸ್ಥಾನವಾಗಿದೆ. ಹಾಗೆಯೇ ಈ ಸಂಸ್ಥಾನದ ಪ್ರಮುಖ ಕೇಂದ್ರಗಳಲ್ಲಿ ಒಂದಾದ ಚನ್ನಪಟ್ಟಣವು ಪ್ರಾಚೀನವಾಗಿ ಮತ್ತು ಐತಿಹಾಸಿಕವಾಗಿ ಮಹತ್ವವನ್ನು ಹೊಂದಿದೆ.

ಕರ್ನಾಟಕ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಕಾಲಘಟ್ಟದಲ್ಲಿ 'ಚನ್ನಪಟ್ಟಣ' ತಾಲ್ಲೂಕು ತನ್ನ ಹೆಜ್ಜೆ ಗುರುತುಗಳನ್ನು ಮೂಡಿಸಿದೆ.[2] ಬಯಲು ಸೀಮೆ ಎಂದು ಪ್ರಸಿದ್ಧಿ ಪಡೆದಿರುವ ರಾಮನಗರ ಜಿಲ್ಲೆಯ 'ಚನ್ನಪಟ್ಟಣ' ಒಂದು ಪ್ರಮುಖ ತಾಲ್ಲೂಕು ಕೇಂದ್ರ. ವಿಭಿನ್ನ ಜಾನಪದ ಸಂಸ್ಕೃತಿಗೆ ತವರೂರಾದ ಚನ್ನಪಟ್ಟಣ ಸಾಂಸ್ಕೃತಿಕವಾಗಿ ಹಾಗೂ ಐತಿಹಾಸಿಕವಾಗಿ ಬಹು ಶ್ರೀಮಂತವಾಗಿದೆ.[3] ಕರ್ನಾಟಕದ ವೈವಿಧ್ಯಮಯ ಸಾಂಸ್ಕೃತಿಕ ದಾಖಲೆಗಳಲ್ಲಿ ತನ್ನ ಕಾಣಿಕೆಯ ಇರುವಿಕೆಯನ್ನು ಪಡಿಮೂಡಿಸಿ 'ಬಣ್ಣದ ಬೊಂಬೆಯ ನಗರಿ' ಎಂದೆ ಖ್ಯಾತಿ ಹೊಂದಿರುವ ಇದು ಜಗತ್ತಿನಲ್ಲೇ ಆಟದ ಸಾಮಾನುಗಳಲ್ಲಿ ವಿಶಿಷ್ಟತೆ ಮತ್ತು ಸೊಬಗನ್ನು ಮೆರೆದಿದೆ. ಪೌರಾಣಿಕ ಮಹತ್ವವನ್ನು ಹೊಂದಿರುವುದಲ್ಲದೆ ಐತಿಹಾಸಿಕವಾಗಿ ವಿಶಿಷ್ಟ ಪಾತ್ರ ನಿರ್ವಹಿಸಿದೆ. ಸಂಗೀತಗಾರರಿಗೆ, ಕಲಾಕಾರರಿಗೆ, ವಿದ್ವಾಂಸರು, ಕವಿಗಳಿಗೆ, ದಾರ್ಶನಿಕರಿಗೆ ಜನ್ಮ ನೀಡಿತಲ್ಲದೆ ಧಾರ್ಮಿಕ, ರಾಜಕೀಯ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ರಂಗಗಳಲ್ಲಿ ಭಿನ್ನ ಪರಂಪರೆಯನ್ನು ಸೃಷ್ಟಿಸಿದೆ. ಅರೆ ಮಲೆನಾಡಿನಂತಿರುವ ಇದು ಕೃಷಿ, ಕರಕುಶಲೆ, ಗೃಹ ಕೈಗಾರಿಕೆಗಳಿಗೂ ಪ್ರಸಿದ್ಧವಾಗಿದೆ.[4]

ಚನ್ನಪಟ್ಟಣ ತಾಲ್ಲೂಕು ಪುರಾಣೇತಿಹಾಸ ಕಾಲದಲ್ಲಿಯೂ ಹೆಸರುವಾಸಿಯಾದ ನಾಡು. ಇಲ್ಲಿನ ಮಣ್ಣಿನ ಮಹಿಮೆಯು ರಾಜಕೀಯ, ಸಾಹಿತ್ಯ, ಸಂಸ್ಕೃತಿಯನ್ನು ಸಮೃದ್ಧಗೊಳಿಸಲು ತನ್ನದೇ ಆದ ಕೊಡುಗೆಯನ್ನು ನೀಡಿದೆ ಎಂಬುದು ಗಮನಾರ್ಹ. ಹತ್ತು ಹಲವು ಸಂದರ್ಭಗಳಲ್ಲಿ ಈ ನೆಲದಲ್ಲಿ ಹುಟ್ಟಿ ಬೆಳೆದವರೂ ಇತಿಹಾಸದಲ್ಲಿ ಹಾಸು ಹೊಕ್ಕಾಗಿದ್ದಾರೆ. ಕ್ರಿ.ಶ.350 ರಿಂದ ಕ್ರಿ.ಶ.999 ರವರೆಗೆ ಈ ನಾಡಿನ ಬಹುಭಾಗವನ್ನು ಆಳಿದ ಗಂಗರು ಹಲವು ವರ್ಷಗಳ ಕಾಲ ಈ ತಾಲ್ಲೂಕಿನ ಮಾಕುಂದವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ್ದಾರೆ. ಅವರಲ್ಲಿ ದಡಿಗ, ಮಾಧವ, ಶ್ರೀಪುರುಷ ಸೇರಿದಂತೆ ಸ್ವತಃ ಸಾಹಿತಿಗಳಾಗಿ ಮೆರೆದಿದ್ದಾರೆ. 16ನೆಯ ಶತಮಾನದಲ್ಲಿ ದಾಸ ಪರಂಪರೆಯು ಹುಟ್ಟಿ ಬೆಳೆದಿದ್ದು ಇಲ್ಲಿಂದಲೇ. ವ್ಯಾಸರಾಜರು, ಶ್ರೀಪಾದರಾಜರು, ದಾಸ ಶ್ರೇಷ್ಠರನೇಕರಿಗೆ ಗುರುಗಳಾಗಿದ್ದುಕೊಂಡು ದಾಸ ಸಾಹಿತ್ಯ ಸೃಷ್ಟಿಯ ಜೊತೆಗೆ, ಆ ಪರಂಪರೆಗೆ ನೀರೆರೆದು ಪೋಷಣೆ ಮಾಡಿರುವುದು ಗಮನಾರ್ಹ. ಪುರಂದರದಾಸರು, ಕನಕದಾಸರು ಈ ನೆಲವನ್ನು ಸ್ಪರ್ಶಿಸಿದ್ದಾರೆ.[5] ಈ ಎಲ್ಲಾ ದೃಷ್ಟಿಕೋನಗಳಿಂದ ಚನ್ನಪಟ್ಟಣದ ಇತಿಹಾಸದ ಅಧ್ಯಯನವು ಆಸಕ್ತಿದಾಯಕವಾಗಿದೆ.

1.2 ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ :

ಪ್ರಸ್ತುತ ಅಧ್ಯಯನಕ್ಕೆ ಐತಿಹಾಸಿಕ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಅಧ್ಯಯನದ ವ್ಯಾಪ್ತಿಯು ಚನ್ನಪಟ್ಟಣ ತಾಲ್ಲೂಕಿಗೆ ಸೀಮಿತವಾಗಿದೆ. ಚನ್ನಪಟ್ಟಣದ ಐತಿಹಾಸಿಕ ಹಿನ್ನೆಲೆಯನ್ನು ಗಮನಿಸಿದಾಗ ಇಲ್ಲಿನ ಇತಿಹಾಸ, ಸಂಸ್ಕೃತಿ, ಪರಂಪರೆಯನ್ನು ಕುರಿತು ಅಧ್ಯಯನ, ಸಂಶೋಧನೆಗಳು ಅಗತ್ಯವಾಗಿವೆ. ಪ್ರಸ್ತುತ ಅಧ್ಯಯನವನ್ನು ಮೈಸೂರು ಸಂಸ್ಥಾನದಲ್ಲಿ ಬೆಳವಣಿಗೆ ಹೊಂದಿ ವ್ಯಾಪಾರ-ವಾಣಿಜ್ಯ ವ್ಯವಹಾರಗಳಲ್ಲಿ ಪ್ರಮುಖ ಸ್ಥಾನ ಹೊಂದಿದ್ದ ಹಾಗೂ ಸಾವಿರಾರು ಜನರಿಗೆ ಉದ್ಯೋಗ ಕಲ್ಪಿಸಿದ್ದ ಕರಕುಶಲ ಕೈಗಾರಿಕೆಗಳ ಮಹತ್ವದ ಬಗ್ಗೆ ಬೆಳಕು ಚೆಲ್ಲುವ ಉದ್ದೇಶದಿಂದ ನಡೆಸಲಾಗಿದೆ. ಅಲ್ಲದೆ ಇಲ್ಲಿನ ಸಂಸ್ಕೃತಿ, ಪರಂಪರೆ, ಸಂಕ್ಷಿಪ್ತ ರಾಜಕೀಯ ಇತಿಹಾಸದ ವಿವಿಧ ಆಯಾಮಗಳನ್ನು ಕುರಿತು ವಿಶ್ಲೇಷಿಸುತ್ತಾ ಕರಕುಶಲತೆಗಳ ಇತಿಹಾಸವನ್ನು ಸಂಶೋಧಿಸುವ ಪ್ರಯತ್ನ ಮಾಡಲಾಗಿದೆ. ಒಂದು ಕಾಲಕ್ಕೆ ವಿದೇಶಿ ವ್ಯಾಪಾರದಲ್ಲಿ ಉತ್ತುಂಗಕ್ಕೇರಿದ ಈ ಕರಕುಶಲ ಕೈಗಾರಿಕೆಗಳು ಇಂದು ಅವಸಾನದತ್ತ ಹೆಜ್ಜೆ ಹಾಕುತ್ತಿರುವುದು ದುರಂತವೇ ಸರಿ. ಈ ಕಲೆಯನ್ನು ಉಳಿಸಿ, ಬೆಳೆಸುವ ಅಗತ್ಯತೆಯನ್ನು ಈ ಅಧ್ಯಯನವು ವ್ಯಕ್ತಪಡಿಸಿದೆ.

ಈ ಅಧ್ಯಯನವು ಪ್ರಮುಖವಾಗಿ ಕರಕುಶಲ ಕೈಗಾರಿಕೆಗಳ ಉಗಮ ಇತಿಹಾಸದ ಬಗ್ಗೆ ತಿಳಿಸುತ್ತದೆ. ಮುಖ್ಯವಾಗಿ ಈ ಉದ್ದಿಮೆಯ ಹುಟ್ಟು ಹೇಗೆ? ಯಾರಿಂದ? ಆಯಿತು. ಅದರ ಹುಟ್ಟುವಿಕೆಗೆ ಪ್ರಮುಖ ಪ್ರೇರಕಾಂಶಗಳು ಯಾವುವು? ಎಂಬೆಲ್ಲಾ ವಿಷಯಗಳ ವಿಶ್ಲೇಷಣೆಯನ್ನು ಒಳಗೊಂಡಿರುತ್ತದೆ. ಹಾಗೆಯೇ ಈ

ಕರಕುಶಲ ಕೈಗಾರಿಕೆಗಳು ಹೇಗೆ ಬೆಳವಣಿಗೆ ಹೊಂದಿದವು, ಉಗಮದಲ್ಲಿನ ಅವುಗಳ ಸ್ಥಿತಿ ಕಾಲಾಂತರದಲ್ಲಿ ಹೇಗೆ ಅಭಿವೃದ್ಧಿಗೊಂಡಿತು, ಅದಕ್ಕೆ ಯಾವ ಸಂಸ್ಥಾನಿಕರ, ರಾಜರ ಆಶ್ರಯ ದೊರೆಯಿತು, ನಂತರದ ದಿನಗಳಲ್ಲಿ ಸರ್ಕಾರ ಈ ಉದ್ದಿಮೆಗಳ ಬೆಳವಣಿಗೆಗೆ ನೀಡಿದ ಸವಲತ್ತುಗಳು, ಎಂಬೆಲ್ಲಾ ವಿಷಯಗಳನ್ನು ಕ್ರೂಢೀಕರಿಸುತ್ತದೆ. ಜೊತೆಗೆ ಈ ಚನ್ನಪಟ್ಟಣದಲ್ಲಿ ಪ್ರಧಾನವಾಗಿ ಕಂಡು ಬರುವ ವೃತ್ತಿ ಪರವರ್ಗಗಳಾವುವು? ಆ ಜನರ ಸ್ಥಿತಿ–ಗತಿಯ ಒಂದು ಸ್ಥೂಲ ಅವಲೋಕನವನ್ನು ಒಳಗೊಂಡಂತೆ ಈ ಕರಕುಶಲ ಉದ್ದಿಮೆಗಳ ವ್ಯಾಪಾರ ವಾಣಿಜ್ಯಗಳ ಕುರಿತು ವಿಷಯವನ್ನೊಳಗೊಂಡಿದೆ.

1.3 ಅಧ್ಯಯನದ ಮಹತ್ವ:

ಚನ್ನಪಟ್ಟಣವು ರಾಮನಗರ ಜಿಲ್ಲೆಯ ವಿಶಿಷ್ಟ ಸಾಂಸ್ಕೃತಿಕ ನಗರವಾಗಿದೆ. ಚನ್ನಪಟ್ಟಣ ತಾಲ್ಲೂಕಿನ ಕರಕುಶಲ ಉದ್ದಿಮೆಗಳಲ್ಲಿ ಮುಖ್ಯವಾಗಿ ಮರದ ಬೊಂಬೆ ತಯಾರಿಕೆ, ರೇಷ್ಮೆ ನೂಲು ತಯಾರಿಕೆ, ಹರಳು ಉದ್ದಿಮೆ ಹಾಗೂ ವೀಣೆ ತಂತಿಗಳ ತಯಾರಿಕಾ ಉದ್ದಿಮೆಗಳನ್ನು ಒಳಗೊಂಡ ಈ ಅಧ್ಯಯನವು ಬಹು ಮಹತ್ವದ್ದು. ಪ್ರಪಂಚದಲ್ಲೇ ಹೆಸರು ಮಾಡಿರುವ ಈ ಮರದ ಬೊಂಬೆಗಳ ತಯಾರಿಕಾ ಉದ್ಯಮವು ಚನ್ನಪಟ್ಟಣದ ಸಾಂಸ್ಕೃತಿಕ ಕೊಡುಗೆಗಳಲ್ಲಿ ಒಂದಾಗಿದೆ. ವಿವಿಧ ಕರಕುಶಲ ಉದ್ದಿಮೆಗಳ ಪರಿಚಯದೊಂದಿಗೆ ಅವುಗಳ ಕೊಡುಗೆಯನ್ನು ವಿವಿಧ ರಾಜ್ಯಗಳ, ದೇಶಗಳ ಜನರಲ್ಲಿ ಬಿತ್ತುವ ಮಹತ್ವವನ್ನೊಂದಿದೆ. ಈ ಅಧ್ಯಯವದಿಂದಾಗಿ ಚನ್ನಪಟ್ಟಣದಾದ್ಯಂತ ಇದ್ದ ಪ್ರಮುಖ ಕರಕುಶಲತೆಗಳು ಅವುಗಳ ಉಗಮ, ಬೆಳವಣಿಗೆ ಕುರಿತಾದ ಮಾಹಿತಿಯ ಲಭ್ಯತೆ ಸಾಧ್ಯವಾಗಿದ್ದು ಅದು ಇಂದಿನ ಜನತೆಗಷ್ಟೇ ಅಲ್ಲದೆ ಅವುಗಳ ಕಂಪನ್ನು ಮುಂದಿನ ಪೀಳಿಗೆಗೂ ಪಸರಿಸಲು ಸಹಕಾರಿಯಾಗಿದೆ. ಅಷ್ಟೆ ಅಲ್ಲದೆ ಇಂದು ಕರಕುಶಲ ಉದ್ದಿಮೆದಾರರ ಕುಶಲಕರ್ಮಿಗಳ ಜೀವನದ ವಸ್ತು ಸ್ಥಿತಿಯನ್ನು ಅಧ್ಯಯಿಸಿ ಅವರಿಗೆ ಸೂಕ್ತ ಸವಲತ್ತುಗಳನ್ನು ಸರ್ಕಾರದ ಕಡೆಯಿಂದ ಕೊಟ್ಟಿದ್ದೇ ಆದರೆ ನಮ್ಮ ಸಂಸ್ಕೃತಿಯು ಹಾಗೆಯೇ ಉಳಿದು ಮುಂದಿನ ಪೀಳಿಗೆಗೂ ಸದ್ಬಳಕೆಯಾಗುತ್ತದೆ. ಕರಕುಶಲತೆಯು ಈ ನಾಡಿನ ಸಂಸ್ಕೃತಿ ಮತ್ತು ಪರಂಪರೆಯ ಪ್ರತಿನಿಧಿಯಾಗಿದೆ.

1.4 ಭೌಗೋಳಿಕ ಪರಿಚಯ:

ರಾಮನಗರ ಜಿಲ್ಲೆಯ ಪಶ್ಚಿಮದ ಒಂದು ತಾಲ್ಲೂಕಾಗಿರುವ ಚನ್ನಪಟ್ಟಣ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿದ್ದು ಬೆಂಗಳೂರಿನ ನೈರುತ್ಯ ದಿಕ್ಕಿಗೆ 60 ಕಿ.ಮೀ. ದೂರದಲ್ಲಿದ್ದರೆ, ಸಾಂಸ್ಕೃತಿಕ ರಾಜಧಾನಿ ಮೈಸೂರಿಗೆ 81 ಕಿ.ಮೀ. ದೂರದಲ್ಲಿದ್ದು ಸಮುದ್ರ ಮಟ್ಟದಿಂದ 670 ಮೀ. ಎತ್ತರದಲ್ಲಿದೆ. ಪಟ್ಟಣದ ಪೂರ್ವ ದಿಕ್ಕಿಗೆ ರಾಮನಗರ, ಪಶ್ಚಿಮಕ್ಕೆ ಮದ್ದೂರು, ಉತ್ತರಕ್ಕೆ ಕುಣಿಗಲ್, ದಕ್ಷಿಣಕ್ಕೆ ಕನಕಪುರ

ತಾಲ್ಲೂಕನ್ನು ಒಳಗೊಂಡಿದೆ. ಭೌಗೋಳಿಕವಾಗಿ ಅಕ್ಷಾಂಶ 12.38^0 ರಿಂದ ಪೂರ್ವ ರೇಖಾಂಶ 77.13^0 ರವರೆಗೆ ವಿಸ್ತರಿಸಿದ್ದು 145 ಹಳ್ಳಿಗಳನ್ನು ಹೊಂದಿದೆ. ತುಮಕೂರು ಜಿಲ್ಲೆಯ ಕುಣಿಗಲ್, ರಾಮನಗರ ಜಿಲ್ಲೆಯ ಕನಕಪುರ, ಮಂಡ್ಯ ಜಿಲ್ಲೆಯ ಮಳವಳ್ಳಿ ಮತ್ತು ಮದ್ದೂರು ತಾಲ್ಲೂಕುಗಳು ಈ ತಾಲ್ಲೂಕನ್ನು ಸುತ್ತುವರಿದಿದೆ. ಕಸಬಾ, ವಿರೂಪಾಕ್ಷಿಪುರ ಮತ್ತು ಮಳೂರು ಇವು ತಾಲ್ಲೂಕಿನ ಹೋಬಳಿ ಕೇಂದ್ರಗಳು. 2001 ರ ಜನಗಣತಿಯ ಪ್ರಕಾರ ಇಲ್ಲಿನ ಜನಸಂಖ್ಯೆ 2,52,574.

ಈ ಪ್ರದೇಶದ ಮೇಲ್ಮೈ ಲಕ್ಷಣಗಳನ್ನು ಗಮನದಲ್ಲಿಟ್ಟುಕೊಂಡು ತಾಲ್ಲೂಕನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು.

1. ಉತ್ತರ ಮತ್ತು ವಾಯುವ್ಯ ಭಾಗಗಳಲ್ಲಿ ಹಲವು ಬೆಟ್ಟಗಳ ಸಾಲಿದ್ದು ಹೆಚ್ಚಾಗಿ ಬೆಂಗಾಡು ಹಾಗೂ ಕುರುಚಲು ಕಾಡುಗಳನ್ನು ಹೊಂದಿರುವ ಪ್ರದೇಶ. ಇಲ್ಲಿ ಕೆರೆಗಳು ಮೊದಲಾದ ನೀರಾವರಿ ಸಾಧನಗಳಾವುವು ಕಂಡು ಬರುವುದಿಲ್ಲ.
2. ದಕ್ಷಿಣ ಮತ್ತು ನೈರುತ್ಯ ಭಾಗಗಳು ಮೈದಾನ ಪ್ರದೇಶವಾಗಿದ್ದು ಜನಭರಿತ ಗ್ರಾಮಗಳು ಹಾಗೂ ಹಲವು ಮುಖ್ಯ ಕೆರೆಗಳಿಂದ ಕೂಡಿದೆ.[6]

ಪಟ್ಟಣದ ಹೃದಯ ಭಾಗಕ್ಕೆ ಕೇವಲ 1½ ಕಿ.ಮೀ. ಅಂತರದಲ್ಲಿ ಕಣ್ವನದಿ ದಕ್ಷಿಣಾಭಿಮುಖವಾಗಿ ಹರಿಯುತ್ತಿದೆ.[7] ತಾಲ್ಲೂಕಿನ ಮುಖ್ಯ ನದಿಯಾದ ಈ ಕಣ್ವ ನದಿಯು ಮಾಗಡಿ ತಾಲ್ಲೂಕಿನ ಶ್ರೀಪತಿಹಳ್ಳಿ ಎಂಬ ಗ್ರಾಮದ ಸಮೀಪದಲ್ಲಿ ಹುಟ್ಟಿ ಉತ್ತರದಿಂದ ದಕ್ಷಿಣಕ್ಕೆ ಹರಿಯುವ ಪ್ರದೇಶ ಸಮುದ್ರ ಮಟ್ಟಕ್ಕಿಂತ ಸುಮಾರು 652 ಕಿ.ಮೀ. ಎತ್ತರದಲ್ಲಿದೆ. ಜಲಾನಯನ ಪ್ರದೇಶ ಸುಮಾರು 215 ಚ.ಕಿ.ಮೀ. ಚನ್ನಪಟ್ಟಣ ತಾಲ್ಲೂಕಿನ ಎಲ್ಲೆಯಿಂದ ಹರಿಯುವ ಈ ನದಿಯ ಭಾಗದ ಉದ್ದ 34 ಕಿ.ಮೀ.[8] ಅಂದಿನ ಮೈಸೂರು ಸಂಸ್ಥಾನದ ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಭಾರತ ರತ್ನ ಸರ್.ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಸಂದರ್ಭದಲ್ಲಿ ವಿಶೇಷ ಆಸಕ್ತಿ ವಹಿಸಿ 1940 ರಲ್ಲಿ ಜಲಾಶಯದ ಕಾಮಗಾರಿ ಆರಂಭವಾಗಿ ಕಣ್ವ ಜಲಾಶಯವನ್ನು ನಿರ್ಮಿಸಲಾಯಿತು.[9] (ಚಿತ್ರ–1). ಕಣ್ವ ನದಿ ತಾಲ್ಲೂಕಿನ ಎಲ್ಲೆಯಿಂದ ಸುಮಾರು ಒಂದು ಕಿ.ಮೀ.ದೂರದಲ್ಲಿ ಸರಗೂರು ಗ್ರಾಮದ ಹತ್ತಿರ ಶಿಂಷಾ ನದಿಯನ್ನು ಸೇರುತ್ತದೆ.[10] ಕಣ್ವ ಜಲಾಶಯವನ್ನು ದಶವಾರ, ಕಣ್ವ ಚಾಮನಹಳ್ಳಿ, ಕ್ಯಾಸಾಪುರ, ಆನಮಾನಹಳ್ಳಿ, ಶ್ಯಾನುಬೋಗನಹಳ್ಳಿ, ಡಣಾಯಕನಪುರ, ಕೃಷ್ಣರಾಜಪುರ, ಗೊಲ್ಲಹಳ್ಳಿದೊಡ್ಡಿ, ಅಂಗರಹಳ್ಳಿ, ಕನ್ನಮಂಗಲ ಮತ್ತು ಎಲೆತೋಟದಹಳ್ಳಿ ಗ್ರಾಮಗಳು ಸುತ್ತುವರಿದಿದೆ ಮತ್ತು ಜಲಾಶಯಕ್ಕೆ ಹೊಂದಿಕೊಂಡಂತೆ ಬೆಟ್ಟದ ತಿಮ್ಮಪ್ಪ ದೇವಾಲಯ, ದೊಡ್ಡಗುಡ್ಡೆ, ಕೃಷಗಿರಿ, ಬೆಟ್ಟವಿದ್ದು ಇಲ್ಲಿ ಪುರಾತನ ಶ್ರೀ ಕೃಷ್ಣನ ದೇವಾಲಯವಿದೆ. ಜಲಾಶಯದ ದಕ್ಷಿಣಕ್ಕೆ ಕಂಬದರಾಯಗುಡ್ಡೆ ಇದ್ದು, ರಾಕ್ಷಿರಾಗಿಕಲ್ಲು, ತಮಟೆ ಕಲ್ಲು, ಹುಲಿಗವಿ ಮತ್ತು ಕಂಬಿ ಬೆಟ್ಟಗಳನ್ನು ಹೊಂದಿ ನಿಸರ್ಗ ಪ್ರಿಯರ ಸ್ವರ್ಗವೆನಿಸಿದೆ.

ಕಣ್ವ ಮಹರ್ಷಿಗಳು ಈ ಭಾಗದಲ್ಲಿ ತಪಸ್ಸು ಮಾಡಿದ್ದರಿಂದ ಈ ಜಾಗಕ್ಕೆ ಕಣ್ವ ಎಂಬ ಹೆಸರು ಬಂದಿದೆ.[11] ಚನ್ನಪಟ್ಟಣದಿಂದ 8ಕಿ.ಮೀ. ದೂರವಿರುವ ಅಬ್ಬೂರಿನ ಬಳಿ ನದಿಗೆ ಅಡ್ಡಲಾಗಿ ಅಣಿಕಟ್ಟುಗಳನ್ನು ಕಟ್ಟಲಾಗಿದೆ. ಇದು 30 ಗ್ರಾಮಗಳ ವ್ಯಾಪ್ತಿಯಲ್ಲಿ 5000 ಎಕರೆ ಭೂಮಿಗೆ ನೀರಾವರಿ ಸೌಕರ್ಯ ಕಲ್ಪಿಸಿ ಇಲ್ಲಿನ ಜನತೆಯ ಜೀವನಾಡಿ ಎನಿಸಿದೆ.

ತಾಲ್ಲೂಕಿನ ಮಣ್ಣು ಸಾಕಷ್ಟು ವೈವಿಧ್ಯಮಯವಾಗಿದ್ದು ವ್ಯವಸಾಯ ಇಲ್ಲಿನ ಜನರ ಮುಖ್ಯ ಕಸುಬಾಗಿದೆ.[12] ಭತ್ತ, ರಾಗಿ, ತೆಂಗು, ಹಿಪ್ಪುನೇರಳೆ, ವೀಳ್ಯೆದೆಲೆ ವಿಶೇಷವಾದ ಬೆಳೆಗಳು. ತೆಂಗು ಮತ್ತು ರೇಷ್ಮೆ ಹಾಗೂ ವೀಳ್ಯೆದೆಲೆ ವಾಣಿಜ್ಯ ಬೆಳೆಗಳು. ಕಬ್ಬು ಪ್ರಮುಖ ಬೆಳೆಯಲ್ಲದಿದ್ದರೂ ಪಟ್ಲು ಗ್ರಾಮದ ಸುತ್ತ ಮುತ್ತ ಬೆಳೆಯುವ 'ಪಟಾವಳಿ'* ಕಬ್ಬು ಸಂಕ್ರಾಂತಿ ಹಬ್ಬದಲ್ಲಿ ಎಲ್ಲರ ಮನಸೆಳೆಯುತ್ತದೆ. ಅಂಬಾಡಹಳ್ಳಿಯ ಸುತ್ತಮುತ್ತ ಬೆಳೆಯುವ 'ದೇವರ ತುಳಸಿ' ಬೆಂಗಳೂರು ನಗರದಲ್ಲಿ ಪ್ರಸಿದ್ಧಿ ಪಡೆದಿದೆ. ಇತ್ತೀಚೆಗೆ ಸೊಪ್ಪು, ತರಕಾರಿಗಳನ್ನು ಸಾಕಷ್ಟು ಬೆಳೆಯಲಾಗುತ್ತಿದೆ. ಡಾ. ಮರೀಗೌಡರ ವಿಶೇಷ ಕಳಕಳಿಯಿಂದ ಬೈರಾಪಟ್ಟಣದ ದೊಂಬರ ಕೊಡುಗೆ ತೋಟಗಾರಿಕೆ ಇಲಾಖೆಗೆ ಸೇರಿ ಸೀಬೆ, ಸಪೋಟ ಸಮೃದ್ಧವಾಗಿ ಬೆಳೆಯುತ್ತಿದೆ.[13]

ತಾಲ್ಲೂಕು ರೇಷ್ಮೆ ಬೆಳೆ ಬೆಳೆಯುವುದಕ್ಕೂ, ರೇಷ್ಮೆ ಕೈಗಾರಿಕೆಗೂ ಪ್ರಸಿದ್ಧಿ ಹೊಂದಿದೆ. ಮೃದುವಾದ ಹಾಲೆಮರ ಹೆಚ್ಚಾಗಿ ದೊರಕುವುದರಿಂದ ಬಣ್ಣದ ಸಾಮಾನುಗಳು, ಕೈಗಾರಿಕೆಗಳು ಅಭಿವೃದ್ಧಿ ಹೊಂದಿದೆಯಲ್ಲದೆ ಅಮೇರಿಕಾ, ಹಾಲೆಂಡ್, ಡೆನ್ಮಾರ್ಕ್, ಜಪಾನ್, ಚೀನಾ, ಜರ್ಮನ್ ಮುಂತಾದ ರಾಷ್ಟ್ರಗಳಿಗೆ ಬಣ್ಣದ ಸಾಮಾನುಗಳನ್ನು ರಫ್ತು ಮಾಡುತ್ತಿದೆ. ಒಟ್ಟಾರೆ ಜನರ ಆರ್ಥಿಕ ಮತ್ತು ಸಾಂಸ್ಕೃತಿಕ ಬದುಕಿನ ಮೇಲೆ ಇಲ್ಲಿನ ಭೌಗೋಳಿಕ ಲಕ್ಷಣಗಳು ಮಹತ್ವದ ಪಾತ್ರ ವಹಿಸಿದೆಯೆನ್ನಬಹುದು.

ಚನ್ನಪಟ್ಟಣ ಪ್ರಸಿದ್ಧ ವ್ಯಾಪಾರ ಮತ್ತು ವಾಣಿಜ್ಯಕೇಂದ್ರವಾಗಿದೆ. ಕೋಡಂಬಳ್ಳಿ, ಹೊಂಗನೂರು, ಕೂಡ್ಲೂರು, ಸಿಂಗರಾಜಿಪುರ, ಮಳೂರುಪಟ್ಟಣ, ಚಿಕ್ಕಮಳೂರು, ಮಾಕಳಿ, ದಶವಾರ, ನಾಗವಾರ, ತಿಟ್ಟಮಾರನಹಳ್ಳಿ ತಾಲ್ಲೂಕಿನ ಪ್ರಮುಖ ಊರುಗಳಾಗಿವೆ. ಚನ್ನಪಟ್ಟಣದಿಂದ ಹೊಂಗನೂರು ಮಾರ್ಗವಾಗಿ ಸಾತನೂರು, ಹಲಗೂರು, ಇಗ್ಗಲೂರಿಗೆ ಹಾಗೂ ಕೂಡ್ಲೂರು, ಗರಕಳ್ಳಿ, ದಶವಾರ, ಮಾಕಳಿಗಳಿಗೆ ಪ್ರಮುಖ ರಸ್ತೆ ಸಂಪರ್ಕವಿದ್ದು ಇವು ಕುಣಿಗಲ್ ಹುಲಿಯೂರು ದುರ್ಗಗಳಿಗೆ ಸಂಪರ್ಕ ಕಲ್ಪಿಸುತ್ತವೆ.

---

* ಪಟಾವಳಿ : ಇದು ಕಬ್ಬಿನ ಒಂದು ತಳಿಯಾಗಿದ್ದು, ಬಹು ಮೃದು ಕಬ್ಬಾಗಿದ್ದು ಇದರ ಮೇಲೆ ಪಟ್ಟೆಗಳಿರುವುದರಿಂದ ಇದನ್ನು ಪಟಾವಳಿ ಕಬ್ಬು ಎಂದೇ ಕರೆಯಲಾಗುತ್ತದೆ.

1.5 ಚಾರಿತ್ರಿಕ ಹಿನ್ನಲೆ :

ಚನ್ನಪಟ್ಟಣ ತಾಲ್ಲೂಕು ಚಾರಿತ್ರಿಕ ವಿಶಿಷ್ಟತೆ ಮೆರೆದಿದೆ ಕವಿಯೊಬ್ಬರು ವರ್ಣಿಸಿರುವಂತೆ –

> "ಭುವನ ಜನ ಮೋಹಿತಮಾದಿ ಪುರಿಯು ಕೃತಯುಗದ ವಿಜಯಪಾಲ ತ್ರೇತೆಯ ಕಣ್ವ, ಮೇಣ್
> ದ್ವಾಪರದ ಲಂಬ ಕರ್ಣ ಕಲಿಯೆ ಯಜ್ಞವಲ್ಕ್ಯ ಸ್ಮೃತಿಯ ಭಾಷ್ಯ
> ಕಾರ ಶ್ರೀ ವಿಜ್ಞಾನೇಶ್ವರ ಮಹಾರಾಜರ ನಿವಾಸ ಸ್ಥಾನ
> ಮೆನಿಸಿ ಪಂಚಕೋಶ ಚತುರ್ವೇದಪುರ ಜ್ಞಾನ ಮಂಟಪ ತೆಂಕಣ
> ದಯೋಧ್ಯೆತ್ಯಾದಿ ನಾಮಗಳಿಂ ರಂಜಿಸಿ ವ್ಯಾಸತೀರ್ಥರ
> ಕಾಲದ ಚೆಂದಪಟ್ಟಣ ಪೆಸರ್ವೆರೆದು ಅತಿ ಪ್ರಾಚೀನವತಿ ಅಂದಮಾಗಿರ್ದು ಕಂಗೊಳಿಸುತಿಹುದು"

ಪೌರಾಣಿಕ ಪ್ರಸಿದ್ಧಿಯನ್ನು ಪಡೆದಿರುವ ಈ ಚನ್ನಪಟ್ಟಣದ ಚಾರಿತ್ರಿಕ ಹಿನ್ನಲೆಯನ್ನು ತಿಳಿದುಕೊಳ್ಳಲು ನಮಗಿರುವ ಮುಖ್ಯ ಆಕರಗಳೆಂದರೆ, ಶಾಸನಗಳು, ಇಂಗ್ಲೀಷ್ ಮತ್ತು ಮರಾಠ ದಾಖಲೆಗಳು, ಅಲ್ಪಸ್ವಲ್ಪ ಸಿಗುವ ಸಾಹಿತ್ಯಕ ದಾಖಲೆಗಳು ಹಾಗೂ ಇಲ್ಲಿನ ಪ್ರಾಚೀನ ಸ್ಮಾರಕ ಮತ್ತು ಜಾನಪದ ಕಥಾನಕಗಳು.

ಚನ್ನಪಟ್ಟಣ ಹಲವಾರು ಹೆಸರುಗಳಿಂದ ವರ್ಣಿಸಲ್ಪಟ್ಟಿದೆ. 'ಚಂದಪಟ್ಟಣ' ವೆಂದು ವ್ಯಾಸತೀರ್ಥರ ಕಾಲದಲ್ಲಿ ತನ್ನ ಆವರಣ ಸೌಂದರ್ಯದಿಂದ ಪ್ರಖ್ಯಾತವಾಗಿದ್ದು, 'ಚಂದಾಪುರ', 'ಪಂಚಕೋಶ ಚತುರ್ವೇದಪುರ', 'ಜ್ಞಾನ ಮಂಟಪ ಕ್ಷೇತ್ರ', ' ತೆಂಕಣ ಅಯೋಧ್ಯಾ' ಎಂಬ ವಿವಿಧ ಹೆಸರುಗಳಿಂದ ವರ್ಣಿಸಲ್ಪಟ್ಟಿದೆ.[14] 1800ರ ಜುಲೈ ತಿಂಗಳಲ್ಲಿ ಬೆಂಗಳೂರು ಜಿಲ್ಲೆಯನ್ನು ಸಂದರ್ಶಿಸಿದ ಬ್ರಿಟೀಷ್ ಅಧಿಕಾರಿ ಡಾ.ಫ್ರಾನ್ಸಿಸ್ ಬುಕನಾನ್ ಇದನ್ನು "A very beautiful Country" ಎಂದು ವರ್ಣಿಸಿ ಚಿನಪಟಂ ತೆಂಗು, ಅಡಿಕೆ, ಕಬ್ಬು, ಬಾಳೆ, ತೋಟಗಳಿಂದ, ಇಲ್ಲಿನ ಹಸಿರು ಗದ್ದೆಗಳಿಂದ ಕಂಗೊಳಿಸುತ್ತದೆ ಎಂದಿದ್ದಾನೆ.[15] ಹೀಗೆ ಭಿನ್ನ ಭಿನ್ನ ಹೆಸರುಗಳಿಂದ ಕರೆಯಲ್ಪಡುತ್ತಿದ್ದು, ಕಣ್ವ ನದಿಯ ಇಕ್ಕೆಲಗಳಲ್ಲಿ ಹಸಿರು ಸಿರಿಯೇ ಮೈವೆತ್ತಂತಿರುವ ತೆಂಗು, ತಾಲ್ಲೂಕಿನ ಒಳಭಾಗದಲ್ಲಿ ಕಣ್ವ ಜಲಾಶಯದ ನೀರಿನಿಂದ ಬೆಳೆಯುವ ಭತ್ತ, ರಾಗಿ, ಕಬ್ಬು, ರೇಷ್ಮೆ, ವೀಳ್ಯದೆಲೆ ಮುಂತಾದವುಗಳಿಂದ ಚಂದಾಗಿ ಕಾಣುತ್ತಿದ್ದು ಕಾರಣ 'ಚಂದಪಟ್ಟಣ'ವೆಂದು ಹೆಸರಿದ್ದು ಕಾಲಾಂತರದಲ್ಲಿ ಚನ್ನಪಟ್ಟಣವಾಗಿರಬೇಕೆಂದು ಊಹಿಸಲಾಗುತ್ತದೆ.[16]

1.5.1 ಚನ್ನಪಟ್ಟಣದ ಶಾಸನಗಳು:

ರಾಮನಗರ ಜಿಲ್ಲೆಯಲ್ಲಿ ಗಂಗರ ಕಾಲದಿಂದಲೂ ಅತ್ಯುಪಯುಕ್ತವಾದಂತಹ ದಾಖಲೆಗಳು ವಿಪುಲವಾಗಿ ದೊರೆತು ಜಿಲ್ಲೆಯ ಇತಿಹಾಸವನ್ನು ತಿಳಿಯಲು ಅತ್ಯಂತ ಸಹಕಾರಿಯಾಗಿವೆ.[17] ಅವುಗಳ ಪ್ರಕಾರ ಗಂಗರ ಕಾಲದಲ್ಲಿ ಚನ್ನಪಟ್ಟಣ ಪ್ರಸಿದ್ಧಿಗೆ ಬಂದಿತು. ಗಂಗರ ಕಾಲದಲ್ಲಿ ಗಂಗಾವಾಡಿ 96000 ಪ್ರದೇಶದಲ್ಲಿ,

ಶಿಂಷಾಕಣಿವೆಯನ್ನು 'ಚಿಕ್ಕಗಂಗವಾಡಿ' ಎಂದು ಕರೆಯುತ್ತಿದ್ದರು. ಹೊಂಗನೂರು ಅದರ ಉಪರಾಜಧಾನಿಯಾಗಿಯೂ ಮಾಕುಂದ ರಾಜಧಾನಿಯಾಗಿಯೂ ಪ್ರಸಿದ್ಧಿಗೆ ಬಂದವು.

ಗಂಗ ದೊರೆ ಭೂ ವಿಕ್ರಮ ಮತ್ತು ಶ್ರೀಪುರುಷರ ಕಾಲದಲ್ಲಿ ಚನ್ನಪಟ್ಟಣ ಆರ್ಥಿಕ ಮತ್ತು ಸೈನಿಕ ದೃಷ್ಟಿಯಿಂದಲೂ ಆಯಕಟ್ಟಿನ ಸ್ಥಳವಾಗಿತ್ತು. ಆ ಕಾರಣದಿಂದಲೇ ಮಾಕುಂದ ಅದರ ರಾಜಧಾನಿಯಾಗಿರಬೇಕು. ಚೋಳ ಮತ್ತು ಚಾಲುಕ್ಯರ ಆಕ್ರಮಣಗಳಿಂದ ರಕ್ಷಿಸಿಕೊಳ್ಳುವ ಉದ್ದೇಶವಿದ್ದಿರಬೇಕು. ಮುಂದೆ ಈ ಸ್ಥಳ ಚೋಳರ ಆಕ್ರಮಣಗಳಿಗೆ ತುತ್ತಾಗಿ ಚೋಳರಿಂದ ಕೆಲವಾರು ವರ್ಷ ಆಳ್ವಿಕೆಗೊಳಪಟ್ಟಿತು. ಇದೇ ಅವಧಿಯಲ್ಲಿ ಮಳೂರು, ಮಳೂರು ಪಟ್ಟಣ, ಅಬ್ಬೂರು, ಕುಡ್ಲೂರು, ಬ್ರಹ್ಮಣೀಪುರ ಇತರೆ ಸ್ಥಳಗಳು ವ್ಯಾಪಾರ ಮತ್ತು ಧಾರ್ಮಿಕ ಕೇಂದ್ರಗಳಾಗಿ ಪ್ರಸಿದ್ಧಿಗೆ ಬಂದವು. ಗಂಗರು ತಮ್ಮ ಆಡಳಿತಾವಧಿಯಲ್ಲಿ ಚನ್ನಪಟ್ಟಣ ತಾಲ್ಲೂಕಿನ ಮಳೂರು ಪಟ್ಟಣ. ಕೂಡ್ಲೂರು ಹಾಗೂ ಬೇವೂರುಗಳಲ್ಲಿ ದೇವಾಲಯ, ಬಸದಿಗಳು ಹಾಗೂ ಕೆಲವು ಶಿಲಾ ಪ್ರತಿಮೆಗಳನ್ನು ಪ್ರತಿಷ್ಠಾಪಿಸಿ ತಮ್ಮ ಹೆಸರನ್ನು ಉಳಿಸಿ ಹೋಗಿದ್ದಾರೆ.

ಗಂಗರ ಕಾಲದ ಮಾಕುಂದ ರಾಜಧಾನಿಯಾಗಿತ್ತಲ್ಲದೆ "ಕಿಲಾಲೈನಾಡು"ವಿನ ಮುಖ್ಯ ಕೇಂದ್ರ ಸ್ಥಳವಾಗಿತ್ತು. ಚೋಳರ ಕಾಲದಲ್ಲಿ ಇದನ್ನು ಜಯಗೊಂಡ 'ಚೋಳಪುರಂ' ಎಂದು ಹೆಸರಿಸಿದರು. ಮೊಗೇನಹಳ್ಳಿಯ ಕ್ರಿ.ಶ.1000ದ ಶಾಸನದಲ್ಲಿ ಉಲ್ಲೇಖಿತವಾಗಿರುವಂತೆ 'ಪುಂಗನೂರು ಅಗ್ರಹಾರ' ಅಸ್ತಿತ್ವಕ್ಕೆ ಬಂದಿತು. ಇದನ್ನು ರಾಜರಾಜನ ಹೆಂಡತಿಯ ಹೆಸರಿನಲ್ಲಿ "ತ್ರೈಲೋಕ್ಯ ಮಹಾದೇವಿ ಚತುರ್ವೇದಿ ಮಂಗಳಂ" ಎಂದು ಕರೆಯಲಾಯಿತು. ಕ್ರಿ.ಶ.1007 ರಲ್ಲಿ "ಮಳೂರುಪಟ್ಟಣ" ಅಗ್ರಹಾರ ಸ್ಥಾಪಿತವಾಯಿತು. ಇದನ್ನು ರಾಜರಾಜ ಚೋಳನು ಸ್ಥಾಪಿಸಿ 'ಜಯದೊಂಡ ಚೋಳ ವಿನ್ನಾಗರ್' ಎಂದು ಕರೆದನು. ಇದೇ ಅವಧಿಯಲ್ಲಿ ಮಳೂರಿನ ಅಗ್ರಹಾರ 'ರಾಜರಾಜ ಚತುರ್ವೇದಿ ಮಂಗಲಂ" ಎಂಬ ಹೆಸರಿನಿಂದ ಪ್ರಸಿದ್ಧಿಗೆ ಬಂದಿತು. ಕ್ರಿ.ಶ.1030ರ ತಾಮ್ರ ಶಾಸನದಲ್ಲಿ ಕೂಡ್ಲೂರು ಅಗ್ರಹಾರ ರಾಜರಾಜ ಚೋಳನ ಹೆಸರಿನಲ್ಲಿ ಸ್ಥಾಪಿಸಲಾಯಿತು.

ಚನ್ನಪಟ್ಟಣ ತಾಲ್ಲೂಕಿನಲ್ಲಿ ಚೋಳ ದೊರೆಗಳು ಪ್ರಾಬಲ್ಯಗೊಂಡಂತೆ ಅಗ್ರಹಾರಗಳನ್ನು ಸ್ಥಾಪಿಸುವ ಮೂಲಕ ವೈಷ್ಣವ ಮತವನ್ನು ಮತ್ತಷ್ಟು ಬಲಿಷ್ಠಗೊಳಿಸಿದರು. ಆಳ್ವಾರರು ತಮಿಳುನಾಡಿನಿಂದ ಬಂದು ಇಲ್ಲಿ ನೆಲೆಸಿದ ವಿಚಾರ ಇದರಿಂದ ವೇದ್ಯವಾಗುತ್ತದೆ. ಮಳೂರು ಪಟ್ಟಣದ ನಾರಾಯಣ ಸ್ವಾಮಿ ದೇವಸ್ಥಾನ, ಮಳೂರಿನ ಅಪ್ರಮೇಯ ಸ್ವಾಮಿ ದೇವಸ್ಥಾನ ಇದೇ ಅವಧಿಯಲ್ಲಿ ನಿರ್ಮಾಣಗೊಂಡವು (ಚಿತ್ರ-2).

ಕ್ರಿ.ಶ.1018ರಲ್ಲಿ ರಾಜೇಂದ್ರ ಚೋಳನು ಹೊಂಗನೂರಿಗೆ ಭೇಟಿಕೊಟ್ಟು ಸ್ವಲ್ಪಕಾಲ ತಂಗಿದ್ದ ವಿಚಾರವನ್ನು ಹೊಂಗನೂರಿನ ಶಾಸನವೊಂದು ಉಲ್ಲೇಖಿಸುತ್ತದೆ. ಪುಂಗನೂರಿನ ಕುಂದೈ ವನ್ನಾಗರ್ ಅಳ್ವಾರ್ ದೇವರಿಗೆ ದಾನ ಬಿಟ್ಟ ಸಂಗತಿಯನ್ನು ಇದೇ ಶಾಸನ ತಿಳಿಸುತ್ತದೆ. ರಾಜ ರಾಜ ಚೋಳನು ಮಳೂರು ಪಟ್ಟಣದ ನಾರಾಯಣ ಸ್ವಾಮಿ ದೇವಾಲಯಕ್ಕೆ ದತ್ತಿದಾನ ಮಾಡಿದ ವಿಚಾರವನ್ನು ಮೊಗೇನಹಳ್ಳಿಯ ಶಾಸನ ಉಲ್ಲೇಖಿಸುತ್ತದೆ. ಕ್ರಿ.ಶ.1044–54 ರವರೆಗೆ ಆಳ್ವಿಕೆ ನಡೆಸಿದ ರಾಜಾಧಿರಾಜ ಮತ್ತು ಅನಂತರ ಅಧಿಕಾರಕ್ಕೆ ಬಂದ ಚೋಳರಾಜ ವೀರರಾಜೇಂದ್ರರು ಸಿದ್ದೇಶ್ವರ ಮತ್ತು ಕೈಲಾಸೇಶ್ವರ ದೇವಸ್ಥಾನಕ್ಕೆ ದತ್ತಿ ಬಿಟ್ಟ ವಿಚಾರವನ್ನು ಬ್ಯಾಡರಹಳ್ಳಿ ಶಾಸನ ಉಲ್ಲೇಖಿಸುತ್ತದೆ.[18]

ಚೋಳರ ನಂತರ ಚನ್ನಪಟ್ಟಣ ಹೊಯ್ಸಳ ಮತ್ತು ವಿಜಯನಗರದರಸರ ಆಳ್ವಿಕೆಗೆ ಒಳಪಟ್ಟಿತು. ಹೊಂಗನೂರು ಗ್ರಾಮದ ಒಂದು ಶಾಸನದಲ್ಲಿ ಪ್ರಧಾನಿ ಮಲ್ಲಿದೇವ ದಣ್ಣಾಯಕನು ಹೊಸಗುಂದದ ಕೋಟೆಯ ಮೇಲೆ ದಾಳಿ ಮಾಡಿದಾಗ ಕನಕ ನಾಯಕನೆಂಬ ಸೈನಿಕನೊಬ್ಬನು ಹೋರಾಡಿ ಮಡಿದ ಬಗ್ಗೆ ಉಲ್ಲೇಖವಿದೆ. ಹೊನ್ನಾಯಕನಹಳ್ಳಿಯ ಒಂದು ಶಾಸನವು ವೀರ ಬಲ್ಲಾಳನ ಸೇನಾಧಿಪತಿಯಾದ ನಂಬಿಯಾಡನ್ ಎಂಬುವನು ಮಹದೇವ ದೇವಾಲಯಕ್ಕೆ ಕೊಟ್ಟ ದಾನದ ಬಗ್ಗೆ ವಿವರಿಸುತ್ತದೆ. ಚನ್ನಪಟ್ಟಣ ತಾಲ್ಲೂಕಿನ ಬ್ಯಾಡರಹಳ್ಳಿ ಗ್ರಾಮದ ಒಂದು ಶಾಸನವು ಬಲ್ಲಾಳನು ಸ್ಥಾಪಿಸಿದ ಒಂದು ಅಗ್ರಹಾರವನ್ನು ಕುರಿತು ವಿವರಿಸುತ್ತದೆ.[19]

ಚನ್ನಪಟ್ಟಣ ತಾಲ್ಲೂಕಿನ ಮಳೂರು ಪಟ್ಟಣದ ಒಂದು ಶಾಸನವು ವೀರ ಪ್ರತಾಪ ದೇವರಾಯನ ಆಳ್ವಿಕೆಯ ಕಾಲದಲ್ಲಿ ಕೆಳಲೆನಾಡ ಮಹಾಪ್ರಭು ಕಿಟ್ಟಿಗೌಡ ಮತ್ತು ಅವನ ಮಗ ಮಂಚಪ್ಪಗೌಡ ಕ್ರಿ.ಶ.1414ರಲ್ಲಿ ಮಳೂರು ಪಟ್ಟಣವನ್ನು ತನ್ನ ಕೇಂದ್ರವನ್ನಾಗಿ ಮಾಡಿಕೊಂಡಿದ್ದನು. ಕ್ರಿ.ಶ.1416ರ ಮಾಕಳಿ ಶಾಸನವು ತಾಳಗೌಡ ಎಂಬುವವನು ಕೆರೆಯೊಂದನ್ನು ಕಟ್ಟಿಸಿ ದತ್ತಿ ಬಿಟ್ಟ ವಿಚಾರವನ್ನು ಉಲ್ಲೇಖಿಸಿದೆ.[20] ಚಕ್ಕೆರೆ ಗ್ರಾಮದ ಒಂದು ಶಾಸನವು ಅಚ್ಯುತರಾಯನ ಆಳ್ವಿಕೆಯ ಕಾಲದಲ್ಲಿ ತಿರುಮಲ ದೇವರ ಗುಡಿಯನ್ನು ಜೀರ್ಣೋದ್ಧಾರ ಮಾಡಿ ಕೆಲವು ದಾನಗಳನ್ನು ನೀಡಲಾಯಿತು ಎಂದು ದಾಖಲಿಸಿದೆ.[21]

ಕ್ರಿ.ಶ.1565ರಲ್ಲಿ ತಾಳಿಕೋಟೆ ಕದನದಲ್ಲಿ ವಿಜಯನಗರ ಸಾಮ್ರಾಜ್ಯವು ಸಂಪೂರ್ಣ ಪತನವಾಯಿತು. ಅಳಿಯ ರಾಮರಾಯನು ಮರಣಿಸಿದನು. ಅವನ ಸಹೋದರರಾದ ತಿರುಮಲ ಮತ್ತು ವೆಂಕಟರು ಪೆನುಗೊಂಡೆಗೆ ಪಲಾಯನ ಮಾಡಿ ಅಲ್ಲಿಂದಲೇ ರಾಜ್ಯವನ್ನಾಳುತ್ತಿದ್ದರು. ಚನ್ನಪಟ್ಟಣ ತಾಲ್ಲೂಕಿನ ಮಳೂರು ಪಟ್ಟಣದ ಒಂದು ಶಾಸನವು ತಿರುಮಲರಾಯನ ಆಳ್ವಿಕೆಯ ಕಾಲದಲ್ಲಿ ದಣ್ಣಾಯಕ ನರಸಪ್ಪಯ್ಯನ ಅಧಿಕಾರಿಯಾದ ಹಂಪರಸಯ್ಯನವರು ಮಳೂರು ಅಪ್ಪಣ್ಣ ಹೆಬ್ಬಾರ, ತಿಮ್ಮಣ್ಣ ಹೆಬ್ಬಾರ ಮುಂತಾದ ಬ್ರಾಹ್ಮಣರಿಗೆ ಕೊಟ್ಟ ದಾನದ ಬಗ್ಗೆ ಉಲ್ಲೇಖಿಸುತ್ತದೆ.[22]

ವಿಜಯನಗರದ ಪತನಾನಂತರ ದಕ್ಷಿಣ ಕರ್ನಾಟಕದಲ್ಲಿ ತಲೆ ಎತ್ತಿದ ಮೈಸೂರಿನ ಒಡೆಯರು ಕ್ರಮೇಣ ಪ್ರಬಲವಾಗಿ ಸಮಕಾಲೀನ ಅರಸರಲ್ಲಿ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದ ಇವರು ಕ್ರಿ.ಶ.1629ರಲ್ಲಿ ಐದನೆಯ ಚಾಮರಾಜ ಒಡೆಯರ್‌ರವರು ದೇವನಹಳ್ಳಿ ಮತ್ತು ಚನ್ನಪಟ್ಟಣವನ್ನು ಆಕ್ರಮಿಸುವುದರೊಂದಿಗೆ ಈ ಜಿಲ್ಲೆಯೊಡನೆ ಒಡೆಯರ ಸಂಬಂಧ ಪ್ರಾರಂಭವಾಯಿತು. ಮೈಸೂರಿನ ಪ್ರಾರಂಭದ ಅರಸರಲೆಲ್ಲಾ ಅತ್ಯಂತ ಪರಾಕ್ರಮಿಗಳೆಂದು ಪ್ರಸಿದ್ಧರಾದ ಶ್ರೀ ಕಂಠೀರವ ನರಸರಾಜ ಒಡೆಯರ್ ಅವರ ಒಂದು ಶಾಸನವು ಚನ್ನಪಟ್ಟಣ ತಾಲ್ಲೂಕಿನ ಬ್ಯಾಲಕುಳಿ ಗ್ರಾಮವನ್ನು ದತ್ತಿಯಾಗಿ ಕೊಟ್ಟಿದ್ದನ್ನು ದಾಖಲಿಸಿದೆ. ಗರಕಹಳ್ಳಿ ಗ್ರಾಮದ ಶಾಸನವೊಂದು ದೊಡ್ಡ ದೇವರಾಜ ಒಡೆಯರ್ ಅವರು ತಮ್ಮ ತಂದೆ ದೇವರಾಜ ಒಡೆಯರ್ ಅವರ ಹೆಸರಿನಲ್ಲಿ ಒಂದು ಅಗ್ರಹಾರವನ್ನು ನಿರ್ಮಿಸಿ ಬ್ರಾಹ್ಮಣರಿಗೆ ಅದನ್ನು ದಾನವಾಗಿ ನೀಡಿದ ಬಗ್ಗೆ ವಿವರಗಳನ್ನು ನೀಡುತ್ತದೆ. ಕ್ರಿ.ಶ.1734ರಲ್ಲಿ ಅಧಿಕಾರಾರೂಢರಾದ ಚಿಕ್ಕಕೃಷ್ಣರಾಜ ಒಡೆಯರ ಆಳ್ವಿಕೆಯ ಕಾಲದಲ್ಲಿ ದಳವಾಯಿ ದೇವರಾಜಯ್ಯನು ಆರ್ಕಾಟಿನ ನವಾಬರೊಡನೆ ಯುದ್ಧ ಮಾಡಬೇಕಾಯಿತು. ನವಾಬನ ಸೈನ್ಯವು ಕ್ರಿ.ಶ. 1734 ರಲ್ಲಿ ಚಿಕ್ಕಬಳ್ಳಾಪುರ, ಹೊಸಕೋಟೆ ಮತ್ತು ಬೆಂಗಳೂರುಗಳನ್ನು ಲೂಟಿ ಮಾಡಿದರೂ ದಳವಾಯಿ ದೇವರಾಜನ ಸೈನ್ಯವು ನವಾಬನ ಸೇನೆಯನ್ನು ಚನ್ನಪಟ್ಟಣದ ಬಳಿ ಇರುವ ಕೈಲಂಚ ಎಂಬ ಗ್ರಾಮದ ಬಳಿ ನಡೆದ ನಿರ್ಣಾಯಕವಾದ ಯುದ್ಧದಲ್ಲಿ ಸೋಲಿಸಿತು.[23]

1.5.2 ಚನ್ನಪಟ್ಟಣದ ಪಾಳೆಯಗಾರರು :

ಚನ್ನಪಟ್ಟಣವನ್ನು ತಮ್ಮ ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡು ಆಳಿದವರಲ್ಲಿ ಚನ್ನಪಟ್ಟಣದ ಪಾಳೆಯಗಾರರೆ ಪ್ರಮುಖರು. 16–17ನೇ ಶತಮಾನದಲ್ಲಿ ಪೆನುಗೊಂಡೆಯ ವಿಜಯನಗರದ ಸಂತಿಯವರ ಸಾಮಂತರಾಗಿ ಚನ್ನಪಟ್ಟಣದಿಂದ ಆಳಿದ ಪಾಳೆಯಗಾರರು ಮೂಲತಃ ಇವರು ಬಾರಾಮಹಲ್ ಪ್ರದೇಶಕ್ಕೆ ಸೇರಿದವರು. ತೆಲಗು ಬಣಜಿಗ ಕುಲದವರು. ಈ ವಂಶದ ಯಶಸ್ಸು ಹಾಗೂ ಪ್ರಭಾವವನ್ನು ಹೆಚ್ಚಿಸಲು ಕಾರಣನಾದವನು 1ನೇ ಜಗದೇವರಾಯ.

1ನೇ ಜಗದೇವರಾಯ ಪೆನುಗೊಂಡೆಯಲ್ಲಿ ಆಳುತ್ತಿದ್ದು ಅರವೀಡು ಮನೆತನದ ತಿಮ್ಮರಾಜನ ಮಾವ. ಕ್ರಿ.ಶ.1577 ರಲ್ಲಿ ಬಿಜಾಪುರ ಮತ್ತು ಅಹಮದ್ ನಗರದ ಸುಲ್ತಾನರು ಪೆನುಗೊಂಡೆಯನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿರಲು ತಿಮ್ಮರಾಜ ತನ್ನ ರಾಜಧಾನಿಯನ್ನು ಚಂದ್ರಗಿರಿಗೆ ವರ್ಗಾಯಿಸಿದ್ದ. ಇದರಿಂದಾಗಿ ಆಕ್ರಮಣವನ್ನು ಎದುರಿಸುವ ಜವಾಬ್ದಾರಿ ಜಗದೇವರಾಯನ ಪಾಲಿಗೆ ಬಂತು. ಹುಟ್ಟು ಸಾಹಸಿಯೂ ವೀರ ಯೋಧನೂ ಆದ ಜಗದೇವರಾಯ ಬಿಜಾಪುರದ ಸೇನೆಯನ್ನು ಹಿಮ್ಮೆಟ್ಟಿಸಿ ಪೆನುಗೊಂಡೆಯನ್ನು ವಿಪತ್ತಿನಿಂದ ಪಾರು ಮಾಡಿದ. ಇದರಿಂದ ಸಂತೋಷಗೊಂಡ ತಿಮ್ಮರಾಜ 9 ಲಕ್ಷ ಪಗೋಡಗಳ ವರಮಾನವುಳ್ಳ ದೊಡ್ಡ ಜಿಲ್ಲೆಯೊಂದನ್ನು

ಜಗದೇವರಾಯನಿಗೆ ಕೊಟ್ಟ. ಈ ಪ್ರದೇಶ ಬಾರಾಮಹಲಿನಿಂದ ಪಶ್ಚಿಮ ಘಟ್ಟಗಳವರೆಗೆ ವ್ಯಾಪಿಸಿದ್ದು ಮುಳಬಾಗಿಲು, ಪಿರಿಯಾಪಟ್ಟಣ, ಕಾನಕಾನಹಳ್ಳಿ ಮತ್ತು ಬೂದಿಹಾಳು ಇವು ಸೇರಿದ್ದವು. ಹೊಸದಾಗಿ ಪಡೆದ ಈ ದೊಡ್ಡ ರಾಜ್ಯ ವ್ಯವಸ್ಥೆಗೆ ಅನುಕೂಲವಾಗಲು ಈ ಪ್ರದೇಶದ ಕೇಂದ್ರದಲ್ಲಿದ್ದ ಚನ್ನಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಅಲ್ಲಿ ಕೋಟೆಯನ್ನು ಕಟ್ಟಿಸಿದ. ಅಂದಿನಿಂದ ಈ ಮನೆತನದ ಪಾಳೆಯಗಾರರಿಗೆ ಚನ್ನಪಟ್ಟಣದ ಪಾಳೆಯಗಾರರು ಎಂದು ಹೆಸರಾಯಿತು.

ಜಗದೇವರಾಯ 15 ವರ್ಷಗಳ ತನ್ನ ಆಳ್ವಿಕೆಯ ಅವಧಿಯಲ್ಲಿ ಚನ್ನಪಟ್ಟಣ ರಾಜ್ಯಕ್ಕೆ ಒಂದು ರೂಪವನ್ನು ತಂದು ಕೊಟ್ಟ. ಕೆಲವು ಗ್ರಾಂಥಿಕ ಮೂಲಗಳಲ್ಲಿ ಈ ವಂಶದವರ ಅನುಕ್ರಮವನ್ನು ಹೀಗೆ ಸೂಚಿಸಲಾಗಿದೆ. ರಾಣೋಜಿರಾಯ, 2ನೆಯ ಜಗದೇವರಾಯ (ಆಳ್ವಿಕೆ 15 ವರ್ಷ), 3ನೇ ಜಗದೇವರಾಯ (ಆಳ್ವಿಕೆ 8 ವರ್ಷ) ಕುಮಾರ ಜಗದೇವರಾಯ (ಆಳ್ವಿಕೆ 7 ವರ್ಷ) ಮತ್ತು ಅಂಕುಶರಾಯ (ಆಳ್ವಿಕೆ 16 ವರ್ಷ). ಕ್ರಿ.ಶ. 1623 ಕ್ಕೆ ಸೇರಿದ ಒಂದು ಶಾಸನದಲ್ಲಿ ಚನ್ನಪಟ್ಟಣದ ಪಾಳೆಯಗಾರರ ಅನುಕ್ರಮ ಈ ರೀತಿ ಇದೆ. ರಾಣಪೆದ್ದ ಜಗದೇವರಾಯ ಅವನ ಮಗ ಜಗದೇವರಾಯ, ಅವನ ಮಗ 2ನೇ ಕುಮಾರ ಜಗದೇವರಾಯ ಕ್ರಿ.ಶ. 1623/ ಕ್ರಿ.ಶ. 1630 ರಲ್ಲಿ ಮೈಸೂರಿನ ಚಾಮರಾಜ ಒಡೆಯರು ಚನ್ನಪಟ್ಟಣವನ್ನು ವಶಪಡಿಸಿಕೊಂಡರು. ಇದರೊಂದಿಗೆ ಈ ರಾಜ್ಯದ ಇತರ ಭಾಗಗಳಾಗಿದ್ದ ಕಾನಕಾನಹಳ್ಳಿ, ಪಿರಿಯಾಪಟ್ಟಣಗಳು ಮೈಸೂರು ರಾಜ್ಯದಲ್ಲಿ ಸೇರ್ಪಡೆಯಾದುದಲ್ಲದೆ ಚನ್ನಪಟ್ಟಣದ ಪಾಳೆಗಾರರ ಆಳ್ವಿಕೆಯೂ ಕೊನೆಗೊಂಡಿತು.[24]

ಚನ್ನಪಟ್ಟಣದ ಪಾಳೆಗಾರರು ಇಲ್ಲಿನ ದೇವಾಲಯಗಳಿಗೆ ದಾನದತ್ತಿ ಕೊಟ್ಟರಲ್ಲದೆ ಅವುಗಳನ್ನು ಪುನರ್ರಚಿಸಿದರು. ಚನ್ನಪಟ್ಟಣದ ಕೋದಂಡರಾಮ ದೇವಸ್ಥಾನ ಈ ಅವಧಿಯಲ್ಲಿ ನಿರ್ಮಾಣಗೊಂಡಿತು. ಮಳೂರಿನ ಅಪ್ರಮೇಯಸ್ವಾಮಿ ದೇವಸ್ಥಾನದಲ್ಲಿ ಜಗದೇವರಾಯನ ಹೆಂಡತಿಯ ಮೂರ್ತಿಯಿದೆ. ಜಗದೇವರಾಯನಿಂದ ನಿರ್ಮಿಸಲ್ಪಟ್ಟ ಕೋಟೆ ಈಗ ಸಂಪೂರ್ಣ ನಾಶವಾಗಿದೆ. ಸಾಹಿತ್ಯಕವಾಗಿಯೂ ಚನ್ನಪಟ್ಟಣದ ಪಾಳೆಯಗಾರರು ಪ್ರೋತ್ಸಾಹವಿತ್ತಿದ್ದರು. ಇಮ್ಮಡಿ ಜಗದೇವರಾಯನ ಆಸ್ಥಾನ ಕವಿ ಓಬಳ ಕವಿ ಎಂಬಾತ "ವಾಮನ ಪುರಾಣ"ವನ್ನು ರಚಿಸಿದ್ದಾರೆ. ಆತನೆ ಸ್ವತಃ ಕವಿಯಾಗಿದ್ದು ಸಂಸ್ಕೃತದಲ್ಲಿ "ಉತ್ತಾರನೈಷದ" ಮತ್ತು "ಆಧ್ಯಾತ್ಮ ರಾಮಾಯಣ" ಎಂಬ ಗ್ರಂಥಗಳನ್ನು ರಚಿಸಿರುವನು. "ಚಂಡಿಕರತಮಂ" ಈತನ ತೆಲಗು ಕೃತಿ. ಅಂಕುಶೇಂದ್ರನಿಂದ ಪೋಷಿಸಲ್ಪಟ್ಟ ರೆವುರಿ ಏಕಾಂಬರನಾಥ ಮುಂತಾದ ಕವಿಗಳು ಇವರ ಪ್ರೋತ್ಸಾಹ ಪಡೆದಿದ್ದರು. ಇವರು ಸಂಸ್ಕೃತ ಮತ್ತು ತೆಲಗು ಭಾಷೆಗೆ ಪ್ರೋತ್ಸಾಹ ಕೊಟ್ಟಿದ್ದರು. ಇದೇ ಅವಧಿಯಲ್ಲಿ ಚಾವಲಿ ರಾಮಸ್ವಾಮಿ ಹೊಸಗನ್ನಡ ಸಾಹಿತ್ಯದ ಬಗ್ಗೆ ಛಂದಸ್ಸನ್ನು ಕುರಿತು ಬರೆದರು.

ಚಾಮರಾಜ ಒಡೆಯರು ಚನ್ನಪಟ್ಟಣವನ್ನು ವಶಪಡಿಸಿಕೊಂಡ ನಂತರ ಚನ್ನಪಟ್ಟಣ ರಾಜ್ಯ ಮೈಸೂರು ಸಂಸ್ಥಾನದಲ್ಲಿ ವಿಲೀನಗೊಂಡಿತು. ನಂತರ ಹೈದರಾಲಿ ಮತ್ತು ಟಿಪ್ಪು ಅವರ ಆಳ್ವಿಕೆಗೆ ಒಳಪಟ್ಟಿತು. ಕ್ರಿ.ಶ.1759 ರಲ್ಲಿ ಗೋಪಾಲಹರಿಯ ಮುಖಂಡತ್ವದಲ್ಲಿದ್ದ ಮರಾಠ ಸೇನೆ ಇಲ್ಲಿನ ಕೋಟೆಯನ್ನು ನಾಶಪಡಿಸಿತು. ದಿವಾನ್ ಪೂರ್ಣಯ್ಯ ಕೋಟೆಯನ್ನು ದುರಸ್ತಿಗೊಳಿಸಿದ. ಹೈದರಾಲಿ ಕೂಡ್ಲೂರು ಗ್ರಾಮವನ್ನು ಅಖಿಲ್ ಷಾ ಖಾದ್ರಿ ಎಂಬಾತನಿಗೆ ದತ್ತಿಕೊಟ್ಟಿದ್ದನು. ಹೈದರಾಲಿಯ ಗುರು ಅಕ್ಬಲ್ ಷಾ ಖಾದ್ರಿ ಇಲ್ಲಿ ನೆಲೆಸಿದ್ದನು. ಈತನ ಗೋರಿಯು ಇಲ್ಲಿದೆ. ಇವರ ನಂತರ ಮುಮ್ಮಡಿ ಕೃಷ್ಣರಾಜ ಒಡೆಯರ ಭಾವಮೈದುನ ತಿಮ್ಮಪ್ಪ ರಾಜ ಇಲ್ಲಿಯ ಆಳ್ವಿಕೆ ನಡೆಸಿ ಅರಮನೆಯೊಂದನ್ನು ಕಟ್ಟಿಸಿದ. ಹೈದರಾಲಿ ಸೈಯದ್ ವಾಡಿಯಲ್ಲಿ ಜಾಮೀ ಮಸೀದಿ ನಿರ್ಮಿಸಿದ. ಬಡಮಕಾನ್, ದರ್ಗಾಗಳು ಈತನ ಕಾಲಕ್ಕೆ ಸೇರಿದವು. 3–4 ನೇ ಆಂಗ್ಲೊ ಮೈಸೂರು ಯುದ್ಧದ ಸಂದರ್ಭದಲ್ಲಿ ಮರಾಠ ಸೇನೆ ಇಲ್ಲಿ ಕೆಲಕಾಲ ತಂಗಿತ್ತು.

1.5.3 ಸ್ವಾತಂತ್ರ್ಯ ಪೂರ್ವ ಹಾಗೂ ನಂತರದ ಇತಿಹಾಸದಲ್ಲಿ ಚನ್ನಪಟ್ಟಣದ ಸ್ಥಾನ:

ಹೀಗೆ ಮಹತ್ವದ ಚಾರಿತ್ರಿಕ ಹಿನ್ನೆಲೆಯುಳ್ಳ ಚನ್ನಪಟ್ಟಣವು ಸ್ವಾತಂತ್ರ್ಯ ಚಳುವಳಿಯಲ್ಲಿಯೂ ಪ್ರಮುಖ ಪಾತ್ರ ವಹಿಸಿತು. ಚನ್ನಪಟ್ಟಣ ಪ್ರದೇಶ ಕಾಂಗ್ರೆಸ್ ಸ್ಥಾಪನೆಯ ನಂತರವೇ ಸ್ವಾತಂತ್ರ್ಯ ಚಳುವಳಿ ತೀವ್ರಗೊಂಡಿತು. ಆಳರಸರು ಬ್ರಿಟಿಷರ ಆಶ್ರಿತ ರಾಜರಾಗಿ ಮಾರ್ಪಟ್ಟು ಜನ ಕಲ್ಯಾಣ ಸಾಧಿಸಿದ್ದರಿಂದ ಇಲ್ಲಿನ ಜನ ಬ್ರಿಟಿಷರ ಅಥವಾ ಮೈಸೂರು ಒಡೆಯರ ವಿರುದ್ಧ ಚಳುವಳಿಯನ್ನೇನು ಆರಂಭಿಸಿರಲಿಲ್ಲ. ಗಾಂಧೀಜಿಯವರ "ಸಂಪೂರ್ಣ ಸ್ವರಾಜ್ಯ" ಮತ್ತು "ಭಾರತ ಬಿಟ್ಟು ತೊಲಗಿ" ಚಳುವಳಿ ಹಾಗೂ ಮೈಸೂರು ಚಲೋ ಚಳವಳಿಯ ಸಂದರ್ಭದಲ್ಲಿ ಭಾಗವಹಿಸಿ ಗಾಂಧೀಜಿಯವರಿಗೆ ತಮ್ಮ ಬೆಂಬಲ ವ್ಯಕ್ತಪಡಿಸಿದರು. ತಿಟ್ಟಮಾರನಹಳ್ಳಿ ವೆಂಕಟಪ್ಪ, ಅಕ್ಕೂರಿನ ವೀರಣ್ಣಗೌಡ, ನಾಗವಾರದ ಕಪಿನಯ್ಯ, ಅಬ್ಬೂರಿನ ಚೆನ್ನಿಗಯ್ಯ, ಚನ್ನಪಟ್ಟಣದ ಚಾಮಯ್ಯ, ಚಕ್ಕೆರೆ ಚನ್ನೇಗೌಡ, ಬೈರಾಪಟ್ಟಣದ ತಿಮ್ಮೇಗೌಡ, ಬೇವೂರಿನ ಗಾಳಿಚೆನ್ನ, ಚನ್ನಪಟ್ಟಣದ ಕರಿಯಪ್ಪ, ಹುಚ್ಚಯ್ಯ, ಡಿ.ಆರ್.ಲಿಂಗಯ್ಯ, ರಾಮು, ರಾಮಯ್ಯ, ಪುಟ್ಟರಂಗಪ್ಪ ಮುಂತಾದವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರು. ಇವರೆಲ್ಲಾ ಮೈಸೂರು ಚಲೋ, ಶಿವಪುರ ಧ್ವಜ ಸತ್ಯಾಗ್ರಹ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.[25]

ಪತ್ರಿಕಾ ರಂಗವು ಸಹ ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಬೊಂಬೆನಾಡು ಚನ್ನಪಟ್ಟಣ ತಾಲ್ಲೂಕಿನ ಮೊದಲ ಪತ್ರಿಕೆ 1907 ರಲ್ಲಿ ದಿವಂಗತ ಎಸ್.ಎಸ್.ಶರ್ಮರವರ ಸಂಪಾದಕತ್ವದ "ಶುಭಾಷಿನಿ" ರಾಷ್ಟ್ರೀಯವಾದಿ ಮಾಸ ಪತ್ರಿಕೆಯಾಗಿ ಹೆಸರಾಗಿತ್ತು. ರಾಜ್ಯದ ಮೊದಲ ಉರ್ದು ಪತ್ರಿಕೆ ಝುಬಾತ್–ಉಲ್–ಮುಲ್ಕ್ ಉರ್ದು ಪಾಕ್ಷಿಕ 1915 ರಲ್ಲಿ ಪ್ರಕಟಗೊಂಡಿತ್ತು. 1919 ರಲ್ಲಿ ಖಾಫಿಲ್

ಉರ್ದು ವಾರಪತ್ರಿಕೆ 1925 ರಲ್ಲಿ ಮುಸ್ಲಿಂ ಡೆಕ್ಕನ್ ಮಾಸಪತ್ರಿಕೆ, 1932 ರಲ್ಲಿ ಹಿದಾಯತ್ ಪಾಕ್ಷಿಕ ಹಾಗೂ ಅಲ್ಬನೇರತ್ ಮಾಸ ಪತ್ರಿಕೆಗಳು ಉರ್ದು ಭಾಷೆಯಲ್ಲಿ ಪ್ರಕಟಗೊಳ್ಳುತ್ತಿದ್ದು ಪತ್ರಿಕೋದ್ಯಮದ ದಾಖಲೆಯಾಗಿದೆ.[26]

ಸ್ವಾತಂತ್ರ್ಯ ಪೂರ್ವದಲ್ಲಿ ಇಡೀ ಮೈಸೂರು ಸಂಸ್ಥಾನದಲ್ಲಿ ಅತ್ಯಂತ ಮುಂದುವರಿದ ತಾಲ್ಲೂಕುಗಳಲ್ಲಿ ಚನ್ನಪಟ್ಟಣ 2ನೆಯ ತಾಲ್ಲೂಕು, ಇಲ್ಲಿನ ವ್ಯಾಪಾರ, ವಾಣಿಜ್ಯ, ಕೃಷಿ ಕೈಗಾರಿಕೆಗಳು ಹೆಚ್ಚಿನ ಅಭಿವೃದ್ಧಿಯನ್ನು ಪಡೆದಿದ್ದವು. ಚೋಳ ಮತ್ತು ವಿಜಯನಗರ ಕಾಲದಲ್ಲಿ ಕಟ್ಟಿದ ಕೆರೆಗಳೆ ಇಲ್ಲಿನ ನೀರಾವರಿ ಮೂಲಗಳಾಗಿದ್ದು ಇಲ್ಲಿ ತೆಂಗು, ಬಾಳೆ, ಕಬ್ಬು, ಕಡ್ಲೆಕಾಯಿ, ಭತ್ತ, ವೀಳ್ಯೆದೆಲೆ ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದರು. ಚೋಳರ ಆದಿಯಮ, ನರಸಿಂಹವರ್ಮ, ದಾಮನಂದಿ, ಇಳವಂಜಿರಾಯ ಬ್ರಹ್ಮಾಂಡಮು ಮತ್ತಿತರರು ಕರ್ನಾಟಕದ ಚೋಳ ಪ್ರದೇಶಗಳ ಆಳ್ವಿಕೆ ನಡೆಸಿದ ಪ್ರಮುಖರಾಗಿದ್ದರು. ವಿಟ್ಟೈ, ಮೊದಿಲೈ, ವಾಲಕ್ಕಾಣಂ, ಕೋಲ್ ನಿರೈಕೂಲಿ ಕಾವಳಮಕಿನ್, ಪದಿಕಾವನ್, ಮಡ್ಯೆ, ಕೊರ್ ಮುಂತಾದ ತೆರಿಗೆಗಳನ್ನು ಇಲ್ಲಿನ ಗ್ರಾಮಗಳಿಂದ ಸಂಗ್ರಹಿಸುತ್ತಿದ್ದರು. ಗಾವುಂಡ ಅಥವಾ ಗೌಡ ಊರಿನ ಮುಖ್ಯಸ್ಥನಾಗಿದ್ದ. ಪಟೇಲ್, ಶ್ಯಾನುಭೋವ, ತೋಟಿ, ತಳವಾರ ಮುಂತಾದ ಗ್ರಾಮಾಧಿಕಾರಿಗಳು ಇರುತ್ತಿದ್ದರು. ಇಲ್ಲಿ ತಮಿಳು ಆಡಳಿತ ಭಾಷೆಯಾಗಿತ್ತು. ದೊರಕಿರುವ ಚೋಳರ ಎಲ್ಲಾಶಾಸನಗಳು ತಮಿಳಿನಲ್ಲಿರುವುದೇ ಇದಕ್ಕೆ ನಿದರ್ಶನ. ಪ್ರತಿ ಗ್ರಾಮ ಅಥವಾ ಅಗ್ರಹಾರಗಳಲ್ಲಿ ಗ್ರಾಮ ಸಭೆ ಇರುತ್ತಿತ್ತು. ಗ್ರಾಮ ಸಭೆಗೆ ಊತ, ಕುರಿ, ಪೆರಂಗುರಿ ಮುಂತಾದ ಹೆಸರುಗಳಿಂದ ಕರೆಯಲಾಗುತ್ತಿತ್ತು. ಮಳೂರು ಅಪ್ರಮೇಯಸ್ವಾಮಿ ದೇವಾಲಯ ಲೇವಾದೇವಿ ವ್ಯವಹಾರ ಹಾಗೂ ಕೃಷಿ ಸಂಬಂಧಿ ಚಟುವಟಿಕೆಗಳಲ್ಲೂ ತೊಡಗಿಸಿಕೊಂಡಿತ್ತು.

ಹೈದರಾಲಿಯ ಮತ್ತು ಬ್ರಿಟಿಷರ ಕಾಲದಲ್ಲಿ ಆಡಳಿತಾತ್ಮಕವಾಗಿ ಪ್ರಧಾನ ಪಾತ್ರ ವಹಿಸಿತು. ಹೈದರಾಲಿ ಮತ್ತು ಟಿಪ್ಪುವಿನ ಅನೇಕ ಅಧಿಕಾರಿಗಳು ಇಲ್ಲೇ ವಾಸ್ತವ್ಯ ಹೂಡಿದ್ದರು. ಕ್ರಿ.ಶ. 1873 ರಲ್ಲಿ ಇದನ್ನು ಕ್ಲೋಸ್‌ಪೇಟೆಯ (ಇಂದಿನ ರಾಮನಗರ) ಉಪ ತಾಲ್ಲೂಕನ್ನಾಗಿ ಮಾಡಲಾಯಿತು. ಕ್ರಿ.ಶ. 1892 ರಲ್ಲಿ ಕ್ಲೋಸ್‌ಪೇಟೆಯೇ ಚನ್ನಪಟ್ಟಣದ ಉಪ ತಾಲ್ಲೂಕನ್ನಾಗಿ ಮಾಡಲಾಯಿತು.[27]

ಈ ಮೇಲ್ಕಂಡ ಚನ್ನಪಟ್ಟಣದ ಚಾರಿತ್ರಿಕ ಹಿನ್ನೆಲೆಯನ್ನು ಗಮನಿಸಿದಾಗ ಚನ್ನಪಟ್ಟಣವು ದಾಸ ಶ್ರೇಷ್ಠರಿಂದ ಹಿಡಿದು ಹೆಚ್.ಕೆ.ವೀರಣ್ಣಗೌಡ, ತಿಟ್ಟಮಾರನಹಳ್ಳಿ ವೆಂಕಟಪ್ಪನಂತಹ ಧೀಮಂತ ನಾಯಕರುಗಳಿಗೆ ಜನ್ಮ ನೀಡಿರುವುದಷ್ಟೇ ಅಲ್ಲದೆ ಪ್ರೊ॥ ವೆಂಕಟಗಿರಿಗೌಡ, ಭೈರವೀ ಕೆಂಪೇಗೌಡರಂತಹ ಮಹನೀಯರನ್ನು ಸಹ ಸೃಷ್ಟಿಸಿರುವ ಈ ನಾಡು ಜಾನಪದ ಕಲೆ, ಸಂಸ್ಕೃತಿಗೂ ಸಹ ತನ್ನದೇ ಆದ ಕೊಡುಗೆಯನ್ನು ನೀಡಿದೆ. ಇವುಗಳ ಕೂಲಂಕುಷ ಅಧ್ಯಯನದಿಂದ ನಮಗೆ ಚನ್ನಪಟ್ಟಣದ ಶ್ರೇಷ್ಠತೆಯ ಮನವರಿಕೆಯಾಗುತ್ತದೆ.

ಚನ್ನಪಟ್ಟಣದಲ್ಲಿ ಹುಟ್ಟಿ ವಿವಿಧ ಕ್ಷೇತ್ರದಲ್ಲಿ ದುಡಿಮೆ ಮಾಡಿದವರು ಬಗೆದಷ್ಟೂ ಲಭ್ಯವಾಗುತ್ತಾರೆ. ಈ ತಾಲ್ಲೂಕಿನಲ್ಲಿ ಜಾನಪದ ಕಲೆ, ಕಲಾವಿದರು ಸಮೃದ್ಧವಾಗಿದ್ದಾರೆ.[28] ಹೀಗೆ ಸಾಂಸ್ಕೃತಿಕ ಗರಿಮೆಯನ್ನು ಹೊಂದಿರುವ ಚನ್ನಪಟ್ಟಣ ವ್ಯಾಪಾರ–ವಾಣಿಜ್ಯ, ಕಲೆ, ಸಾಹಿತ್ಯ, ವಿವಿಧ ಧರ್ಮಗಳಿಗೆ ತಾಣವಾಗಿದೆ ಅದರಲ್ಲೂ ಚನ್ನಪಟ್ಟಣವು ಕರಕುಶಲತೆಗೆ ಹೆಸರುವಾಸಿಯಾಗಿದ್ದು ಅದು ಮರದ ಆಟಿಕೆಗಳಿಗೆ ಪ್ರಸಿದ್ಧವಾಗಿದೆ. ಚನ್ನಪಟ್ಟಣದ ಗೊಂಬೆಗಳು ತಮ್ಮ ಸೌಂದರ್ಯ, ವೈವಿಧ್ಯತೆ ಮತ್ತು ಉತ್ತಮ ಗುಣಮಟ್ಟದಿಂದಾಗಿ ಆಬಾಲವೃದ್ಧರಾದಿಯಾಗಿ ಎಲ್ಲರನ್ನು ಆಕರ್ಷಿಸುತ್ತವೆ. ಅಲ್ಲದೆ ಇನ್ನೂ ಅನೇಕ ರೀತಿಯ ಕರಕುಶಲತೆಗಳನ್ನು ಇಲ್ಲಿ ಕಾಣಬಹುದು.

ಚನ್ನಪಟ್ಟಣದ ಬೊಂಬೆಗಳನ್ನು ತಯಾರಿಸುವ ಕುಶಲ ಕರ್ಮಿಗಳು ಚಿತ್ರಕಾರರೆಂಬ ಸಮುದಾಯಕ್ಕೆ ಸೇರಿದವರು. ಈ ಉದ್ಯಮವು ವಿವಿಧ ಜನಾಂಗದವರ ಜೀವನಾಧಾರವಾಗಿದೆ. ಅತ್ಯಂತ ಸೂಕ್ಷ್ಮ ನವಿರಾದ ಕೆಲಸಗಳನ್ನು ಇಲ್ಲಿನ ಕುಶಲ ಕರ್ಮಿಗಳು ನಿರ್ವಹಿಸುವುದಲ್ಲದೆ, ಗುಲಗಂಜಿ ಗಾತ್ರದ ಬೊಂಬೆಗಳಿಂದ ದೊಡ್ಡ ಪ್ರಾಣಿಗಳವರೆಗೆ ತಯಾರಾಗುತ್ತವೆ. ಅನೇಕ ಗೃಹಾಲಂಕಾರ ಗೃಹೋಪಯೋಗಿ ವಸ್ತುಗಳು ತಯಾರಾಗುವುದಲ್ಲದೆ ವಿದೇಶಗಳಿಗೂ ರಫ್ತಾಗುತ್ತವೆ. ತಾಲ್ಲೂಕಿನ ಇತರ ಕರಕುಶಲ ಕೈಗಾರಿಕೆಗಳಲ್ಲಿ ಬೇವೂರಿನ ಮಣ್ಣಿನ ಕುಡಿಕೆ, ಬಿದಿರು ಬುಟ್ಟಿಗಳನ್ನು ಹೆಣೆಯುವ ಮೇದರು, ಮರದ ಬಾಚಣಿಗೆ ತಯಾರಿಸುವ ದೊಂಬರು ಇಲ್ಲಿ ಕಂಡು ಬರುತ್ತಾರೆ. ಡಾ॥ ಪ್ರಾನ್ಸಿಸ್ ಬುಕನಾನ್ ಎಂಬ ಇಂಗ್ಲೀಷ್ ಅಧಿಕಾರಿ ಪ್ರವಾಸ ಕೈಗೊಂಡಾಗ ಇಲ್ಲಿ ಗಾಜಿನ ಸಾಮಾನುಗಳನ್ನು, ಬಳೆಗಳನ್ನು, ವೀಣೆಯ ತಂತಿಗಳನ್ನು, ಬಿದಿರಿನಿಂದೆಣೆದ ಸಾಮಾನುಗಳನ್ನು ತಯಾರಿಸುತ್ತಾರೆಂದು ಉಲ್ಲೇಖಿಸಿದ್ದಾನೆ.[29] ಇವಷ್ಟೇ ವೃತ್ತಿಗಳಲ್ಲದೆ ಕೃಷಿಯನ್ನು ಪ್ರಧಾನವಾಗಿ ಅವಲಂಬಿಸಿರುವ ಒಕ್ಕಲಿಗರು ಮತ್ತು ಬ್ರಾಹ್ಮಣ, ವೀರಶೈವ, ಬೆಸ್ತ, ದಾಸಬಣಜಿಗ, ಕುರುಬ, ಉಪ್ಪಾರ, ಕುಂಬಾರ ಮುಂತಾದ ಸಮುದಾಯಗಳು ಇಲ್ಲಿ ವಾಸವಾಗಿವೆ.[30]

ಹೀಗೆ ವಿವಿಧ ಪ್ರಾಂತ್ಯಗಳಿಂದ ಬಂದ ಜನರು ಈ ನಾಡಿನಲ್ಲಿ ಬಂದು ನೆಲೆಗೊಂಡಿದ್ದಾರೆ. ಅದರಲ್ಲೂ ಜೀವನದಲ್ಲಿ ನೆಲೆನಿಲ್ಲಲು ವೃತ್ತಿಯನ್ನು ಅರಸಿ ಬಂದವರು, ತಮ್ಮ ಕರಕುಶಲತೆಯ ಕೈಚಳಕವನ್ನು ಬಿತ್ತ ಬಂದವರು, ತಮ್ಮ ಪ್ರತಿಭೆಯ ಪ್ರಸಾರಕ್ಕಾಗಿ ನೆಲೆಯರಸಿ ಬಂದವರು ಹೀಗೆ ವಿವಿಧ ಉದ್ದೇಶಗಳಿಗಾಗಿ ವಿವಿಧ ಧರ್ಮದ ಜನರು ಈ ನೆಲದಲ್ಲಿ ವಾಸಿಸುತ್ತಿದ್ದು ಇವರ ಕೊಡುಗೆ ಇಲ್ಲಿನ ಸಾಂಸ್ಕೃತಿಕ, ಆರ್ಥಿಕ ಅಭಿವೃದ್ಧಿಗೆ ಅಮೂಲ್ಯವಾಗಿದ್ದು ದೇಶ ವಿದೇಶಗಳಲ್ಲಿ ಚನ್ನಪಟ್ಟಣದ ಖ್ಯಾತಿ ಹರಡಲು ಸಾಧ್ಯವಾಗಿದೆ.

ಹಲವು ಕರಕುಶತೆಗಳನ್ನು ಮೈಗೂಡಿಸಿಕೊಂಡಿರುವ ಈ ಚನ್ನಪಟ್ಟಣದಲ್ಲಿ ಮರದ ಬೊಂಬೆಗಳ ತಯಾರಿಕೆಯು ಪ್ರಮುಖವಾಗಿದ್ದು, ಇಂದು ದೇಶ ವಿದೇಶಗಳಲ್ಲಿ ಬಹು ಬೇಡಿಕೆಯಿರುವ ಈ ಬೊಂಬೆಗಳ ಉದ್ದಿಮೆ ಹಾಗೂ ಇದನ್ನು ಅವಲಂಬಿಸಿರುವ

ಜನರ ಜೀವನ ಶೋಚನೀಯವಾಗಿದೆ. ಈ ಕೈಗಾರಿಕೆಗಳಿಗೆ ಮೂಲ ಕಚ್ಚಾವಸ್ತುವಾದ ಹಾಲೆ ಮರಗಳ ಕಡಿಯುವಿಕೆಗೆ ಇರುವ ನಿರ್ಬಂಧ, ಸೂಕ್ತ ಮಾರುಕಟ್ಟೆಯ ಕೊರತೆ, ಮಧ್ಯಸ್ಥಗಾರರ ಒಡಂಬಡಿಕೆ ಇತ್ಯಾದಿ ಕಾರಣಗಳಿಂದಾಗಿ ನೆಲ ಕಚ್ಚುತ್ತಿರುವ ಈ ಉದ್ದಿಮೆಗೆ ಸರ್ಕಾರ ಸೂಕ್ತ ಸೌಕರ್ಯಗಳನ್ನು ಒದಗಿಸಿಕೊಡುವುದು ಅನಿವಾರ್ಯವಾಗಿದ್ದು ನಮ್ಮ ದೇಶದ ಕೀರ್ತಿಯನ್ನು ಹೊರ ರಾಷ್ಟ್ರಗಳಲ್ಲಿ ಬಿತ್ತರಗೊಳಿಸುತ್ತಿರುವ ಈ ಕರಕುಶಲ ಕೈಗಾರಿಕೆಗಳನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಕರ್ತವ್ಯ ಎಂದರೆ ತಪ್ಪಾಗಲಾರದು.

ಅಡಿಟಿಪ್ಪಣಿಗಳು :

1. ಹೆಚ್. ಕೃಷ್ಣೇಗೌಡ ಮತ್ತು ದೇ. ನಾರಾಯಣಸ್ವಾಮಿ (ಸಂ.), 'ಕಣ್ವಸಿರಿ', ಪು.28.
2. ಎಂ. ಬೈರೇಗೌಡ, ಮತ್ತು ತಾ.ಸಿ. ತಿಮ್ಮಯ್ಯ (ಸಂ.), 'ಅರ್ಕಾವತಿ', ಪು.275.
3. ಬಿ.ಟಿ. ಚಿಕ್ಕಪುಟ್ಟೇಗೌಡ ಮತ್ತು ಆರ್.ವಿ. ನಾರಾಯಣ (ಸಂ.), 'ಕನಕಸಂಪದ', ಪು.92.
4. ಎಂ. ಬೈರೇಗೌಡ ಮತ್ತು ತಾ.ಸಿ. ತಿಮ್ಮಯ್ಯ (ಸಂ.), ಪು.275.
5. ಹೆಚ್.ಕೃಷ್ಣೇಗೌಡ ಮತ್ತು ದೇ. ನಾರಾಯಣಸ್ವಾಮಿ (ಸಂ.), ಪು.XVII.
6. ಎಂ. ಬೈರೇಗೌಡ ಮತ್ತು ತಾ.ಸಿ. ತಿಮ್ಮಯ್ಯ (ಸಂ.), ಪು.275.
7. ಅದೇ, ಪು.293.
8. ಅದೇ, ಪು.275.
9. ಹೆಚ್. ಕೃಷ್ಣೇಗೌಡ, ಮತ್ತು ದೇ. ನಾರಾಯಣಸ್ವಾಮಿ (ಸಂ.), ಪು.67.
10. ಎಂ. ಬೈರೇಗೌಡ, ಮತ್ತು ತಾ.ಸಿ. ತಿಮ್ಮಯ್ಯ (ಸಂ.), ಪು.275.
11. ಹೆಚ್. ಕೃಷ್ಣೇಗೌಡ, ಮತ್ತು ದೇ. ನಾರಾಯಣಸ್ವಾಮಿ (ಸಂ.), ಪು.68.
12. ಎಂ. ಬೈರೇಗೌಡ, ಮತ್ತು ತಾ.ಸಿ. ತಿಮ್ಮಯ್ಯ (ಸಂ.), ಪು.275.
13. ಅದೇ, ಪು.294
14. ಅದೇ, ಪು.276
15. ಅದೇ, ಪು.277.
16. ಅದೇ, ಪು.293.
17. ಗೋಪಾಲರಾವ್, ಹೆಚ್.ಎಸ್. (ಸಂ.), 'ನೆಲದ ಸಿರಿ', ಪು.13.
18. ಎಂ. ಬೈರೇಗೌಡ, ಮತ್ತು ತಾ.ಸಿ. ತಿಮ್ಮಯ್ಯ (ಸಂ.), ಪು.277.
19. ಬಿ.ಟಿ. ಚಿಕ್ಕಪುಟ್ಟೇಗೌಡ ಮತ್ತು ಮುನಿರಾಜಪ್ಪ (ಸಂ.), ಪು.39.
20. ಎಂ. ಬೈರೇಗೌಡ, ಮತ್ತು ತಾ.ಸಿ. ತಿಮ್ಮಯ್ಯ (ಸಂ.), ಪು.278.
21. ಬಿ.ಟಿ. ಚಿಕ್ಕಪುಟ್ಟೇಗೌಡ ಮತ್ತು ಮುನಿರಾಜಪ್ಪ (ಸಂ.), ಪು.44.
22. ಅದೇ, ಪು.45.
23. ಅದೇ, ಪು.48–49.
24. ಅಂಬಳಿಕೆ ಹಿರಿಯಣ್ಣ (ಸಂ.), 'ಕನ್ನಡ ವಿಷಯ ವಿಶ್ವಕೋಶ (ಇತಿಹಾಸ ಮತ್ತು ಪುರಾತತ್ವ)', ಪು.591–92.
25. ಎಂ. ಬೈರೇಗೌಡ, ಮತ್ತು ತಾ.ಸಿ. ತಿಮ್ಮಯ್ಯ (ಸಂ.), ಪು.279–280.

26. ಬಿ.ಟಿ. ಚಿಕ್ಕಪುಟ್ಟೇಗೌಡ ಮತ್ತು ಮುನಿರಾಜಪ್ಪ (ಸಂ.), ಪು.168.

27. ಎಂ. ಬೈರೇಗೌಡ, ಮತ್ತು ತಾ.ಸಿ. ತಿಮ್ಮಯ್ಯ (ಸಂ.), ಪು.280.

28. ಹೆಚ್. ಕೃಷ್ಣೇಗೌಡ, ಮತ್ತು ದೇ. ನಾರಾಯಣಸ್ವಾಮಿ (ಸಂ.), ಪು.XIX.

29. ಎಂ. ಬೈರೇಗೌಡ, ಮತ್ತು ತಾ.ಸಿ. ತಿಮ್ಮಯ್ಯ (ಸಂ.), ಪು.282.

30. ಅದೇ, ಪು.294.

ಅಧ್ಯಾಯ–2

ಕರಕುಶಲ ಕೈಗಾರಿಕೆಗಳ ಇತಿಹಾಸ ಮತ್ತು ಪ್ರಾಚೀನತೆ

ಅಧ್ಯಾಯ–2

ಕರಕುಶಲ ಕೈಗಾರಿಕೆಗಳ ಇತಿಹಾಸ ಮತ್ತು ಪ್ರಾಚೀನತೆ

2.1 ಕರಕುಶಲ ಕಲೆ:

ಅರ್ಥ : ಮನುಷ್ಯನಲ್ಲಿರುವ ಕೌಶಲ್ಯವು ಆತನ ಕರಗಳಿಂದ ಬಿಂಬಿತವಾಗುವುದನ್ನೇ ಕರಕುಶಲ ಕಲೆ ಎನ್ನಬಹುದು. 'ರಸಾನುಭವವನ್ನು ಉಂಟು ಮಾಡಬಹುದಾದ ಯಾವುದೇ ರಚನೆ ಅಥವಾ ಸೃಷ್ಟಿಯನ್ನು ನಾವು ಕಲೆ' ಎಂದು ಗುರುತಿಸುತ್ತೇವೆ. ನಮ್ಮ ನಿತ್ಯದ ಬದುಕಿನಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡಿರುವ ಕಲೆಗಳಲ್ಲಿ ಕೆಲವನ್ನು ಕುಶಲಕಲೆಗಳು ಎಂದು ಕರೆಯುವುದುಂಟು. ಆನಂದ ಮೂಲವಾದ ಕಲೆಗಳನ್ನು 'ಲಲಿತ ಕಲೆ' ಎಂದೂ, ಉಪಯುಕ್ತತೆ ಮೂಲವಾದುದನ್ನು 'ಕುಶಲಕಲೆ' ಎಂದು ಗುರುತಿಸುತ್ತೇವೆ. ಈ ಉಪಯುಕ್ತ ಕಲೆಗಳನ್ನು ಈಚೆಗೆ ಕರಕುಶಲ ಕಲೆಗಳು ಎಂದೂ ಗುರುತಿಸುತ್ತಿದ್ದೇವೆ. ಅಂದರೆ ಇವು ಯಂತ್ರ ನಿರ್ಮಿತ ವಸ್ತುಗಳಿಗಿಂತ ಭಿನ್ನವಾದವುಗಳು ಮತ್ತು ದೇಶೀಯ ರಚನೆಗಳು ಎಂಬುದನ್ನು ಸೂಚಿಸಲು ಈ ಪದ ರೂಢಿಯಲ್ಲಿ ಬಂದಿದೆ. ಈಚೆಗೆ ಯಾಂತ್ರೀಕರಣದ ಫಲವಾಗಿ ಯಂತ್ರ ನಿರ್ಮಿತಿಗಳಿಗಿಂತ ಭಿನ್ನವಾದ ಮಾನವ ನಿರ್ಮಿತ ಕಲಾ ವಸ್ತುಗಳನ್ನು ಕರಕುಶಲ ಕಲೆಗಳು ಎಂದು ಹೇಳಲಾಗಿದೆ.[1] ಕರಕುಶಲ ವಸ್ತುಗಳು ಮಾನವ ಬದುಕಿಗಾಗಿ ಸೃಷ್ಟಿಸಿದ ವಸ್ತುಗಳು. ಇವುಗಳ ಸೃಷ್ಟಿಯ ಜೊತೆಗೆ ಅವನ ಸೌಂದರ್ಯ ಪ್ರಜ್ಞೆಯೂ ಜಾಗೃತವಾಗಿದ್ದುದರಿಂದ ಅವುಗಳ ರಚನೆ ಕೇವಲ ಉಪಯೋಗಕ್ಕೆ ಸೀಮಿತವಾಗುಳಿಯಲಿಲ್ಲ. ಪ್ರಕೃತಿಯ ರಮಣೀಯ ದೃಶ್ಯಗಳಲ್ಲಿ, ಹರಿವ ನೀರಿನ ಝುರಿಯಲ್ಲಿ, ಹಣ್ಣಿನ ಬಣ್ಣದಲ್ಲಿ, ಕಲ್ಲುಗಳ ವಿನ್ಯಾಸದಲ್ಲಿ ಇರಬಹುದಾದ ಸೌಂದರ್ಯವನ್ನು ಗಮನಿಸಿದ ಮಾನವನ ಕಲಾತ್ಮಕ ಪ್ರಜ್ಞೆಯೂ ಜಾಗೃತಗೊಂಡು ಈ ಕಲಾತ್ಮಕ ಪ್ರಜ್ಞೆಯು ಹತ್ತು ಹಲವು ರೂಪಗಳಲ್ಲಿ ಪ್ರಕಟಗೊಂಡಿತ್ತು. ಯಂತ್ರ ನಾಗರಿಕತೆಯ ಪ್ರವೇಶಕ್ಕೆ ಪೂರ್ವದಲ್ಲಿ ಮನುಷ್ಯ ತಾನೇ ನಿರ್ಮಿಸಿಕೊಂಡ ವಸ್ತುಗಳನ್ನು ತರುವಾಯದ ದಿನಗಳಲ್ಲಿ ಉಪಯೋಗದ ವಸ್ತುಗಳು ಎಂದು ಗುರುತಿಸುವುದಕ್ಕೆ ಬದಲಾಗಿ ಅವುಗಳ ಕಲಾತ್ಮಕತೆಯ ಕಡೆಗೆ ಹೆಚ್ಚು ಶ್ರದ್ಧೆಯನ್ನು ಕೇಂದ್ರೀಕರಿಸಿದ್ದಾನೆ ಎಂದೆನಿಸುತ್ತದೆ.[2]

ಪ್ರವಾಸಿಗರನ್ನು ಕೈ ಬೀಸಿ ಕರೆಯುತ್ತಾ ಜಗತ್ಪ್ರಸಿದ್ಧಿ ಪಡೆದಿರುವ ಚನ್ನಪಟ್ಟಣ ಬೊಂಬೆಗಳಿಂದಾಗಿ "ಬೊಂಬೆಗಳ ನಗರ" (ಟಾಯ್ಸ್ ಸಿಟಿ) ಎಂಬ ಹೆಸರು ಪಡೆದಿದೆ.[3]

ಚನ್ನಪಟ್ಟಣದ ಕರಕುಶಲತೆಗಳಲ್ಲಿ ರೇಷ್ಮೆ ನೂಲು ತೆಗೆಯುವುದು, ನೇಯ್ಗೆ, ಮಣ್ಣಿನ ಮಡಿಕೆ, ಕುಡಿಕೆಗಳ ತಯಾರಿಕೆ, ಬಿದಿರಿನಿಂದ ಬುಟ್ಟಿ, ಮೊರಗಳನ್ನು ಹೆಣೆಯುವುದು, ಮರದ ಆಟಿಕೆಗಳ ತಯಾರಿಕೆ ಪ್ರಮುಖವಾಗಿ ಕಂಡು ಬಂದರೂ ದೇಶ ವಿದೇಶಗಳಲ್ಲಿ ಚನ್ನಪಟ್ಟಣದ ಕೀರ್ತಿ ಧ್ವಜವನ್ನು ಹಾರಿಸುತ್ತಿರುವ ಈ ಬಣ್ಣದ ಬೊಂಬೆಗಳ ಉದ್ದಿಮೆ ಬಹು ಮಹತ್ವವುಳ್ಳದ್ದು.

ಕವಿ ಜಿ.ಪಿ.ರಾಜರತ್ನಂರವರ 'ಚನ್ನಪಟ್ಟಣದ ಬಣ್ಣದ ಬೊಂಬೆ' ಕವನದ ಸಾಲುಗಳು ಚನ್ನಪಟ್ಟಣದ ವೈಶಿಷ್ಟ್ಯಕ್ಕೆ ಹಿಡಿದ ಕನ್ನಡಿ. ನೋಡುಗರ ಮನಸೂರೆಗೊಂಡು ಇವುಗಳ ದರ್ಶನ ಮಾತ್ರದಿಂದಲೇ ಕವಿತೆ ರಚಿಸುವ ಮಟ್ಟಿಗೆ ಈ ಬೊಂಬೆಗಳು ಸ್ಫೂರ್ತಿ ನೀಡುತ್ತವೆ ಎಂದರೆ ಇವುಗಳ ಬಗ್ಗೆ ಮತ್ತೇನನ್ನು ಹೇಳಬೇಕಿಲ್ಲ. ನಮ್ಮ ಪೂರ್ವಜರ ಕರ ಕೌಶಲ್ಯವನ್ನು ಇವುಗಳು ಪರಿಚಯಿಸುತ್ತವೆ.

2.2 ಬೊಂಬೆಗಳ ತಯಾರಿಕೆ :

ಚನ್ನಪಟ್ಟಣದ ಬೊಂಬೆ ತಯಾರಿಕೆಗೆ ಸುಮಾರು 200 ರಿಂದ 250 ವರ್ಷಗಳ ಇತಿಹಾಸವಿದೆ.[4] ಚನ್ನಪಟ್ಟಣದ ಚಾರಿತ್ರಿಕ ಹಿನ್ನೆಲೆಯನ್ನು ಗಮನಿಸಿದಾಗ ಈ ಪ್ರದೇಶವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಗಂಗರು ತದನಂತರ ಚೋಳರು, ಹೊಯ್ಸಳರು, ಪಾಳೆಯಗಾರರು ಹೀಗೆ ಚನ್ನಪಟ್ಟಣವನ್ನಾಳಿದ ಈ ರಾಜ ಮನೆತನಗಳು ಇಲ್ಲಿನ ಕರಕುಶಲ ಕೈಗಾರಿಕೆಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಿದಂತೆ ಕಂಡು ಬರುವುದಿಲ್ಲ. ಆದರೆ ಈ ರಾಜ ಮನೆತನಗಳ ಆಳ್ವಿಕೆಯ ವೇಳೆ ನಿರ್ಮಾಣಗೊಂಡ ಕೆಲವು ದೇವಾಲಯಗಳು, ಶಿಲ್ಪಗಳು, ಮೂರ್ತಿಗಳು ಮುಂದೆ ಈ ಕರಕುಶಲತೆಯ ಕೈಗಾರಿಕೆಗಳಲ್ಲಿ ವಿವಿಧ ಭಂಗಿಯ, ವಿವಿಧ ರೂಪದ ಬೊಂಬೆಗಳ ತಯಾರಿಕೆಗೆ ಸ್ಫೂರ್ತಿಯಾಗಿರಬಹುದೆಂದು ಊಹಿಸಬಹುದು. ನಂತರದ ಕಾಲದಲ್ಲಿ ಈ ಪ್ರದೇಶವು ಹೈದರಾಲಿ ಮತ್ತು ಟಿಪ್ಪು ಸುಲ್ತಾನನ ಆಳ್ವಿಕೆಗೆ ಒಳಪಟ್ಟಾಗ ಈ ಕರಕುಶಲ ಉದ್ದಿಮೆಗೆ ಪ್ರೋತ್ಸಾಹ ಸಿಕ್ಕಿರುವುದು. ಅದರಲ್ಲೂ ಟಿಪ್ಪುವಿನ ಬೆಂಬಲ ಅಪಾರ ಪ್ರಮಾಣದಲ್ಲಿ ದೊರಕಿರುವುದು ತಿಳಿದು ಬರುತ್ತದೆ. ಮೈಸೂರು ಅರಸರ ಆಳ್ವಿಕೆಯ ಮಧ್ಯಂತರದಲ್ಲಿ ಮೈಸೂರು ಪ್ರಾಂತ್ಯವನ್ನಾಳಿದ ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಆಳ್ವಿಕೆಗೆ ಚನ್ನಪಟ್ಟಣವು ಒಳಗಾಗಿತ್ತು. ಟಿಪ್ಪುವಿನ ಆಳ್ವಿಕೆಯ ವೇಳೆಗಾಗಲೆ ಬಹುವಾಗಿ ಹರಡಿದ್ದ ಈ ಕಲೆಗೆ ಹೈದರಾಲಿ 'ಮತ್ತು ಟಿಪ್ಪು ಸುಲ್ತಾನ್ ವಿಶೇಷ ಆಸ್ಥೆ ವಹಿಸಿದರು.[5]

2.2.1 ಹಾಲೆಮರ:

ತನ್ನದೇ ಆದ ವಿಶಿಷ್ಟ ಆಕರ್ಷಣೆಯೊಂದಿಗೆ ದೇಶ ವಿದೇಶಗಳೆಲ್ಲೆಡೆ ಪ್ರಸಿದ್ಧಿ ಪಡೆದಿರುವ ಈ ಬೊಂಬೆಗಳ ತಯಾರಿಕೆ ಇಲ್ಲಿ ಜನ್ಮ ಪಡೆದ ಬಗ್ಗೆ ನಿರ್ದಿಷ್ಟ ಕಾರಣಗಳು ದೊರೆಯುವುದಿಲ್ಲ. ಸುಮಾರು 250 ವರ್ಷಗಳ ಇತಿಹಾಸವಿರುವ ಈ ಉದ್ದಿಮೆಯ ಉಗಮಕ್ಕೆ ಸಂಬಂಧಿಸಿದಂತೆ, ಬದುಕಿನುದ್ದಕ್ಕೂ ಇದೇ ವೃತ್ತಿಯನ್ನು

ಅವಲಂಬಿಸಿ ಜೀವನ ಸವೆಸಿರುವ ಹಿರಿಯ ಜೀವಿಗಳು ಹೇಳುವ ಪ್ರಕಾರ ಮೈಸೂರಿನ ಅರಸರ ಆಳ್ವಿಕೆಗೆ ಒಳಪಟ್ಟಿದ್ದ ಚನ್ನಪಟ್ಟಣದಲ್ಲಿ ಬೊಂಬೆ ತಯಾರಿಕೆಗೆ ಬೇಕಾದ ಕಚ್ಚಾವಸ್ತು ಹಾಲೆಮರ ಈ ಭಾಗದಲ್ಲಿ ಯಥೇಚ್ಚವಾಗಿ ದೊರೆಯುತ್ತಿತ್ತು. ಬೊಂಬೆ ತಯಾರಿಕಾ ಕಲೆಯನ್ನು ಜಪಾನ್‌ನಲ್ಲಿ ಕರಗತ ಮಾಡಿಕೊಂಡಿದ್ದ ವಿದೇಶದಿಂದ ಬಂದ ಮುಸಲ್ಮಾನ ವ್ಯಕ್ತಿಯೊಬ್ಬ ಇಲ್ಲಿನ ಮೃದುವಾದ ಹಾಲೆಮರಗಳನ್ನು ಗುರ್ತಿಸಿ ಈ ಕಲೆಯನ್ನು ಇಲ್ಲಿ ಬಿತ್ತಿದ. ಹಲವಾರು ಕೆಲಸವಿಲ್ಲದ ಕೈಗಳಿಗೆ ನೀಡಿದ ಈ ಕಲೆ ಬಡತನದಲ್ಲಿದ್ದ ಎಷ್ಟೋ ಕುಟುಂಬಗಳಿಗೆ ಈ ಕಲೆ ಮರು ಜೀವನ ನೀಡಿತು.[6]

ಚನ್ನಪಟ್ಟಣದ ಸುತ್ತ ಮುತ್ತಲ ಪ್ರದೇಶಗಳಲ್ಲಿ (ಗ್ರಾಮಗಳಲ್ಲಿ) ಈಗಲೂ ದೊರೆಯುವ ಹಾಲೆಮರಗಳನ್ನು ಗಮನಿಸಿದರೆ ಅಂದಿನ ಕಾಲಕ್ಕೆ ಈ ಮರಗಳ ದೊರೆಯುವಿಕೆ ಯಥೇಚ್ಚವಾಗಿತ್ತು ಎಂಬುದು ನಿಶ್ಚಿತವಾಗುತ್ತದೆ (ಚಿತ್ರ–3). ಚನ್ನಪಟ್ಟಣದ ಚಾರಿತ್ರಿಕ ಹಿನ್ನೆಲೆಯ ಪ್ರಕಾರ ಇಲ್ಲಿ ಬೆಳೆದ ದಾಸ ಪರಂಪರೆಯ ಸಾಹಿತ್ಯದಲ್ಲಿ ಈ ಕರಕುಶಲತೆಯ ಬಗೆಗಿನ ಉಲ್ಲೇಖವಿದೆ ಎಂದು ಹೇಳಲಾಗುತ್ತದೆ. ಇದನ್ನು ಗಮನಿಸಿದಾಗ ಚನ್ನಪಟ್ಟಣದ ಕರಕುಶಲತೆಯ ಇತಿಹಾಸವು ಇನ್ನೂ 100 ವರ್ಷಗಳ ಹಿಂದಕ್ಕೆ ಹೋಗುವುದರಿಂದ ಅದರ ಪ್ರಾಚೀನತೆಯ ಅರಿವಾಗುತ್ತದೆ. ಆದರೆ ಇದಕ್ಕೆ ನಿಖರ ಆಧಾರಗಳ ಕೊರತೆ ಇದ್ದು ನಮಗೆ ಈವರೆಗಿನ ದಾಖಲೆಗಳ ಪ್ರಕಾರ ಈ ಕರಕುಶಲತೆಯು, ಟಿಪ್ಪು ಸುಲ್ತಾನನ ಕಾಲದಲ್ಲಿ ಸುಲ್ತಾನನ ಪ್ರೋತ್ಸಾಹದಿಂದಾಗಿ ತನ್ನ ವೈಶಿಷ್ಟ್ಯತೆಯನ್ನು ಮೈಗೂಡಿಸಿಕೊಂಡಿರುವುದು ಕಂಡು ಬರುತ್ತದೆ.

2.2.2 ಬೊಂಬೆಗಳ ತಯಾರಿಕಾ ಕಲೆಯ ಪರಿಚಯ :

ಬಾವಸ್‌ಮಿಯಾ :

ಲಭ್ಯ ಮೂಲಗಳ ಪ್ರಕಾರ ಕರಕುಶಲತೆಯ ಉಗಮ ಪ್ರಾಚೀನತೆಯನ್ನು ಕೆದಕಿದಾಗ ಚನ್ನಪಟ್ಟಣದಲ್ಲಿ ಈ ಉದ್ದಿಮೆಯು ಮೊದಲಿಗೆ ಬಾವಸ್‌ಮಿಯಾ ಎಂಬ ಮುಸಲ್ಮಾನ್ ವ್ಯಕ್ತಿಯಿಂದ ಆರಂಭಗೊಂಡಿರುವುದು ತಿಳಿದು ಬರುತ್ತದೆ.[7] (ಚಿತ್ರ–4). ಈ ವ್ಯಕ್ತಿ ಮೂಲತಃ ಚನ್ನಪಟ್ಟಣದವರಲ್ಲ, ತಾನು ವಿದೇಶದಲ್ಲಿ ಕರಗತ ಮಾಡಿಕೊಂಡಿದ್ದ ಕಲೆಯನ್ನು ಇಲ್ಲಿ ಆರಂಭಿಸಿದರು. ಇದಕ್ಕೆ ಪೂರಕವಾಗಿ ಅವರಿಗೆ ಪ್ರೇರಕವಾಗಿದ್ದ ಅಂಶವೆಂದರೆ ಈ ಪ್ರದೇಶದಲ್ಲಿ ಬಹು ವಿಸ್ತಾರವಾಗಿ ಹರಡಿದ್ದ ಹಾಲೆಮರ.

ಅರಣ್ಯ ಸಂಪತ್ತುಗಳಲ್ಲಿ ಒಂದಾದ ಈ ಹಾಲೆಮರವು ಬೊಂಬೆಗಳ ತಯಾರಿಕೆಗೆ ಅಥವಾ ಮರದ ಆಟಿಕೆಗಳಿಗೆ ಬಹು ಉಪಯೋಗಿಯಾಗಿರುವುದು ಅದರ ಮೃದುತ್ವದ ಗುಣದಿಂದ. ಈ ಮರವು ಬಹು ಮೃದುವಾಗಿದ್ದು ತನಗೆ ಬೇಕಾದ ಆಕಾರಕ್ಕೆ ಅನುಗುಣವಾಗಿ ಮರದ ವಸ್ತುಗಳನ್ನು ಸಿದ್ಧಪಡಿಸಲು ಸಾಧ್ಯವಾಗುತ್ತದೆ. ಹಾಗಾಗಿ ಈ ಹಾಲೆಮರದ ವಿಶೇಷತೆಯಿಂದಾಗಿ ಈ ಪ್ರದೇಶದಲ್ಲಿ ಕರಕುಶಲತೆ

ಅಭಿವೃದ್ಧಿಯಾಗಿರಬಹುದು. ಆರಂಭದಲ್ಲಿ ಬಾವಸ್‌ಮಿಯಾರವರು ಈ ಉದ್ದಿಮೆಯನ್ನು ಸಣ್ಣದಾಗಿ ತನ್ನ ವೃತ್ತಿಯಾಗಿ ಆರಂಭಿಸುವುದರ ಮೂಲಕ ಇಲ್ಲಿಯ ಇತರೆ ಜನ ಸಮೂಹಕ್ಕೂ ಈ ಕಲೆಯನ್ನು ಪರಿಚಯಿಸಿಕೊಟ್ಟರು. ಪ್ರಾರಂಭದಲ್ಲಿ ಈ ಬೊಂಬೆಗಳ ತಯಾರಿಕೆಗೆ ಯಾವ ಯಂತ್ರಗಳ ಬಳಕೆಯೂ ಇರಲಿಲ್ಲ. ಮೊದಲು ಯಾವ ಯಂತ್ರ ಶಕ್ತಿಯನ್ನು ಬಳಸದೆ ಕೈಗಳಿಂದ ಚಾಲನೆಯಾಗುವ ಲೇತ್‌ಗಳನ್ನು ಬಳಸಿ ಇವುಗಳನ್ನು ತಯಾರಿಸಲಾಗುತ್ತಿತ್ತು. ಈ ವೃತ್ತಿಯನ್ನು ಮೈಗೂಡಿಸಿಕೊಂಡ ಎಷ್ಟೋ ಜನರಿಗೆ ಈ ಕಲೆ ಜೀವನಾಧಾರವಾಯಿತು.

ಆರಂಭದಲ್ಲಿ ಈ ಕರಕುಶಲತೆಯಲ್ಲಿ ತಯಾರಾಗುತ್ತಿದ್ದ ಪ್ರಮುಖ ವಸ್ತುಗಳೆಂದರೆ ಪೆನ್‌ಗಳು, ಮಣಿಗಳು ಹಾಗೂ ಸಣ್ಣ ಸಣ್ಣ ಬೊಂಬೆಗಳು. ಇವುಗಳಿಗೆ ಬಣ್ಣ ನೀಡುವ ಕಲೆಯೂ ಸಹ ಸ್ವಾಭಾವಿಕವಾಗಿ ದೊರೆಯುವ ಪ್ರಾಕೃತಿಕ ಮೂಲದ ಬಣ್ಣಗಳನ್ನೆ ಆಧರಿಸಿತ್ತು.[8] ಈ ಕಲೆಯಲ್ಲಿ ಬಾವಸ್‌ಮಿಯಾರವರ ತಲ್ಲೀನತೆ ಈ ಕಲೆ ಹೆಚ್ಚು ಹೆಚ್ಚು ಹರಡಲು, ರಾಜ-ಮಹಾರಾಜರುಗಳ ಗಮನ ಸೆಳೆಯಲು ಸಾಧ್ಯವಾಯಿತು. ಇಂದಿಗೂ ಹಲವು ಜನಾಂಗದವರ ಜೀವನಾಧಾರವಾಗಿರುವ ಈ ಕರಕುಶಲತೆಯಿಂದಾಗಿ ಬಾವಸ್‌ಮಿಯಾ ಜನ ಮನದಲ್ಲಿ ನೆಲೆಗೊಂಡಿದ್ದಾರೆ. ಅವರ ನೆನಪಿಗಾಗಿ ಇಂದಿಗೂ ಚನ್ನಪಟ್ಟಣ ಪೇಟೆಚೇರಿಯ ವೃತ್ತ ಒಂದಕ್ಕೆ ಬಾವಸ್‌ಮಿಯಾ ವೃತ್ತ ಎಂದೇ ಹೆಸರಿಡಲಾಗಿದೆ. ಇಂದು ಚನ್ನಪಟ್ಟಣದ ಕರಕುಶಲತೆಯ ಉದ್ಯಮಕ್ಕೆ, ಆ ಮೂಲಕ ಈ ಪಟ್ಟಣದ ಹೆಸರು ವಿಶ್ವ ವಿಖ್ಯಾತಗೊಳ್ಳಲು ಕಾರಣವಾದ ಈ ವ್ಯಕ್ತಿಯ ಕೊಡುಗೆ ಅಪಾರವಾದುದು.

2.2.3 ಸಯ್ಯದ್ ನಿಜಾಂ :

ಉದ್ಯಮದ ಪ್ರಾಚೀನತೆಯಲ್ಲಿ ಸೇರ್ಪಡೆಯಾಗುವ ಮತ್ತೊಂದು ಹೆಸರೆಂದರೆ ಶ್ರೀ ಸಯ್ಯದ್ ನಿಜಾಂರದು. ಶ್ರೀ ಸಯ್ಯದ್ ಆಶ್ರಫ್‌ರವರ ಮಗನಾಗಿ, ಆಗಸ್ಟ್ 7, 1919 ರಂದು ಚನ್ನಪಟ್ಟಣದಲ್ಲಿ ಸಯ್ಯದ್ ನಿಜಾಂರು ಜನ್ಮತಳೆದರು. ತಮ್ಮ ಮಾಧ್ಯಮಿಕ ಶಿಕ್ಷಣವನ್ನು ಚನ್ನಪಟ್ಟಣದಲ್ಲಿಯೇ ಮುಗಿಸಿ ಮೈಸೂರು ವಿಶ್ವ ವಿದ್ಯಾಲಯದಲ್ಲಿ 1938 ರಲ್ಲಿ ಇಂಟರ್ ಮೀಡಿಯೇಟ್ ಶಿಕ್ಷಣವನ್ನು ಪಡೆದರು. ಅಷ್ಟೆ ಅಲ್ಲದೆ ತಮ್ಮ ಬಿ.ಎ. ಪದವಿಯನ್ನು 1941 ರಲ್ಲಿ ಮೈಸೂರು ವಿಶ್ವ ವಿದ್ಯಾಲಯದಿಂದ ಪಡೆದರು. ಬಿ.ಎ. ಪದವೀಧರರಾದ ಸಯ್ಯದ್ ನಿಜಾಮರು 1942 ರಲ್ಲಿ ಲಾಹೋರಿನಲ್ಲಿ ಅರಗು ಕರಕುಶಲತೆಯಲ್ಲಿ ಡಿಪ್ಲಮೋ ವ್ಯಾಸಂಗಕ್ಕಾಗಿ ತೆರಳಿ ಮೂರು ವರ್ಷಗಳ ವ್ಯಾಸಂಗದ ನಂತರ ಪಂಜಾಬ್ ರಾಜ್ಯದ ಲಾಹೋರಿನ Mayo School of Arts ಮೂಲಕ ಅರಗು ಕರಕುಶಲತೆಯ ಡಿಪ್ಲಮೋ ಪದವಿ ಪ್ರಮಾಣ ಪತ್ರವನ್ನು 1944 ರಲ್ಲಿ ಪಡೆದರು (ಚಿತ್ರ-5). ತನ್ನ ನಿರಂತರ ಪರಿಶ್ರಮ, ಪ್ರಾಮಾಣಿಕತೆ, ವಿಷಯದಲ್ಲಿನ ಶ್ರದ್ಧೆ, ತಲ್ಲೀನತೆಯಿಂದ ಅಧ್ಯಾಪಕರುಗಳ ಮೆಚ್ಚುಗೆಗೆ ಪಾತ್ರರಾಗಿದ್ದ ನಿಜಾಂರವರನ್ನು 1945 ರಲ್ಲಿ ಪಂಜಾಂಬಿನ ಅರಗು ಕರಕುಶಲ ಕೈಗಾರಿಕೆಯ ತಾತ್ಕಾಲಿಕ ಸಹಾಯಕ

ಬೋಧಕರಾಗಿ ಚನ್ನಪಟ್ಟಣ ಕರಕುಶಲ ತರಬೇತಿ ಕೇಂದ್ರಕ್ಕೆ ನೇಮಕ ಮಾಡಿತು. ಕೆಲವು ವರ್ಷಗಳ ಕಾಲ ಚನ್ನಪಟ್ಟಣ ಕರಕುಶಲ ತರಬೇತಿ ಕೇಂದ್ರದಲ್ಲಿ ಬೋಧಕರಾಗಿ ಸೇವೆ ಸಲ್ಲಿಸಿದ ನಂತರ ಇವರನ್ನು ನೆಲಮಂಗಲದ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಕ್ಕೆ ವರ್ಗಾವಣೆ ಮಾಡಲಾಯಿತು.[9]

ಚನ್ನಪಟ್ಟಣದ ಕರಕುಶಲ ತರಬೇತಿ ಕೇಂದ್ರವು 1902 ರಲ್ಲಿ ಸ್ಥಾಪನೆಯಾಗಿದ್ದು ಈ ಕರಕುಶಲ ಉದ್ದಿಮೆಯ ಪ್ರಾಚೀನತೆಯನ್ನು ನಿರೂಪಿಸಿದರೆ ಆ ಕೇಂದ್ರಗಳಲ್ಲಿ ಸೇವೆ ಸಲ್ಲಿಸಿರುವ ವ್ಯಕ್ತಿಗಳು ಈ ಉದ್ದಿಮೆಗೆ ನೀಡಿರುವ ಕೊಡುಗೆಗೆಗಳನ್ನು ಪ್ರತಿನಿಧಿಸುತ್ತವೆ. ಅಂತಹ ವ್ಯಕ್ತಿಗಳ ಸಾಲಿಗೆ ಸೇರುವ ಹಜರತ್ ಸಯ್ಯದ್ ನಿಜಾಂರವರದು ಉತ್ತಮ ವ್ಯಕ್ತಿತ್ವವೇ ಸರಿ.

ಕರಕುಶಲತೆಯ ಪ್ರಾಚೀನತೆಯನ್ನು ಗಮನಿಸಿದಾಗ ನಮಗೆ ಲಭ್ಯವಾಗುವ ಒಟ್ಟಾರೆ ಸಾರಂಶವೆಂದರೆ ಸಮೃದ್ಧ ಹಾಲೆ ಮರಗಳ ಬಳಕೆಗಾಗಿ ಹುಟ್ಟಿಕೊಂಡ ಈ ಕಲೆ ರಾಜ ಮಹಾರಾಜರುಗಳಿಂದ ಈ ನಾಡನ್ನು ಆಳಿದ ನಾಯಕರುಗಳಿಂದ ಪ್ರೋತ್ಸಾಹಗೊಂಡು ಸ್ವಾತಂತ್ರ್ಯ ಪೂರ್ವದಲ್ಲಿಯೇ ತರಬೇತಿ ಕೇಂದ್ರಗಳ ಸ್ಥಾಪನೆಯಾಗಿ ಆ ಮೂಲಕ ಕುಶಲ ಕರ್ಮಿಗಳ ಹುಟ್ಟುವಿಕೆಗೆ ಕಾರಣವಾಗಿರುವುದು ಸ್ಪುಟವಾಗುತ್ತದೆ. ನಂತರದ ದಿನಗಳಲ್ಲಿ ಕೇವಲ ಮನುಷ್ಯನ ಶಕ್ತಿ ಬಲದಿಂದ ಮಾತ್ರವೇ ನಡೆಯುತ್ತಿದ್ದ ಈ ಕರಕುಶಲ ಕೈಗಾರಿಕೆಗಳು ಕಾಲಾನಂತರದಲ್ಲಿ ಯಂತ್ರಗಳ ಬಳಕೆಯನ್ನು ಅಳವಡಿಸಿಕೊಂಡಿರುವುದು ಕಂಡು ಬರುತ್ತದೆ. ಯಂತ್ರಗಳ ಬಳಕೆಯಿಂದ ಉತ್ಪಾದನೆ ಹೆಚ್ಚಿತಲ್ಲದೆ, ಒಂದೇ ಆಕಾರದ ಒಂದೇ ಗ್ರಾತ್ರದ ವಸ್ತುಗಳ ತಯಾರಿಕೆಗೆ ಅತಿ ಸಣ್ಣ ಗಾತ್ರದ ವಸ್ತುಗಳಿಂದ ಹಿಡಿದು ಮನುಷ್ಯನ ಗಾತ್ರಕ್ಕಿಂತಲೂ ಹೆಚ್ಚಿನ ಗಾತ್ರದ ಬೊಂಬೆಗಳ ತಯಾರಿಕೆಗೂ ಸಹ ಸಹಕಾರಿಯಾಯಿತು. 1970ಕ್ಕೂ ಮೊದಲು ಕೇವಲ ರಾಮನು ಯುದ್ಧಕ್ಕೆ ಹೊರಟ ಬೊಂಬೆಗಳು, ಅಡುಗೆ ಸಾಮಾನುಗಳ ಸೆಟ್‌ಗಳು, ದೇವರ ವಿಗ್ರಹಗಳು, ಪ್ರಾಣಿಪಕ್ಷಿಗಳ ವಿವಿಧ ಭಂಗಿಯ ವಿಗ್ರಹಗಳು ಇವುಗಳ ತಯಾರಿಕೆಯು ಪ್ರಾಧಾನ್ಯತೆ ಹೊಂದಿದ್ದು ನಂತರದ ದಿನಗಳಲ್ಲಿ ಅದು ಬದಲಾವಣೆಯಾಗಿರುವುದನ್ನು ಕಾಣಬಹುದು.[10]

2.2.4 ಎಂ.ಲಿಂಗಯ್ಯ :

ಕರಕುಶಲತೆಯ ಪ್ರಾಚೀನತೆಯಲ್ಲಿ ಸೇರ್ಪಡೆಯಾಗುವ ಮತ್ತೊಂದು ಹೆಸರು ಎಂ.ಲಿಂಗಯ್ಯನವರದು (ಚಿತ್ರ–6). ವೃತ್ತಿಯಲ್ಲಿ ಕೆ.ಇ.ಬಿ. ಕ್ಯಾಷಿಯರ್ ಆಗಿದ್ದು ಇವರು ತಮ್ಮ ವೃತ್ತಿಯ ಜೊತೆಗೆ ಈ ಬಣ್ಣದ ಫ್ಯಾಕ್ಟರಿಯನ್ನು ಸಣ್ಣದಾಗಿ ಆರಂಭ ಮಾಡುತ್ತಾರೆ. ಈ ಉದ್ದಿಮೆಯ ಮಹತ್ವವರಿತ ಇವರು ಒಂದೆರಡು ಬಾರಿ ವಿದೇಶಗಳಿಗೂ ಭೇಟಿ ಕೊಟ್ಟು ಅಲ್ಲಿ ನಮ್ಮ ಕರಕುಶಲ ಕಲೆಯನ್ನು ಪರಿಚಯಿಸಿ ಆ ನಂತರದಲ್ಲಿ ಸಂಪೂರ್ಣವಾಗಿ ಈ ಉದ್ದಿಮೆಗೆ ತೊಡಗಿಸಿ ಕೊಳ್ಳುವಲ್ಲಿ ತಮ್ಮ ಗಮನ

ಕೇಂದ್ರಿಕರಿಸುತ್ತಾರೆ. ಇವರಲ್ಲಿಯೂ ಆರಂಭದಲ್ಲಿ ತಯಾರಾಗುತ್ತಿದ್ದ ವಸ್ತುಗಳೆಂದರೆ ಪೆನ್ ಹೋಲ್ಡರ್ಸ್, ರಬ್ಬರ್ ಸ್ಟಾಂಪ್, ದಿನಾಂಕ ಪಂಚಾಂಗ, ಮರದ ಹೂವಿನ ಕುಂದಗಳು, ಮಕ್ಕಳ ಆಟಿಕೆಗಳು. ಲಿಂಗಯ್ಯನವರು ಈ ವೃತ್ತಿಗೆ ಸಂಪೂರ್ಣವಾಗಿ ತೊಡಗಿಸಿಕೊಳ್ಳಲಿಕ್ಕೆ ಅವರ ಪತ್ನಿ ಜಯಮ್ಮನವರ ಸಹಕಾರವಿತ್ತು.[11] ಇಂದು ಚನ್ನಪಟ್ಟಣದ ಈ ಉದ್ದಿಮೆಯ ಬೆಳವಣಿಗೆಯಲ್ಲಿ ಇವರ ಪಾತ್ರ ಮಹತ್ವದ್ದು.

ಹೀಗೆ ಚನ್ನಪಟ್ಟಣದ ಮರದ ಕೈಗಾರಿಕೆಗಳು 300 ವರ್ಷಗಳ ಪ್ರಾಚೀನತೆ ಹೊಂದಿದ್ದು ವ್ಯಕ್ತಿಯಿಂದ ವ್ಯಕ್ತಿಗೆ, ತಲೆಮಾರಿನಿಂದ ತಲೆಮಾರಿಗೆ ಬೆಳೆದು ವಿಸ್ತಾರಗೊಂಡಿರುವುದು ಕಂಡು ಬರುತ್ತದೆ.

2.3 ಕುಂಬಾರಿಕೆ :

ಚನ್ನಪಟ್ಟಣದ ಕರಕುಶಲತೆಗಳ ಬಗ್ಗೆ ಹೇಳುವಾಗ ಈ ತಾಲ್ಲೂಕಿನ ಕುಡಿಕೆ ಬೇವೂರನ್ನು ಹೊರತುಪಡಿಸುವಂತಿಲ್ಲ. ಬೇವೂರು ಚನ್ನಪಟ್ಟಣದಿಂದ ಸುಮಾರು 13 ಕಿ.ಮೀ ದೂರದಲ್ಲಿದೆ. ಬಹಳ ಸಮೃದ್ಧವಾದ ಬೇವಿನ ಮರಗಳಿಂದ ಕೂಡಿದ ಅರಣ್ಯ ಸಂಪತ್ತನ್ನು ಹೊಂದಿದ್ದ ಈ ಬೇವಿನ ಊರಿಗೆ 'ಬೇವೂರು' ಎಂಬ ನಾಮಧೇಯ ಸಾರ್ಥಕವಾಗಿರಬಹುದೆಂದು ಅಭಿಪ್ರಾಯ ಪಡಲಾಗಿದೆ.[12] ಈ ಊರಿನ 'ಕುಂಬಾರ ಜನಾಂಗ'ದ ಕಲಾ ನಿಪುಣತೆಯನ್ನು ಮರೆಯುವಂತಿಲ್ಲ. ಇವರು ತಯಾರಿಸುವ ಮಡಕೆ, ಕುಡಿಕೆ ಹಾಗೂ ದೀಪಗಳು ವಿದೇಶಗಳಿಗೂ ರಫ್ತಾಗಿದೆ. ಈ ಕಾರಣಕ್ಕಾಗಿಯೇ 'ಕುಡಿಕೆ ಬೇವೂರು' ಎಂಬ ಹೆಸರು ಈ ಊರಿಗೆ ಬಂದಿರಬಹುದು (ಚಿತ್ರ–7).[13]

ಬೇವೂರಿನ ಕೆರೆಯಲ್ಲಿ ದೊರೆಯುವ ಜೇಡಿ ಮಣ್ಣು ಮಡಿಕೆ ತಯಾರಿಕೆಗೆ ಹದವಾಗಿದ್ದುದರಿಂದ ಬಹುಶ: ಈ ಭಾಗದಲ್ಲಿ ಮಡಿಕೆ–ಕುಡಿಕೆಗಳ ಕರಕುಶಲತೆ ಅಭಿವೃದ್ಧಿ ಹೊಂದಲು ಸಾಧ್ಯವಾಗಿರಬಹುದು. ತಲೆಮಾರುಗಳಿಂದ ವಂಶಪಾರಂಪರ್ಯವಾಗಿ ಈ ಕುಂಬಾರ ಜನಾಂಗಕ್ಕೆ ಬಂದಿರುವ ಈ ಕುಶಲತೆ ಈಗಲೂ ಮುಂದುವರೆದಿದೆ. ಈ ಕುಂಬಾರರು ಮಡಿಕೆಗಳ ತಯಾರಿಕೆಗೆ ಪ್ರಮುಖವಾಗಿ ಬಳಸುವ ಅಸ್ತ್ರವೆಂದರೆ ಚಕ್ರ. ಈ ಚಕ್ರ ವಿಷ್ಣುವಿನಿಂದ ಬಂದದ್ದು ಎಂದೂ ಕೂಡ ಹೇಳುತ್ತಾರೆ. ಮೂರು ಅಡಿ ಉದ್ದದ ಎರಡು ಮರದ ಪಟ್ಟಿಗಳನ್ನು ಒಂದರ ಮೇಲೊಂದು ಕುಯಲು ಮಾಡಿ ಪ್ಲಸ್ ಆಕಾರದಲ್ಲಿ ಸೇರಿಸಲಾಗಿದೆ. ಮೇಲ್ಪದರದ ಪಟ್ಟಿಯ ಮಧ್ಯ ಭಾಗವು ಸುಮಾರು ಒಂಭತ್ತು ಅಂಗುಲ ವ್ಯಾಸವುಳ್ಳ ಹಲಗೆಯಿದೆ. ಕೆಳಭಾಗದ ಪಟ್ಟಿಯ ಮಧ್ಯದಲ್ಲಿ ಚಕ್ರದ ಗುಂಭವಿದೆ. ನಾಲ್ಕು ಪಟ್ಟಿಗಳು ತುದಿಗೆ ಬಿದಿರು ಹಚ್ಚೆ, ಗಣಿಗಲು ಕಡ್ಡಿ, ಹೊಲಿ ಕಡ್ಡಿಗಳ ಬೆತ್ತದಿಂದ ಚಕ್ರಾಕಾರವಾಗಿ ಕಟ್ಟಿ ಸುತ್ತಲು ಮಣ್ಣಿನ ಕಟ್ಟೆ ಕಟ್ಟುತ್ತಾರೆ. ಇದಕ್ಕೆ ರಂಧ್ರಗಳನ್ನು ಮಾಡಿ ದೊಣ್ಣೆಯಿಂದ ಚಕ್ರ ತಿರುಗಿಸಲು ಅನುಕೂಲ ಮಾಡಿಕೊಳ್ಳುತ್ತಾರೆ (ಚಿತ್ರ–8).[14]

ಚಕ್ರವನ್ನು ತಿರುಗಿಸಿ ಮಧ್ಯದಲ್ಲಿನ ಮಣ್ಣಿನ ಮುದ್ದೆಯಿಂದ ತಮಗೆ ಬೇಕಾದ ಆಕಾರಗಳ ಮಡಿಕೆ ಕುಡಿಕೆಗಳನ್ನು ತಯಾರಿಸುತ್ತಾರೆ. ಈ ಕರಕುಶಲತೆಯ ಆರಂಭದಲ್ಲಿ ತಯಾರಾಗುತ್ತಿದ್ದ ವಸ್ತುಗಳೆಂದರೆ ಅಡಿಗೆ ಮಾಡಲು ಅನುಕೂಲವಾಗುವ ಪಾತ್ರೆಗಳು, ನೀರು ಸಂಗ್ರಹಿಸುವ ಮಡಿಕೆಗಳು, ದವಸ ಧಾನ್ಯಗಳನ್ನು ಸಂಗ್ರಹಿಸಲು ಅನುಕೂಲವಾಗುವ ಗುಡಾಣಗಳು ಪ್ರಮುಖವಾದವುಗಳು. ನಂತರದಲ್ಲಿ ದೇವತಾ ಕಾರ್ಯಗಳಲ್ಲಿ ದೇವರನ್ನು ತರಲು ಉಪಯೋಗವಾಗುವ ದೇವರ ಗಡಿಗೆಗಳ ತಯಾರಿಕೆ ಹಾಗೂ ಮಕ್ಕಳಿಗೆ ಆಟವಾಡಲು ಪುಟ್ಟ ಪುಟ್ಟ ಮಡಿಕೆ ಕುಡಿಕೆಗಳು, ಒಲೆ, ತಟ್ಟೆ, ಲೋಟಗಳು ತಯಾರಾಗುತ್ತಿದ್ದವು (ಚಿತ್ರ–9). ಈಗಲೂ ಮದುವೆ ಶುಭ ಸಮಾರಂಭಗಳಲ್ಲಿ ಈ ಮಡಿಕೆಗಳ ಬಳಕೆಯನ್ನು ಕಾಣುತ್ತೇವೆ. ಈ ಮಣ್ಣಿನ ಕರಕುಶಲತೆಯು ಚನ್ನಪಟ್ಟಣದ ಸುತ್ತಮುತ್ತಲ ಗ್ರಾಮಗಳಾದ ನಾಗವಾರ, ಪಾರೇದೊಡ್ಡಿಗಳಲ್ಲೂ ಪ್ರಚಲಿತದಲ್ಲಿದ್ದದ್ದು ಈಗ ಇತಿಹಾಸ.

2.4 ಸಂಗೀತ ವಾದ್ಯಗಳ ಬಿಡಿಭಾಗಗಳ ತಯಾರಿಕೆ :

ಕ್ರಿ.ಶ. 1800ರ ಜೂನ್‌ನಲ್ಲಿ ಚನ್ನಪಟ್ಟಣಕ್ಕೆ ಭೇಟಿ ನೀಡಿದ್ದ ಫ್ರಾನ್ಸಿಸ್ ಬುಕನಾನ್ ಚನ್ನಪಟ್ಟಣದ ಕರಕುಶಲತೆಯಲ್ಲಿ ಒಂದಾದ ವೀಣೆಗಳಿಗೆ ಹಾಕುವ ತಂತಿಯ ತಯಾರಿಕೆಯ ಬಗ್ಗೆ ಉಲ್ಲೇಖ ನೀಡಿದ್ದಾನೆ.

ಸಂಗೀತ ವಾದ್ಯಗಳಲ್ಲಿ ಒಂದಾದ ವೀಣೆಯ ತಂತಿಯ ತಯಾರಿಕೆ ಚನ್ನಪಟ್ಟಟದಲ್ಲಿ ಆಗುತ್ತಿದ್ದು ಅಲ್ಲಿಂದ ಭಾರತದ ವಿವಿಧ ಕಡೆಗಳಿಗೆ ರವಾನೆಯಾಗುತ್ತಿತ್ತು. ಈ ವೀಣೆ ತಂತಿಗಳ ತಯಾರಿಕಾ ಮಾಹಿತಿಯು ಕ್ಲೋಸ್‌ನಿಂದ ದೊರಕಿದ್ದು, ಕ್ಲೋಸ್ ಈ ಮಾಹಿತಿಯನ್ನು ಮೈಸೂರಿನ ರೆಸಿಡೆಂಟನಾಗಿದ್ದ ಇಂಗ್ಲೆಡ್ಯೂ (Mr.Ingledew) ನಿಂದ ಪಡೆದಿದ್ದನೆಂದು ಬುಕನಾನ್ ತಿಳಿಸಿದ್ದಾನೆ. ಕ್ಲೋಸ್‌ನಿಂದ ತಾನು ಪಡೆದ ಮಾಹಿತಿಯನ್ನು ಯಥಾವತ್ತಾಗಿ ನೀಡಿರುವ ಬುಕನಾನ್ ಈ ರೀತಿ ವಿವರಿಸಿದ್ದಾನೆ.

ವೀಣೆ ತಂತಿಗಳ ತಯಾರಿಕೆಯ ಮೊದಲು ಯಾವುದೇ ಪ್ರಮಾಣದ ಉಕ್ಕನ್ನು ತೆಗೆದುಕೊಂಡು ಅದನ್ನು ಇದ್ದಿಲಿನಿಂದ ಕಾಯಿಸಿ ಸಂಪೂರ್ಣ ಕೆಂಪು ಬಣ್ಣಕ್ಕೆ ತಿರುಗುವವರೆಗೆ ಕಾಯಿಸಿ ನಂತರ ಅದನ್ನು ಸುತ್ತಿಗೆಯಿಂದ ಹೊಡೆದು ಪುನಃ ಬೆಂಕಿಯಲ್ಲಿ ಕಾಯಿಸಿ ಪುನಃ ಹೊಡೆದು ಹೀಗೆ ಕನಿಷ್ಟ ಎಂಟು ಬಾರಿ ಮಾಡಿದಾಗ ಮೂಲ ಉಕ್ಕಿನ ಪ್ರಮಾಣ 1/5 ಭಾಗಕ್ಕೆ ಇಳಿಯುತ್ತದೆ. ನಂತರ ಅದನ್ನು ಸಣ್ಣ ಸಣ್ಣ ಭಾಗಗಳಾಗಿ ಕತ್ತರಿಸಿ ಪುನಃ ಕಾಯಿಸಿ ಸಣ್ಣ ಸಣ್ಣ ರಂಧ್ರಗಳ ಮೂಲಕ ತಮಗೆ ಬೇಕಾದ ಗಾತ್ರದ ತಂತಿಗಳನ್ನು ಪಡೆಯಲು ಉಕ್ಕನ್ನು ಹರಿಬಿಟ್ಟು ತಂತಿಗಳನ್ನು ಪಡೆಯುತ್ತಿದ್ದರು.[15] ಈ ಲಿಖಿತ ಆಧಾರವನ್ನು ಗಮನಿಸಿದಾಗ ವೀಣೆಗೆ ಬಳಸುವ ತಂತಿಗಳ ಕರಕುಶಲತೆಗೂ ಸಹ 200 ವರ್ಷಗಳ ಇತಿಹಾಸವಿರುವುದು ಹಾಗೆಯೇ

ಇಲ್ಲಿನ ಜನರ ಕುಶಲತೆಯ ಪ್ರಾವೀಣ್ಯತೆ ನಮಗೆ ಅರಿವಾಗುವುದರ ಜೊತೆಗೆ ಅಂದಿನ ಜನರ ಆಸಕ್ತಿಯನ್ನು ಅರಿಯಲು ಸಾಧ್ಯವಾಗುತ್ತದೆ. ಜನರಲ್ಲಿ ಸಂಗೀತಾಸಕ್ತಿಯು ವೀಣೆ ತಂತಿಗಳ ಉದ್ಯಮ ಉಗಮಕ್ಕೆ ಕಾರಣವಾಗಿರುವುದು ಮುಖ್ಯವಾಗುತ್ತದೆ.

2.5 ಹರಳು ತಯಾರಿಕೆ :

ಚನ್ನಪಟ್ಟಣದ ಕರಕುಶಲತೆಗಳಲ್ಲಿ ಮುಖ್ಯವಾಗಿ ತಿಳಿಯಲೇ ಬೇಕಾದ ಕರಕುಶಲ ಉದ್ದಿಮೆ ಎಂದರೆ ಕಲ್ಲುಗಳನ್ನು ಕತ್ತರಿಸಿ ವಿವಿಧ ಆಕಾರಗಳ ಹರಳುಗಳ ತಯಾರಿಕೆ. ಈ ಉದ್ದಿಮೆಗೆ ಚನ್ನಪಟ್ಟಣದಲ್ಲಿ ಸುಮಾರು 60 ವರ್ಷಗಳ ಇತಿಹಾಸವಿರಬಹುದು.[16] ದೊರೆತಿರುವ ಮೂಲಗಳ ಪ್ರಕಾರ ತಾಲ್ಲೂಕಿನ ಹೊನ್ನನಾಯಕನಹಳ್ಳಿಯಲ್ಲಿ ಈ ಹರಳು ಕಲ್ಲುಗಳ ಕಚ್ಚಾ ವಸ್ತು ಕಲ್ಲು ಗಣಿಗಳಿದ್ದು ಅಂದಾಜು 60 ವರ್ಷಗಳ ಹಿಂದೆ ಶ್ರೀ ಕಾಡಯ್ಯಶೆಟ್ಟಿಯವರು ಈ ಉದ್ದಿಮೆಗೆ ತಮ್ಮನ್ನು ತೊಡಗಿಸಿಕೊಂಡರು (ಚಿತ್ರ–10). ಈ ಭಾಗದಲ್ಲಿ ಸಿಗುವ ಕಲ್ಲಿಗೆ "ರೂಬಿ ಕೊರುನಮ್" (Roobi Corrnoum) ಎಂಬ ಹೆಸರಿದೆ. ಈ ಗಣಿ ಭಾಗವು ತುಮಕೂರು ಜಿಲ್ಲೆಯ ಹುಲಿಯೂರು ದುರ್ಗದಿಂದ ಚನ್ನಪಟ್ಟಣ ತಾಲ್ಲೂಕಿನ ಕೋಲೂರು ಹಾಗೂ ಹೊನ್ನಾಯಕನಹಳ್ಳಿಯಲ್ಲಿ ಲಭ್ಯವಿದ್ದು, ಈ ಭಾಗದಲ್ಲಿ ಸಿಗುವ ಕಲ್ಲು ಉನ್ನತ ಮೌಲ್ಯವುಳ್ಳದ್ದಾಗಿದ್ದು ಇವುಗಳಿಗೆ 'Mysore Star' ಎಂದೇ ಕರೆಯುತ್ತಾರೆ (ಚಿತ್ರ–11). ಮೂಲದಲ್ಲಿ ಈ ಉದ್ದಿಮೆಯು ಚನ್ನಪಟ್ಟಣದಲ್ಲಿ ಅಷ್ಟೇನು ಪ್ರಚಾರದಲ್ಲಿರಲಿಲ್ಲ. ತಮಿಳುನಾಡಿನ ನಾಗಪಟ್ಟಣದಲ್ಲಿ ಈ ಹರಳು ಉದ್ದಿಮೆ ನಡೆಯುತ್ತಿತ್ತು. ಅಲ್ಲಿಂದ ಈ ಊರಿಗೆ ಬಂದ ಜನ ಈ ಕೆಲಸಗಳನ್ನು ಆರಂಭಿಸಿದರೆನ್ನಲಾಗಿದೆ. ಪ್ರಾರಂಭದಲ್ಲಿ ಸಣ್ಣದಾಗಿದ್ದ ಈ ಉದ್ದಿಮೆ ಆಂಧ್ರ ಮೂಲದ ನಾಯ್ಡು ಜನಾಂಗದವರಿಂದ ಹೆಚ್ಚು ಹೆಚ್ಚು ಪ್ರಚಾರ ಗೊಂಡಿತು ಎನ್ನಲಾಗಿದೆ. ಇದರ ಜೊತೆಗೆ ಚನ್ನಪಟ್ಟಣ ತಾಲ್ಲೂಕಿನ ಹೊನ್ನಾಯಕನಹಳ್ಳಿಯಲ್ಲಿ ಇದರ ಗಣಿ ಪತ್ತೆಯಾಗಿ ಅದಕ್ಕೆ ಸರ್ಕಾರದ ಅನುಮತಿ ದೊರೆತು ಹೆಚ್ಚಿನ ಜನ ಇದರಲ್ಲಿ ಭಾಗಿಗಳಾಗಿದ್ದಾರೆ.

ಈ ಗಣಿಗಾರಿಕೆಯು ಕೆಲವೊಮ್ಮೆ ಕಡಿಮೆ ಆಳದ್ದು ದೊರೆತರೆ ಕೆಲವೊಮ್ಮೆ ಬಹಳ ಆಳದವರೆಗೂ ಭೂಮಿಯನ್ನು ಅಗೆದು ಈ ಕಲ್ಲುಗಳನ್ನು ಆರಿಸಬೇಕಾಗುತ್ತದೆ. ಈ ಕಚ್ಚಾ ಕಲ್ಲುಗಳನ್ನು ಉಜ್ಜಿ ನುಣುಪುಗೊಳಿಸಿ ಅವುಗಳನ್ನು ಜೈಪುರ, ಮದ್ರಾಸ್, ಬಾಂಬೆ, ಕಲ್ಕತ್ತಾಗಳಿಗೆ ಕಳುಹಿಸಿಕೊಡಲಾಗುತ್ತದೆ. ನಮ್ಮ ಈ ಭಾಗಕ್ಕಿಂತಲೂ ಹೊರ ದೇಶಗಳಲ್ಲಿ ಈ ಹರಳುಗಳಿಗೆ ಬಹಳ ಬೇಡಿಕೆ ಇದೆ. ಈ ಹರಳುಗಳಲ್ಲಿ ಉತ್ತಮ ಮಟ್ಟದ ಹರಳು 6 ಗೆರೆಗಳ ನಕ್ಷತ್ರಾಕೃತಿಯನ್ನು ಹೊಂದಿರುತ್ತದೆ. ಅದಕ್ಕೆ ಹೆಚ್ಚಿನ ಬೇಡಿಕೆ ಇರುತ್ತದೆ (ಚಿತ್ರ–12).[17]

ಕಚ್ಚಾ ಕಲ್ಲುಗಳನ್ನು ಸಿದ್ಧ ಹರಳುಗಳಾಗಿ ತಯಾರಿಸುವ ಕೃಷ್ಣಾರವರು ಹೇಳುವ ಪ್ರಕಾರ ಗಲ್ಫ್ ರಾಷ್ಟ್ರಗಳಲ್ಲಿ ಈ ಹರಳುಗಳನ್ನು ಶವ ಸಂಸ್ಕಾರಕ್ಕಾಗಿ ಬಳಸುತ್ತಾರೆಂಬ ಪ್ರತೀತಿಯು ಇದೆ. ದೇಶ ವಿದೇಶಗಳ ಜನರು ಈ ಕಲ್ಲುಗಳನ್ನು ಕೊಳ್ಳುತ್ತಿದ್ದಾರೆ.

ಚನ್ನಪಟ್ಟಣದಲ್ಲಿ ತಯಾರಾದ ಈ ಹರಳುಗಳು ರಾಜಸ್ಥಾನದ ಜೈಪುರದ ಮಾರುಕಟ್ಟೆಗಳಲ್ಲಿ ಬಹುವಾಗಿ ವ್ಯಾಪಾರವಾಗುತ್ತಿವೆ. ಇವುಗಳ ಬಳಕೆ ಜನರಿಂದ ಜನರಿಗೆ ಭಿನ್ನವಾಗಿದೆ. ಕೆಲವರು ಇವುಗಳನ್ನು ಬೆರಳಿನ ಉಂಗುರಗಳಿಗೆ ಬಳಸಿದರೆ, ಕೆಲವರು ಸರಗಳಿಗೆ ಹಾಕುವ ಡಾಲರ್‌ಗಳಿಗೆ ಹಾಗೂ ಕಿವಿಯೋಲೆಗಳಿಗೂ ಬಳಸುತ್ತಾರೆ. ಎಲ್ಲಾ ರಾಶಿಯವರೂ ಧರಿಸಬಹುದಾದ ಈ ಹರಳುಗಳಿಗೆ ವಿದೇಶದಲ್ಲಿ ಬೇಡಿಕೆ ಹೆಚ್ಚು. ಇನ್ನೂ ಕೆಲವರು ಕೇವಲ ಮನೆಯ ಅಲಂಕಾರಕ್ಕಾಗಿಯೂ ಈ ಹರಳುಗಳನ್ನು ಬಳಸುತ್ತಾರೆ. ಇತ್ತೀಚೆಗೆ ಹತನಾದ ಸದ್ದಾಂ ಹುಸೇನನ ಮನೆಯ ಹೆಬ್ಬಾಗಿಲಿಗೆ ಈ ರೀತಿಯ ಹರಳುಗಳನ್ನು ಅಂಟಿಸಲಾಗಿತ್ತಂತೆ.[18]

2.6 ರೇಷ್ಮೆ ಉದ್ದಿಮೆ :

ರೇಷ್ಮೆ ಉದ್ದಿಮೆಯು ಇತ್ತೀಚಿನ ದಿನಗಳಲ್ಲಿ ಶೀಘ್ರಗತಿಯ ಬೆಳವಣಿಗೆ ಹೊಂದಿ ಈ ಹಿಂದೆ ಪರಿಚಿತವಲ್ಲದ ಹಿಪ್ಪುನೇರಳೆಯ ಕೃಷಿಯು ಚನ್ನಪಟ್ಟಣ ತಾಲ್ಲೂಕಿನಾದ್ಯಂತ ಹರಡುತ್ತಿದೆ. ರೋಗರಹಿತ ರೇಷ್ಮೆ ತಳಿಯು ಚನ್ನಪಟ್ಟಣದಲ್ಲಿ ಅಭಿವೃದ್ಧಿ ಹೊಂದಿ ರೇಷ್ಮೆ ಇಲಾಖೆಯ ಗಮನ ಸೆಳೆಯಿತು.[19] ಚನ್ನಪಟ್ಟಣದ ರೇಷ್ಮೆ ಬೆಳೆಯು ಸಹ ಟಿಪ್ಪುವಿನ ಕೊಡುಗೆ ಎಂದರೆ ಅತಿಶಯೋಕ್ತಿಯಾಗಲಾರದು. ರೇಷ್ಮೆ ಬೆಳೆಯನ್ನು ಟಿಪ್ಪು ಚೀನಾ ರಾಷ್ಟ್ರದಿಂದ ತಂದು ಪರಿಚಯಿಸಿದ. ಇಂದಿಗೂ ತಾಲ್ಲೂಕಿನ ಜನತೆ ಬಹುಪಾಲು ರೇಷ್ಮೆ ಬೆಳೆಯಲ್ಲಿ ತೊಡಗಿದ್ದಾರೆಂದರೆ ಅದಕ್ಕೆ ಟಿಪ್ಪುವಿನ ಪಾತ್ರ ಗಣನೀಯವಾದುದು.

ಹೊಸ ರೇಷ್ಮೆ ಬೆಳೆಯನ್ನು ಪ್ರಪ್ರಥಮವಾಗಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ಕ್ರಿ.ಶ. 1710 ರಲ್ಲಿ ಬಂಗಾಳದಲ್ಲಿ ಪ್ರಾರಂಭಿಸಿತು. ನಂತರದಲ್ಲಿ ಕ್ರಿ.ಶ. 1769 ರಲ್ಲಿ ಆಧುನೀಕರಗೊಂಡ ರೇಷ್ಮೆ ಎಳೆ ತೆಗೆಯುವ ವಿಧಾನವನ್ನು ಪರಿಚಯಿಸಲಾಯಿತು. ಬಂಗಾಳ ಸರ್ಕಾರವು ಹೊಸ ರೇಷ್ಮೆ ತಳಿಗಳನ್ನು ಚೈನಾದಿಂದ 1771 ರಲ್ಲಿ ತಂದು 1772 ರಲ್ಲಿ ಪ್ರಥಮ ಫಿಲೇಚರ್ ಪ.ಬಂಗಾಳದ ಮುರ್ಷಿದಾಬಾದ್‌ನಲ್ಲಿ ಆರಂಭವಾಯಿತು.

ಮೈಸೂರಿನ ಹುಲಿ ಎಂದೇ ಕರೆಯಲ್ಪಡುವ ಟಿಪ್ಪು ಸುಲ್ತಾನ್ 1785 ರಲ್ಲಿ ರೇಷ್ಮೆ ಬೆಳೆಯ ಅಧ್ಯಯನಕ್ಕಾಗಿ ತನ್ನ ರಾಜ್ಯದಿಂದ ಜನರನ್ನು ಬಂಗಾಳಕ್ಕೆ ಕಳುಹಿಸಿದನು. ರೇಷ್ಮೆ ಬೆಳೆಯಲ್ಲಿ ಮೈಸೂರು ಸಂಸ್ಥಾನ ಅಗ್ರಗಣ್ಯವಾಗಿರಬೇಕೆಂಬುದು ಈತನ ಬಹು ದೊಡ್ಡ ಕನಸಾಗಿತ್ತು. ಇದು ನಂತರದ ದಿನಗಳಲ್ಲಿ ನಿಜವಾಯಿತು. ಈ ರೀತಿ ಬಂಗಾಳದಿಂದ ತರಬೇತಿ ಪಡೆದ ಜನರಿಂದ ಮೈಸೂರು ಸಂಸ್ಥಾನದಲ್ಲಿ ರೇಷ್ಮೆ ಬೆಳೆ ಆರಂಭವಾಗಿ ಚನ್ನಪಟ್ಟಣ ಮುಖ್ಯ ಕೇಂದ್ರವಾಯಿತು. ಅಂದಿನಿಂದ ಇಂದಿನವರೆಗೂ ಈ ಚನ್ನಪಟ್ಟಣದಲ್ಲಿ ರೇಷ್ಮೆ ಹುಳು ಸಾಕುವ, ಅದರಿಂದ ನೂಲು ತೆಗೆಯುವ ಅದನ್ನು ದಾರವಾಗಿ ಮಾರ್ಪಡಿಸಿ ಬಟ್ಟೆ ನೇಯುವ ಉದ್ದಿಮೆ ಈಗಲೂ ಚಿರಸ್ಥಾಯಿಯಾಗಿದೆ.

ಅಡಿಟಿಪ್ಪಣಿಗಳು :

1. ಕರೀಗೌಡಬೀಚನಹಳ್ಳಿ (ಸಂ.), 'ಕನ್ನಡ ವಿಶ್ವ ವಿದ್ಯಾಲಯ ವಿಶ್ವಕೋಶ-೨ ಕರಕುಶಲ ಕಲೆಗಳು,' ಪು.1.
2. ಅದೇ, ಪು.50.
3. ಹೆಚ್. ಕೃಷ್ಣೇಗೌಡ ಮತ್ತು ದೇ. ನಾರಾಯಣಸ್ವಾಮಿ, (ಸಂ.), 'ಕಣ್ವಸಿರಿ', ಪು.28.
4. ಅದೇ, ಪು.28.
5. ಅದೇ, ಪು.29.
6. ಅದೇ, ಪು.28.
7. ಎಸ್. ಬಸವರಾಜು, (ಸಂ.), 'ಚೈತ್ರ', ಪು.9
8. ಮೌಖಿಕ ಸಂದರ್ಶನ: ಸಯ್ಯದ್ ಬಸಾರತ್ ಉಲ್ಲಾ, ಮೆಹದವಿಯ ವೃತ್ತ, ಚನ್ನಪಟ್ಟಣ.
9. Autography of Hazrath Syed Nizam, P.1-2.
10. ಮೌಖಿಕ ಸಂದರ್ಶನ: ಸಯ್ಯದ್ ಬಸಾರತ್ ಉಲ್ಲಾ, ಮೆಹದವಿಯ ವೃತ್ತ, ಚನ್ನಪಟ್ಟಣ.
11. ಮೌಖಿಕ ಸಂದರ್ಶನ: ಈಶ್ವರರಾಜ್, ಮಾಲೀಕರು, ಶ್ರೀ ಟಾಯ್ಸ್ ಫ್ಯಾಕ್ಟರಿ, ಚನ್ನಪಟ್ಟಣ.
12. ಬಿ.ಟಿ. ಚಿಕ್ಕಮುಟ್ಟೇಗೌಡ ಮತ್ತು ಆರ್.ವಿ. ನಾರಾಯಣ, (ಸಂ.), 'ಕನಕಸಂಪದ', ಪು.93
13. ಅದೇ, ಪು.94.
14. ಅದೇ, ಪು.95.
15. Buchanan, 'Journey from Madras', Vol.1, Pp.151-152.
16. Suryanath U. Kamath (Chief Editor) 'Karnataka State Gazetteer Bangalore Rural District', P.394.
17. ಅದೇ, ಪು.394.
18. ಕೃಷ್ಣ, ಮದೀನಾಚೌಕ್, ಚನ್ನಪಟ್ಟಣ: ಮೌಖಿಕ ಸಂದರ್ಶನ.
19. Thompson, R.A. (Edr.). 'Campbell's 'Directory for Mysore and Bangalore', 1920, P.19.

ಅಧ್ಯಾಯ–3

ಕರಕುಶಲ ಕೈಗಾರಿಕೆಗಳ ಬೆಳವಣಿಗೆ

ಅಧ್ಯಾಯ–3

ಕರಕುಶಲ ಕೈಗಾರಿಕೆಗಳ ಬೆಳವಣಿಗೆ

ಚನ್ನಪಟ್ಟಣದ ಚಾರಿತ್ರಿಕ ಹಿನ್ನೆಲೆಯ ಪ್ರಕಾರ ಚನ್ನಪಟ್ಟಣವು ಗಂಗರು, ಚೋಳರು, ಮೈಸೂರಿನ ಒಡೆಯರು, ಪಾಳೆಯಗಾರರಿಂದ ಆಳಲ್ಪಟ್ಟು ಈ ಅವಧಿಗಳಲ್ಲಿ ಚನ್ನಪಟ್ಟಣದ ಕರಕುಶಲತೆಯ ಉಲ್ಲೇಖವಿದ್ದರೂ ಅವುಗಳಿಗೆ ದೊರೆತಿರುವ ಪ್ರೋತ್ಸಾಹ ಅಲ್ಪ. ದಕ್ಷಿಣ ಭಾರತದಲ್ಲಿ ಪ್ರಬಲ ಹಿಂದೂ ಸಾಮ್ರಾಜ್ಯವನ್ನು ಕಟ್ಟಿದ ವಿಜಯನಗರದ ಅರಸರಲ್ಲಿ ಪ್ರಮುಖನಾದ ಕೃಷ್ಣದೇವರಾಯನ ಕಾಲದಲ್ಲಿಯೇ ವಿದೇಶಿ ಕಲೆಗಳ ಅಭ್ಯಾಸ ಆರಂಭವಾಗಿತ್ತು. ಕೃಷ್ಣದೇವರಾಯ ವಿದೇಶಗಳ ಸಂಪರ್ಕ ಹೊಂದಿದ್ದನಲ್ಲದೆ ಅಲ್ಲಿಂದ ಜನರನ್ನು ಕರೆಸಿ ತನ್ನ ರಾಜ್ಯದ ಜನತೆಗೆ ತರಬೇತಿ ನೀಡಿಸುತ್ತಿದ್ದ ಪರಿಪಾಟವಿತ್ತು. ಈ ನಿಟ್ಟಿನಲ್ಲಿ ಹುಟ್ಟಿಕೊಂಡಿದ್ದೇ ಚನ್ನಪಟ್ಟಣದ ಈ ಬೊಂಬೆಗಳ ತಯಾರಿಕೆ. ನಾವು ಈಗಾಗಲೇ ಕರಕುಶಲತೆಯ ಉಗಮದಲ್ಲಿ ಹೇಳಿದಂತೆ ಚನ್ನಪಟ್ಟಣದ ಸುತ್ತಮುತ್ತಲ ಕಾಡುಗಳಲ್ಲಿದ್ದ ಯಥೇಚ್ಚ ಹಾಲೆಮರಗಳು ಈ ಕರಕುಶಲತೆಯ ಬೆಳವಣಿಗೆಗೆ ಸಹಾಯವಾದವು.

3.1 ಟಿಪ್ಪು ಮತ್ತು ಮೈಸೂರು ಒಡೆಯರ ಕಾಲದಲ್ಲಿ ಕರಕುಶಲತೆಯ ಬೆಳವಣಿಗೆ:

ಈ ಹಾಲೆಮರಗಳು ಬಹು ಮೃದುವಾಗಿದ್ದು, ಕುಟ್ಟೇ ಬರದ ಗುಣ ಹೊಂದಿದ್ದರಿಂದ ದೊಡ್ಡ ದೊಡ್ಡ ಕೊಂಬೆಗಳನ್ನು ಚಿಕ್ಕ ಚಿಕ್ಕ ತುಂಡುಗಳಾಗಿ ತಯಾರಿಸುತ್ತಿದ್ದರು. ನಂತರ ತಿರುಗಣಿಗೆ ಕೊಟ್ಟು ಬೇಕಾದ ಆಕಾರಕ್ಕೆ ತಂದು, ವಿವಿಧ ಬಣ್ಣದ ಅರಗುಗಳನ್ನು ಹಚ್ಚಲು ಬಿಲ್ಲಿನಾಕಾರದ ತಿರುಗಣೆಯನ್ನು ಉಪಯೋಗಿಸುತ್ತಿದ್ದರು. ಇದರಿಂದ ಅರಗು ಸುಲಭವಾಗಿ ಕರಗಿ ಬಣ್ಣದ ಆಟದ ಸಾಮಾನುಗಳಿಗೆ ಹರಡಿ ಕೊಳ್ಳುತ್ತಿದ್ದುದರಿಂದ ಇವುಗಳ ಬೆಳವಣಿಗೆ ಶೀಘ್ರಗತಿಯಲ್ಲಿ ಆಯಿತು.[1] ನಂತರದ ಕಾಲದಲ್ಲಿ ಟಿಪ್ಪು, ಮುಸ್ಲಿಂ ಜನಾಂಗದ ಬಹು ಭಾಗ ಈ ವೃತ್ತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರಿಂದ ಅದರ ಬಗ್ಗೆ ವಿಶೇಷ ಆಸಕ್ತಿ ವಹಿಸಿ ಪ್ರೋತ್ಸಾಹಿಸಿದನು.[2]

ವಿದೇಶಗಳಿಂದ ತರಬೇತುದಾರರನ್ನು ಕರೆಸಿ ಇಲ್ಲಿನ ಜನತೆಗೆ ವಿಶೇಷವಾಗಿ ತರಬೇತಿ ಕೊಡಿಸಿರುವುದನ್ನು ಇಲ್ಲಿ ಸ್ಮರಿಸಬಹುದು. ಟಿಪ್ಪುವಿನ ಕಾಲದಲ್ಲಿ ಚನ್ನಪಟ್ಟಣದ ಕರಕುಶಲತೆಯು ಸಾಕಷ್ಟು ಅಭಿವೃದ್ಧಿ ಹೊಂದಿರುವುದು ಕಂಡು ಬರುತ್ತದೆ. ಚನ್ನಪಟ್ಟಣದ ಬಹುಪಾಲು ಮುಸ್ಲಿಂ ಜನಾಂಗ ಈ ವೃತ್ತಿಯನ್ನು

ಅವಲಂಬಿಸಿದ್ದು ಸಹ ಟಿಪ್ಪು ಈ ಉದ್ದಿಮೆಗೆ ಒತ್ತಾಸೆ ನೀಡಲು ಕಾರಣವಾಗಿರಲೂಬಹುದು. ಟಿಪ್ಪುವಿನ ನಂತರ ಈ ಭಾಗವನ್ನಾಳಿದ ಮೈಸೂರಿನ ಒಡೆಯರು ಮೈಸೂರು ಸಂಸ್ಥಾನದ ವಿವಿಧ ಭಾಗಗಳಲ್ಲಿ ಕರಕುಶಲ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿ ಜನತೆಗೆ ಸೂಕ್ತ ತರಬೇತಿ ಕೊಡುವುದರ ಮೂಲಕ ಈ ಕಲೆಗೆ ಬೆನ್ನೆಲುಬಾಗಿದ್ದರು.

ಹೀಗೆ ಜನರಿಂದ ಜನರಿಗೆ ಈ ಕರಕುಶಲತೆಯು ಹರಡಿ ಚನ್ನಪಟ್ಟಣದ ಪ್ರಮುಖ ಉದ್ಯಮವಾಗಿ ಮಾರ್ಪಾಟಾಯಿತು. ಕ್ರಿ.ಶ. 1897 ರಲ್ಲಿ ಮೈಸೂರಿನ ನಜರಾಬಾದಿನಲ್ಲಿ ಪ್ರಾರಂಭವಾದ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಯದು ಕ್ಷಿಪ್ರಗತಿಯ ಬೆಳವಣಿಗೆ. ಕಲಾ ಹಾಗೂ ಗುಡಿ ಕೈಗಾರಿಕೆಯಲ್ಲಿ ವಿಶೇಷ ಶಿಕ್ಷಣ ತರಬೇತಿ ನೀಡುವ ಉದ್ದೇಶದಿಂದ ಕ್ರಿ.ಶ. 1903 ರಲ್ಲಿ ಇದನ್ನು ಕೇಂದ್ರೀಯ ಕಲಾ ಶಾಲೆಯನ್ನಾಗಿ ಮಾರ್ಪಡಿಸಲಾಯಿತು.[3] ಇದೇ ಅವಧಿಯಲ್ಲಿ ಚನ್ನಪಟ್ಟಣದ ಕರಕುಶಲತೆಯ ಬೆಳವಣಿಗೆಗೆಂದೇ ಹುಟ್ಟಿಕೊಂಡ ಪ್ರಪ್ರಥಮ ತರಬೇತಿ ಕೇಂದ್ರವೆಂದರೆ, ಕ್ರಿ.ಶ. 1902ರಲ್ಲಿ ಆರಂಭವಾದ ಕುಶಲಕರ್ಮಿ ತರಬೇತಿ ಸಂಸ್ಥೆ.[4] ಈ ತರಬೇತಿ ಸಂಸ್ಥೆಯಿಂದ ಹೆಚ್ಚು ಹೆಚ್ಚು ಜನ ತರಬೇತಿ ಹೊಂದಿ ತಮ್ಮನ್ನು ಈ ವೃತ್ತಿಯಲ್ಲಿ ತೊಡಗಿಸಿಕೊಂಡರು. ಕೇವಲ ಚನ್ನಪಟ್ಟಣದ ಪಟ್ಟಣದ ವ್ಯಾಪ್ತಿಯಲ್ಲಿದ್ದ ಈ ಕುಶಲತೆ ಹಳ್ಳಿ ಹಳ್ಳಿಗೂ ಹಬ್ಬಿತ್ತು. ತರಬೇತಿ ಕೇಂದ್ರದ ಲಾಭ ಪಡೆದ ಜನತೆ ತಮ್ಮ ಸ್ಥಳಗಳಲ್ಲಿ ಅವುಗಳನ್ನು ತಯಾರಿಸಿ ಪಟ್ಟಣಕ್ಕೆ ತಂದು ಮಾರಾಟ ಮಾಡುವಷ್ಟರ ಮಟ್ಟಿಗೆ ಬೆಳವಣಿಗೆ ಕಂಡಿತು. ಆದರೆ ಇಂದು ಬೇರೆ ಉದ್ಯಮಗಳ ಪ್ರಭಾವ ಈ ಕರಕುಶಲ ಕೇಂದ್ರದ ಮೇಲೆ ಆಗಿದ್ದು ಇಂದು ಈ ತರಬೇತಿ ಸಂಸ್ಥೆಯು ವಿದ್ಯಾಥಿಗಳ ಕೊರತೆಯನ್ನು ಅನುಭವಿಸುತ್ತಿದೆ. ಆದರೂ ಈವರೆಗೆ ಸಾವಿರಾರು ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ಕರಕುಶಲ ಉದ್ಯಮದ ಬೆಳವಣಿಗೆಗೆ ಕಾರಣವಾದದ್ದನ್ನು ನಾವು ಮರೆಯುವಂತಿಲ್ಲ.

ಸರ್ ಎಂ. ವಿಶ್ವೇಶ್ವರಯ್ಯನವರು ಮೈಸೂರಿನ ದಿವಾನರಾಗಿದ್ದಾಗ ನಾಲ್ವಡಿ ಕೃಷ್ಣ ರಾಜ ಒಡೆಯರ ಆಳ್ವಿಕೆಯ ಕಾಲದಲ್ಲಿ ಈ ಕರಕುಶಲ ಉದ್ದಿಮೆ ಸಾಕಷ್ಟು ಅಭಿವೃದ್ಧಿ ಹೊಂದಿದೆ. ಸರ್. ಎಂ. ವಿಶ್ವೇಶ್ವರಯ್ಯನವರು ಕ್ರಿ.ಶ. 1913ರಲ್ಲಿ ಮೈಸೂರು ಬ್ಯಾಂಕ್ ಸ್ಥಾಪಿಸಿದರು. ಬೆಂಗಳೂರಿನ ಶಾಖೆ ಆರಂಭವಾದ 6 ತಿಂಗಳುಗಳಲ್ಲಿಯೇ ಚನ್ನಪಟ್ಟಣದಲ್ಲಿ ಅದರ ಒಂದು ಶಾಖೆ ಆರಂಭವಾಯಿತೆಂದು, ಅದರಲ್ಲೂ ಇಲ್ಲಿ ಇದ್ದಂತಹ ಕರಕುಶಲ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಲೆಂದೇ ಇದನ್ನು ಆರಂಭಿಸಿದರು ಎಂಬುದು ಇಲ್ಲಿಯ ಹಿರಿಯರು ಹೇಳುವ ಮಾತು.[5] ಈ ಕರಕುಶಲ ಉದ್ದಿಮೆಯ ಸಮಸ್ಯೆಯಾದ ಹಣಕಾಸಿನ ಸಮಸ್ಯೆಯನ್ನು ನಿವಾರಿಸುವ ಸಲುವಾಗಿ ಅಂದೇ ಅದಕ್ಕೆ ಸೂಕ್ತ ವ್ಯವಸ್ಥೆ ಮಾಡಿರುವುದು, ಅವರು ಈ ಉದ್ದಿಮೆಗೆ ನೀಡಿರುವ

ಪ್ರೋತ್ಸಾಹ. ಹೀಗೆ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಹೆಚ್ಚು ಬೆಳವಣಿಗೆ ಕಂಡಿತು ಎನ್ನಬಹುದು.

ಈ ವೇಳೆಗಾಗಲೇ ಇಲ್ಲಿನ ಕರಕುಶಲತೆಯ ಅಭಿವೃದ್ಧಿಗಾಗಿ ಹೆಚ್ಚು ಹೆಚ್ಚು ಕುಶಲ ಕರ್ಮಿಗಳನ್ನು ತಯಾರು ಮಾಡಲು ಸ್ಥಾಪನೆಯಾಗಿದ್ದ ಕುಶಲಕರ್ಮಿ ತರಬೇತಿ ಸಂಸ್ಥೆಯಲ್ಲಿ ಸುತ್ತ ಮುತ್ತಲ ಹಳ್ಳಿಗಳಿಂದ ವಿದ್ಯಾರ್ಥಿಗಳನ್ನು ಕ್ರೋಢೀಕರಿಸಿ ಅವರಿಗೆ ಶಿಷ್ಯ ವೇತನ ನೀಡುವುದರ ಜೊತೆಗೆ ತರಬೇತಿ ನೀಡಲಾಗುತ್ತಿತ್ತು. ಅಷ್ಟೇ ಅಲ್ಲದೆ ಈ ತರಬೇತಿ ಸಂಸ್ಥೆಯಲ್ಲಿ ತಯಾರಾದ ವಸ್ತುಗಳನ್ನು ವರ್ಷಕ್ಕೆ ಒಮ್ಮೆ ಹರಾಜು ಹಾಕುವುದರ ಮೂಲಕ ಮಾರಾಟ ಮಾಡಲಾಗುತ್ತಿತ್ತು. ಈ ಕಾರಣಗಳಿಂದಾಗಿ ಈ ಕರಕುಶಲ ಉದ್ಯಮವು ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ಬೆಳವಣಿಗೆ ಕಾಣಲು ಸಾಧ್ಯವಾಯಿತು.

ಕುಶಲ ಕರ್ಮಿಗಳು ಹೆಚ್ಚಾದಂತೆಲ್ಲಾ ಚನ್ನಪಟ್ಟಣದ ಅಕ್ಕಪಕ್ಕದ ಗ್ರಾಮಗಳಾದ ನೀಲಸಂದ್ರ, ಹೊಂಗನೂರು, ಸಿಂಗರಾಜಿಪುರ, ಬ್ಯಾಡರಹಳ್ಳಿ, ಸುಣ್ಣಘಟ್ಟ, ಎಲೆಕೇರಿಗಳಲ್ಲಿ ಪಟ್ರೆ* ಕೆಲಸ ಚುರುಕಾಯಿತು. ಅಂದರೆ ಈ ಮರದ ವಸ್ತುಗಳ ತಯಾರಿಕೆಯಲ್ಲಿ ತಯಾರಾಗುವ ಸಣ್ಣ ಸಣ್ಣ ವಸ್ತುಗಳೆಲ್ಲ ಈ ಪಟ್ರೆ ಕೆಲಸದಲ್ಲಿ ಅಥವಾ ಮನುಷ್ಯ ಬಲದಿಂದ ನಡೆಯುವ ಲೇತ್‌ಗಳಲ್ಲಿ ಆಗುತ್ತಿದ್ದವು.

ಕ್ರಿ.ಶ. 1902 ರಲ್ಲಿ ತಮ್ಮದೇ ಆದ ಅಂಗಡಿಯನ್ನು ಆರಂಭಿಸಿದ ಕೆ.ಅಬ್ದುಲ್‌ಕರೀಮ್‌ರವರು ತಾಲ್ಲೂಕಿನ ವಾಜರ ಬೀದಿಯಲ್ಲಿ ಸಣ್ಣದಾಗಿ ಫ್ಯಾಕ್ಟರಿ ಆರಂಭಿಸಿ ಅದರಲ್ಲಿ ಉತ್ಪನ್ನವಾದ ವಸ್ತುಗಳನ್ನು ಅಂಗಡಿಯಲ್ಲಿ ಮಾರಾಟ ಮಾಡುತ್ತಿದ್ದರು. ಕರೀಮ್‌ರವರು 1924 ರಲ್ಲಿ ಅಂದಿನ ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ರವರಿಗೆ ಒಂದು ಪೆನ್‌ಸ್ಟ್ಯಾಂಡ್ ಮಾಡಿಕೊಟ್ಟಾಗ ಅದಕ್ಕೆ ಪ್ರತಿಯಾಗಿ ಮಹಾರಾಜರು 50 ರೂ.ಗಳ ಚೆಕ್ ನೀಡಿದರಂತೆ.[7] ಈ ರೀತಿ ಕುಶಲ ಕರ್ಮಿಗಳಿಗೆ ಬಹುಮಾನ ನೀಡಿ ಅವರನ್ನು ಉತ್ತೇಜಿಸಿದಂತೆ ಕಂಡು ಬರುತ್ತದೆ. ಹೀಗೆ ವಿವಿಧ ಕಡೆಗಳಿಂದ ಸಿದ್ಧವಾಗಿ ಬಂದ ಈ ಸಾಮಾನುಗಳನ್ನು ಉದಾಹರಣೆಗೆ ಗೊಂಬೆಗಳ ಪುಟ್ಟ ಪುಟ್ಟ ಕಾಲುಗಳು, ಕೈಗಳು, ಕಿವಿ, ಮೂಗು ಇತ್ಯಾದಿಗಳನ್ನು ಒಗ್ಗೂಡಿಸಿ ಉದ್ದಿಮೆದಾರರು ಅವುಗಳನ್ನು ಸಿದ್ಧಗೊಳಿಸಿ ಬೊಂಬೆಯ ರೂಪ ಕೊಡುತ್ತಿದ್ದರು.

3.2 ಜಪಾನಿ ತಂತ್ರಜ್ಞಾನದ ಬಳಕೆ:

ನೆಲಮಂಗಲದ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ಸೇವೆ ಸಲ್ಲಿಸುವಾಗ ಸಯ್ಯದ್ ನಿಜಾಮರವರಿಗೊಂದು ಸುವರ್ಣವಕಾಶ ಒದಗಿ ಬಂತು.

---

* ಪಟ್ರೆ : ಬೊಂಬೆಗಳ ತಯಾರಿಕೆಗೆ ಮಾನವ ಬಲದಿಂದ ನಡೆಯುತ್ತಿದ್ದ ಯಂತ್ರಗಳಿಗೆ ಪಟ್ರೆಗಳೆಂದು ಕರೆಯಲಾಗುತ್ತದೆ.

ನವದೆಹಲಿಯ ಕರಕುಶಲ ಸಮಿತಿಯು ಕೊಲಂಬೋ ಯೋಜನೆಯಡಿ 1959 ರಲ್ಲಿ ಸಯ್ಯದ್ ನಿಜಾಂರವರನ್ನು ಜಪಾನಿನಲ್ಲಿ ನಡೆಯುವ ಆರು ತಿಂಗಳ ಪ್ರಾಯೋಗಿಕ ತರಬೇತಿಗೆ ಆಯ್ಕೆ ಮಾಡಿತು. ಜಪಾನಿನಿಂದ ಹಿಂದುರುಗಿದ ನಂತರ 1961 ರವರೆಗೆ ಮೈಸೂರು ಸರ್ಕಾರದ ಕೈಗಾರಿಕಾ ಇಲಾಖೆಯ ಜೊತೆ ಕೆಲಸ ನಿರ್ವಹಿಸಿದ ಇವರು ಜಪಾನಿ ತಂತ್ರಜ್ಞಾನವು ಭಾರತದಲ್ಲಿ ಅಭಿವೃದ್ಧಿಯಾಗಬೇಕೆಂದು ಆಗ್ರಹಿಸಿದರು.[8]

ಜಪಾನಿ ತಂತ್ರಜ್ಞಾನದ ಪರಿಚಯ ಪಡೆದ ಇವರಿಗೆ ಕರಕುಶಲ ವಸ್ತುಗಳ ತಯಾರಿಕೆಯಲ್ಲಿ ಕೈಯಿಂದ ಮಾಡಿದ ವಸ್ತುಗಳಿಗೂ ಯಂತ್ರದಿಂದ ಮಾಡಿದ ವಸ್ತುಗಳಿಗೂ ಇದ್ದ ವ್ಯತ್ಯಾಸದಿಂದಾಗಿ ಈ ಕಲೆಯ ಅಭಿವೃದ್ಧಿಗೆ ಯಂತ್ರಗಳ ಬಳಕೆಯ ಅಗತ್ಯವನ್ನು ಮನಗಂಡು ಸರ್ಕಾರಕ್ಕೆ ತರಬೇತಿ ಕೇಂದ್ರಗಳಿಗೆ ಯಂತ್ರಗಳ ಅಗತ್ಯತೆಯನ್ನು ಒತ್ತಿ ಹೇಳಿದರೆನ್ನಲಾಗಿದೆ. ಆರು ತಿಂಗಳು ತಮ್ಮ ತರಬೇತಿ ಅವಧಿಯಲ್ಲಿ ನಿಜಾಂರವರು ಜಪಾನಿನ ನಗರದಲ್ಲಿ ಮರದ ವಸ್ತುಗಳ ತಯಾರಿಕೆಗೆ ಒಳಸುತ್ತಿದ್ದ ಯಂತ್ರಗಳು ನಿಖರವಾದ ಅಳತೆಗಳನ್ನೊಳಗೊಂಡ ಒಂದೇ ರೀತಿಯ ವಸ್ತುಗಳ ತಯಾರಿಕೆಗೆ ಸಹಾಯಕವಾಗುತ್ತಿದ್ದುದನ್ನು ಮನಗಂಡರು. ಈ ಮರದ ಬೊಂಬೆಗಳ ಮೇಲೆ ಬಣ್ಣ ಮೂಡಿಸಿ ಅವುಗಳ ಆಕರ್ಷತೆಯನ್ನು ಹೆಚ್ಚಿಸುವುದನ್ನು ಅಭ್ಯಸಿಸಿದರು. ಹೀಗೆ ಮರವನ್ನು ಹದ ಮಾಡುವ ಅವುಗಳಿಂದ ತನಗೆ ಬೇಕಾದ ಆಕಾರಕ್ಕೆ ಮರವನ್ನು ಸಿದ್ಧಪಡಿಸುವ ಯಾಂತ್ರೀಕೃತ ಲೇತ್‌ಗಳ ಬಳಕೆಯ ಅಗತ್ಯತೆ ಮತ್ತು ಮಹತ್ವವನ್ನು ಕಂಡುಕೊಂಡ ನಿಜಾಂರವರು ಪ್ರಾಯಶಃ ಜಪಾನಿ ತಂತ್ರಜ್ಞಾನಕ್ಕೆ ಮಾರುಹೋಗಲು ಕಾರಣವಾಗಿರಬಹುದು. ಅದೇನೇ ಇರಲಿ ಕರಕುಶಲ ಉದ್ದಿಮೆಗಳಲ್ಲಿ ಯಂತ್ರಗಳ ಬಳಕೆಯು ಕೊಲಂಬೋ ಯೋಜನೆಯಡಿ ಜಪಾನಿನ ಶಿಜೋಕ ನಗರದಲ್ಲಿ ನೀಡಿದ ತರಬೇತಿಯಿಂದಲೇ ಎಂದರೆ ತಪ್ಪಾಗಲಾರದು. ಹೀಗೆ ಚನ್ನಪಟ್ಟಣದ ಬೊಂಬೆಗಳ ತಯಾರಿಕಾ ಇತಿಹಾಸದಲ್ಲಿ ಲೇತ್ ಯಂತ್ರಗಳ ಆರಂಭ ನಿಜಾಂನಿಂದ ಆರಂಭವಾಯಿತು. ತದ ನಂತರ ಈ ಉದ್ದಿಮೆ ಹಿಂದಿಗಿಂತಲೂ ಚುರುಕಾಗಿ ವಸ್ತುಗಳ ಉತ್ಪಾದನೆಯಲ್ಲಿ ತೊಡಗಿತು.

ಯಾವುದೇ ಬಡ್ತಿಗಳಿಲ್ಲದ ಸರ್ಕಾರಿ ಕೆಲಸದಿಂದ ಬೇಸತ್ತ ಸಯ್ಯದ್ ನಿಜಾಂರವರು 1962 ರಲ್ಲಿ ತಮ್ಮ ಹುದ್ದೆಗೆ ರಾಜೀನಾಮೆ ನೀಡಿ ತಮ್ಮದೇ ಆದ ಸ್ವಂತ ಉದ್ದಿಮೆಯನ್ನು ಆರಂಭಿಸುತ್ತಾರೆ. ತಮ್ಮಲ್ಲಿ ಉತ್ಪಾದನೆಯಾಗುವ ವಸ್ತುಗಳಿಗೆ ಇವರು 'Mysore Pride Products' ಎಂದು ಹೆಸರಿಟ್ಟು ತಮ್ಮ ವ್ಯಾಪಾರ ವೃತ್ತಿಯನ್ನು ಪ್ರಾರಂಭಿಸಿದರು.[9]

3.3 ಕರಕುಶಲ ಉತ್ಪನ್ನಗಳು :

ಜಪಾನಿನ ತರಬೇತಿ ವೇಳೆಯಲ್ಲಿ ಸೈಯ್ಯದ್ ನಿಜಾಂರವರು ತಾವು ಕಂಡುಕೊಂಡ ಕೌಶಲ್ಯದಿಂದ ಎಲ್ಲಾ ಬಗೆಯ ಅರಗು ಮಾದರಿಯ ಉತ್ಪನ್ನಗಳಷ್ಟೆ

ಅಲ್ಲದೆ ಜಪಾನಿನಲ್ಲಿ ಬಹು ಪ್ರಖ್ಯಾತಿಗೊಂಡಿದ್ದ ಬಿದಿರು ಕಲೆಯನ್ನು ಪ್ರಪ್ರಥಮವಾಗಿ ಭಾರತದಲ್ಲಿ ಅದರಲ್ಲೂ ಚನ್ನಪಟ್ಟಣದಲ್ಲಿ ಆರಂಭಿಸುತ್ತಾರೆ. ಬಿದಿರಿನಿಂದ ಸಣ್ಣ ಸಣ್ಣ ಬುಟ್ಟಿಗಳನ್ನು ಹೆಣೆದು ಚಿತ್ತಾಕರ್ಷಕ ಬೊಂಬೆಗಳಿಗೆ ಅವುಗಳನ್ನು ಜೋಡಿಸಲಾಯಿತು. ಟೀ ತೋಟಗಳಲ್ಲಿ ಕೆಲಸ ಮಾಡುವ ಹೆಂಗಸರನ್ನು ನೆನಪಿಸುವ ಮಾದರಿಯ ಬೊಂಬೆಗಳು ಇಂದಿಗೂ ಜೀವಂತ ಕೃಷಿಕ ಮಹಿಳೆಯರನ್ನು ಬಿಂಬಿಸುವ ಬೊಂಬೆಗಳು ನಮ್ಮನ್ನು ಇನ್ನಷ್ಟು ಪ್ರಾಚೀನತೆಗೆ ಕೊಂಡೊಯ್ಯುತ್ತವೆ. ನಂತರದಲ್ಲಿ ಇವರು ತಯಾರಿಸಿದ ಉತ್ಪನ್ನಗಳೆಂದರೆ ಮಕ್ಕಳ ಆಟಿಕೆಗಳು, ಬೊಂಬೆಗಳು, ಅವುಗಳಲ್ಲೂ ಮುಖ್ಯವಾಗಿ ಭಾರತೀಯ ಸಂಸ್ಕೃತಿಯ ಪ್ರತೀಕವಾದ ಮೈಸೂರಿಗರು, ಮದ್ರಾಸಿಗಳು, ಪಂಜಾಬಿಗಳು, ರಜಪೂತರು, ಕಾಶ್ಮೀರಿಗಳು ಇನ್ನು ಮುಂತಾದ ಜೋಡಿ ಬೊಂಬೆಗಳು ಹೆಚ್ಚು ಹೆಚ್ಚು ಪ್ರಚಾರಗೊಂಡವು (ಚಿತ್ರ–14). ಕೇವಲ ದೇಶೀಯ ಸಂಸ್ಕೃತಿ ಅಷ್ಟೇ ಅಲ್ಲದೆ ವಿದೇಶಿ ಸಂಸ್ಕೃತಿಗಳನ್ನು ಸಹ ತಮ್ಮ ಬೊಂಬೆಗಳ ಮಾದರಿಗಳಲ್ಲಿ ಎತ್ತಿ ಹಿಡಿದಿದ್ದಾರೆ. ವಿದೇಶಿ ಸಂಸ್ಕೃತಿಗಳಲ್ಲಿ ಮುಖ್ಯವಾಗಿ ಕ್ರಿಶ್ಚಿಯನ್ನರ ಕ್ರಿಸ್‌ಮಸ್ ತಾತ ಎಂದೇ ಪ್ರಖ್ಯಾತನಾದ ಸಂತಾಕ್ಲೂಸ್, ಆಫ್ರಿಕಾದ ನೀಗ್ರೋಗಳು, ಅರೇಬಿಯನ್ನರು, ಎಸ್ಕಿಮೋಗಳು, ರಷ್ಯನ್ನರು ಇತ್ಯಾದಿ ಜನಾಂಗವನ್ನು ತಮ್ಮ ಬೊಂಬೆಗಳಲ್ಲಿ ಪ್ರತಿನಿಧಿಸಿದ್ದಾರೆ.[10] ಈ ಮಧ್ಯದಲ್ಲಿ 1967ರಲ್ಲಿ ನವ ದೆಹಲಿಯ ಸನ್–ಕಮಿಟಿಯ ಲೇಖನಿ ಮತ್ತು ಅದರ ಮುಳ್ಳು ತಯಾರಿಕಾ ಕೇಂದ್ರದ ಸದಸ್ಯರಾಗಿಯೂ ಆಯ್ಕೆಯಾದ ಇವರು ಬಿಹಾರದ ರಾಂಚಿಯ ಭಾರತೀಯ ಅರಗು ಸಂಶೋಧನಾ ಕೇಂದ್ರದಲ್ಲಿ ಹಲವಾರು ಹೊಸ ಹೊಸ ಉಪಯುಕ್ತ ಪ್ರಯೋಗಗಳನ್ನು ಮಾಡುವಲ್ಲಿಯೂ ಸಹ ಯಶಸ್ವಿಯಾದರು.

ಹೀಗೆ ಜಪಾನಿನ ಬಿದಿರು ಕಲೆ, ವಿವಿಧ ಸಂಸ್ಕೃತಿಗಳನ್ನು ತಮ್ಮ ಬೊಂಬೆಗಳಲ್ಲಿ ಪ್ರತಿಬಿಂಬಿಸುತ್ತಿದ್ದ ಉದ್ದಿಮೆಗೆ ಸಯ್ಯದ್ ನಿಜಾಂರವರು 1970ರಲ್ಲಿ ಹೊಸದೊಂದು ಮಾದರಿಯನ್ನು ಸೇರ್ಪಡೆಗೊಳಿಸಿದರು. ಅದೇ ಮರದಿಂದ ಮಾಡಿದ ಮಣಿಗಳ ಬಾಗಿಲ ಪರದೆಗಳು. ಬೆಂಗಳೂರಿನ ಪಂಚತಾರ ಹೋಟೆಲ್‌ಗಳಲ್ಲಿ ಈ ಮಣಿಗಳ ಪರದೆಗಳು ಪ್ರಮುಖವಾದಂತೆ ಇವುಗಳ ಬೇಡಿಕೆ ಹೆಚ್ಚಿ ಉದ್ದಿಮೆಗೆ ಹೊಸ ತಿರುವು ದೊರೆಯಿತು. ನಂತರದ ದಿನಗಳಲ್ಲಿ ಬಳಕೆಗೆ ಬಂದದ್ದೇ ಮರದಿಂದ ತಯಾರಾದ ಆಭರಣಗಳು ಅಥವಾ ಆಲಂಕಾರಿಕ ವಸ್ತುಗಳು ಉದಾಹರಣೆಗೆ ಮರದ ಮಣಿಗಳ ಸರ, ಮಣಿಯಿಂದಾದ ಕಿವಿಯೋಲೆಗಳು, ಕೈ ಬಳೆಗಳು ಇತ್ಯಾದಿ. ಈ ಉತ್ಪನ್ನಗಳಿಗೆ ಮರವನ್ನು ಹದಗೊಳಿಸಿ ಬೇಕಾದ ಆಕಾರ ನೀಡಿದ ನಂತರ ಅದನ್ನು ನುಣುಪುಗೊಳಿಸಲು ತಾಳೆ ಗರಿಗಳ ಬಳಕೆಯೂ ಆರಂಭವಾಯಿತು. ತದನಂತರ 1974ರಿಂದೀಚೆಗೆ ನ್ಯಾಪ್‌ಕಿನ್‌ರಿಂಗ್ಸ್, ಟೇಬಲ್‌ನ ಮೇಲಿನ ಹಾಸುಗಳು, ಇತ್ಯಾದಿಗಳ ಉತ್ಪಾದನೆ ಆರಂಭವಾಯಿತು.[11]

ಕರಕುಶಲ ಕಲೆಯು ಆಧುನಿಕತೆಯನ್ನು ಮೈಗೂಡಿಸಿಕೊಂಡಂತೆ ಅವುಗಳ ಅಭಿವೃದ್ಧಿಯಲ್ಲಿ ಗಣನೀಯ ಬದಲಾವಣೆಗಳಾದವು. ಉತ್ಪನ್ನಗಳ ತಯಾರಿಕೆಯಲ್ಲಿಯೂ ಪ್ರಮುಖ ಮಾರ್ಪಾಡುಗಳನ್ನು ಗಮನಿಸಬಹುದಾಗಿದ್ದು, ಹಾಲೆ ಮರಗಳ ಜೊತೆಗೆ ರಬ್ಬರ್ ಮರ, ತೇಗದ ಮರ, ಹರ್ಕ್ಯುಲೆಸ್, ಸಾಗುವಾನಿ, ರೋಸ್‌ವುಡ್, ಸಿಲ್ವರ್ ಟ್ರೀ ಇತ್ಯಾದಿ ಮರಗಳ ಬಳಕೆಯೂ ಶುರುವಾಯಿತು.[12] ಆರಂಭದಲ್ಲಿ ಅರಗಿಗೆ ಬಣ್ಣ ಸೇರಿಸಿ ಬೊಂಬೆಗಳಿಗೆ ಲೇಪನ ಮಾಡುತ್ತಿದ್ದುದ್ದು, ಇಂದು ಸ್ಪ್ರೇ ಮಾದರಿಯಲ್ಲಿ ಬಣ್ಣಗಳನ್ನು ನೀಡುತ್ತಿರುವುದು ಕರಕುಶಲ ಉದ್ದಿಮೆಗಳ ಬೆಳವಣಿಗೆಗಳಲ್ಲಿ ಒಂದಾಗಿದೆ. ಕೇವಲ ನೈಸರ್ಗಿಕ ಬಣ್ಣಗಳನ್ನು (Vegetable dye) ಬಳಸುತ್ತಿದ್ದ ಈ ಉತ್ಪಾದಕರು ಇಂದು Touch wood ಹಾಗೂ Polish ಗಳನ್ನು ಬಳಸುತ್ತಿದ್ದಾರೆ.

ಕರಕುಶಲ ಉದ್ದಿಮೆಗಳ ಬೆಳವಣಿಗೆ ದಿನದಿಂದ ದಿನಕ್ಕೆ ಹೆಚ್ಚಿದಂತೆಲ್ಲಾ ಸರ್ಕಾರವು ಇದರ ಕಡೆಗೆ ತನ್ನ ಗಮನ ಕೇಂದ್ರಿಕರಿಸಲು ಸಾಧ್ಯವಾಯಿತು. ಈ ಉದ್ದಿಮೆಗೆ ಪ್ರೋತ್ಸಾಹ ನೀಡಲೋಸುಗ ಸರ್ಕಾರವು 'Half Year Million Job Programme' ಎಂಬ ಹೆಸರಿನಲ್ಲಿ ಕುಶಲ ಕರ್ಮಿಗಳಿಗೆ ತರಬೇತಿ ನೀಡಲು ಉದ್ದೀಮೆದಾರರನ್ನು ಪ್ರೋತ್ಸಾಹಿಸಿತು. ಆ ವೇಳೆಯಲ್ಲಿ ಹಲವಾರು ತರಬೇತಿಗಳು ನಡೆದವು. ಈ ತರಬೇತಿಗಳೆಲ್ಲವೂ ಸಹ ಪಟ್ರಿ ಕೆಲಸಗಳಲ್ಲಿಯೇ ನಡೆದಿರುವುದು ಗಮನಾರ್ಹ. ಸ್ಥಳೀಯ ಮಟ್ಟದಲ್ಲಿದ್ದ ಈ ಕರಕುಶಲ ಉತ್ಪಾದಕ ವಸ್ತುಗಳ ಮಾರಾಟವು ವಿದೇಶೀ ವ್ಯಾಪಾರದಿಂದಾಗಿ ಬೇಡಿಕೆಯನ್ನು ಗಳಿಸಿದರ ಪರಿಣಾಮವಾಗಿ ಯಾಂತ್ರೀಕೃತ ಲೇತ್‌ಗಳ ಬಳಕೆ ಹೆಚ್ಚುತ್ತಾ ಹೋಯಿತು. ಎಷ್ಟೇ ಆಧುನಿಕವಾಗಿ ಈ ಉದ್ದಿಮೆ ಅಭಿವೃದ್ದಿ ಹೊಂದಿದರೂ ಮರಗಳನ್ನು ನುಣುಪು ಗೊಳಿಸಲು ಅಂದಿನಿಂದ ಇಂದಿನವರೆಗೂ ತಾಳೆಗರಿಗಳನ್ನು ಬಳಸುತ್ತಿರುವುದು ಗಮನಾರ್ಹ. ಹಾಗೆಯೇ ಈ ಉದ್ದಿಮೆಯಲ್ಲಿ ಉತ್ತಮ ಕಲಾ ರತ್ನಗಳಿದ್ದು ಅವರ ಶ್ರಮ ಕುಶಲತೆ ಚನ್ನಪಟ್ಟಣದ ಖ್ಯಾತಿ ಹರಡಲು ಅನುವು ಮಾಡಿ ಕೊಟ್ಟಿದ್ದು ಅವರಲ್ಲಿ ಕುಂಬಾರಗೇರಿ ವೆಂಕಟಯ್ಯ, ಕೊಡಂಟಿ ವೆಂಕಟಯ್ಯ, ಮಾನ್ಕೋಜಿರಾವ್, ಮುಸ್ಲಿಂ ಸುಮುದಾಯದ ನಿಜಾಂ ಹಾಗೂ ಸಾಬ್‌ಜಾನ್ ಉತ್ತಮ ಕೆಲಸಗಾರರು.[13] ಇವರ ಕುಶಲತೆಯಲ್ಲಿ ಅರಳಿದ ಕಲೆಯು ವಿದೇಶಿಯರನ್ನು ಸೆರೆ ಹಿಡಿಯುವಲ್ಲಿ ಸಾಧ್ಯವಾಯಿತಲ್ಲದೆ ಕಲೆಯ ಬೆಳವಣಿಗೆಗೂ ಪೂರಕವಾಯಿತು.

ಕರ್ನಾಟಕ ಸರ್ಕಾರದ ಕರ್ನಾಟಕ ಕರಕುಶಲ ಅಭಿವೃದ್ದಿ ನಿಗಮವು ಅರಗು ಕುಶಲ ಕಲಾ ಸಂಕೀರ್ಣವನ್ನು ಸ್ಥಾಪಿಸಿ ಆ ಮೂಲಕ ಸುಮಾರು 32 ಲೇತ್‌ಗಳನ್ನು ತರಿಸಿ ಈ ಸಂಕೀರ್ಣದಲ್ಲಿ ತರಬೇತಿ ನೀಡುವುದರ ಜೊತೆಗೆ ಉದ್ದಿಮೆಗೆ ಪ್ರೋತ್ಸಾಹಿಸಿರುವುದು ಕಂಡು ಬರುತ್ತದೆ. ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ

ಕಂಡು ಬರುವ ಎಂಪೋರಿಯಂಗಳು ಪ್ರವಾಸಿಗರನ್ನು ಆಕರ್ಷಿಸುತ್ತಿದ್ದು ಆ ಮೂಲಕ ಉದ್ದಿಮೆಯ ಬೆಳವಣಿಗೆಗೆ ಸಹಕಾರಿಯಾಗಿವೆ.

ತದನಂತರದಲ್ಲಿ ಹಲವಾರು ಸರ್ಕಾರೇತರ ಸಂಸ್ಥೆಗಳು (NGO's) ಈ ಉದ್ದಿಮೆಯ ಬೆಳವಣಿಗೆಗೆ ಸಹಕರಿಸಿದ್ದು ಅದನ್ನು ಉಳಿಸಿ ಬೆಳೆಸುವಲ್ಲಿ ಕಾರ್ಯಶೀಲವಾಗಿವೆ. ಅವುಗಳಲ್ಲಿ ಇತ್ತೀಚಿಗಷ್ಟೇ ಆರಂಭವಾಗಿ ಕಾರ್ಯ ನಿರ್ವಹಿಸುತ್ತಿರುವ MAYA (Movement for Alternative Youth Awarness) Organic Service ಕೂಡ ಒಂದಾಗಿದೆ. ಇದು ಪಟ್ಟಣದ ಪೇಟೆಚೇರಿ ಹಾಗೂ ಸಾತನೂರು ಸರ್ಕಲ್‌ಗಳಲ್ಲಿ ತನ್ನ ಕಛೇರಿಗಳನ್ನು ಹೊಂದಿದ್ದು ಶಿಷ್ಯ ವೇತನದೊಂದಿಗೆ ತರಬೇತಿಯನ್ನು ನೀಡುತ್ತಿದೆ.[14]

ಇತ್ತೀಚಿನ ದಿನಗಳಲ್ಲಿ ಬೃಹತ್ ಬಂಡವಾಳದೊಂದಿಗೆ ಸರ್ಕಾರವು ಚನ್ನಪಟ್ಟಣದ ಮಹದೇಶ್ವರ ನಗರದ ಬಳಿ 'Hitech Industries'ನ್ನು 'Handicrafts And Export Corporation' ನಿಂದ ಸ್ಥಾಪಿಸಿದ್ದು ಇದು ನೂರಾರು ಕುಶಲ ಕರ್ಮಿಗಳಿಗೆ ಉದ್ಯೋಗ ನೀಡುವ ಹಾಗೂ ಆ ಮೂಲಕ ಉದ್ದಿಮೆಯನ್ನು ಬೆಳೆಸುವ ಗುರಿ ಹೊಂದಿರುವುದು ಸರ್ಕಾರ ಈ ಉದ್ದಿಮೆಗೆ ತೋರಿಸಿರುವ ಆಸಕ್ತಿಗೆ ಸಾಕ್ಷಿಯಾಗಿದೆ. ಹೀಗೆ ಚನ್ನಪಟ್ಟಣದ ಕರಕುಶಲ ಉದ್ದಿಮೆಗಳಲ್ಲಿ ಒಂದಾದ ಮರದ ಆಟಿಕೆಗಳ ತಯಾರಿಕೆಯು ಸ್ವಾತಂತ್ರ್ಯ ಪೂರ್ವದಿಂದಲೂ ಇಂದಿನವರೆಗೆ ವಿವಿಧ ಹಂತಗಳಲ್ಲಿ ಬೆಳವಣಿಗೆ ಹೊಂದಿರುವುದನ್ನು ನೋಡಬಹುದು.

3.4 ಕುಂಬಾರಿಕೆ ಉದ್ದಿಮೆಯ ಬೆಳವಣಿಗೆ :

ಚನ್ನಪಟ್ಟಣದ ಕುಂಬಾರಿಕೆಯು ಅಂದಿನಿಂದ ಇತ್ತೀಚಿನ ದಿನಗಳವರೆಗೆ ಯಾವುದೇ ರಾಜರ, ಸಂಸ್ಥಾನಿಕರ, ಆಶ್ರಯ ಪಡೆದಂತೆ ಕಂಡು ಬರುವುದಿಲ್ಲ. ಜೇಡಿಮಣ್ಣಿನಿಂದ ಅರಳುವ ಈ ಕರಕುಶಲತೆಯು ಹೆಚ್ಚಿನ ಬದಲಾವಣೆಗೆ ಒಳಗಾಗದಂತೆ ಕಂಡು ಬರುವುದಿಲ್ಲ. ಪ್ರಾಚೀನ ಕಾಲದಿಂದಲೂ ಇಂದಿನವರೆಗೂ ಅದೇ ಜೇಡಿಮಣ್ಣಿನ ಸಂಗ್ರಹಣೆ, ಶುದ್ದೀಕರಿಸುವಿಕೆ, ಹದ ಗೊಳಿಸುವಿಕೆ, ಚಕ್ರದ ಬಳಕೆಯಿಂದ ವಿವಿಧ ಆಕಾರಗಳ ಮಡಿಕೆಗಳ ತಯಾರಿಕೆಗಳಲ್ಲಿ ಬದಲಾವಣೆಗಳು ಇಲ್ಲದಿರುವುದು ಈ ಉದ್ದಿಮೆಗೆ ಲಭ್ಯವಾಗಿಲ್ಲದ ಪ್ರೋತ್ಸಾಹದ ಕುರುಹಾಗಿದೆ. ಇಂದಿನ ದಿನಗಳಲ್ಲಿ ಗೃಹೋಪಯೋಗಿ ವಸ್ತುಗಳು ಪ್ಲಾಸ್ಟಿಕ್, ಸ್ಟೀಲ್ ಹಾಗೂ ಅಲ್ಯೂಮಿನಿಯಂಗಳಲ್ಲಿ ಲಭ್ಯವಾಗುತ್ತಿದ್ದಂತೆ ಮಣ್ಣಿನ ಮಡಿಕೆಗಳ ಬೇಡಿಕೆ ಇಲ್ಲದಾದಾಗ ಸರ್ಕಾರವು ಈ ಕಲೆಗೆ ಆಧುನಿಕ ಲೇಪನ ನೀಡಲು ಪ್ರಯತ್ನಿಸಿರುವುದು ಗೋಚರವಾಗುತ್ತದೆ. ಕೇವಲ ಗೃಹೋಪಯೋಗಿ ವಸ್ತುಗಳ ತಯಾರಿಕೆಗೆ, ನಂತರದ ದಿನಗಳಲ್ಲಿ ದೇವತಾಕಾರ್ಯಗಳಿಗೆ ಬಳಕೆಯಾಗುತ್ತಿದ್ದ ದೇವರಗಡಿಗೆಗಳ ತಯಾರಿಕೆಗೆ ಸೀಮಿತವಾಗಿದ್ದ ಈ ಕಲೆಯನ್ನು ಉಳಿಸಲೋಸುಗ ಇಂದು ತಾಲ್ಲೂಕಿಗೆ 6 ಕಿ.ಮೀ

ದೂರದಲ್ಲಿರುವ ಜಾನಪದ ಲೋಕದಲ್ಲಿ ಈ ಮಣ್ಣಿಗೆ ಬಣ್ಣ ಹಾಕಿ ವಿವಿಧ ಮುಖವಾಡಗಳ, ಹೂ ದಾನಿಗಳ, ಹೂ ಕುಂಡಗಳ, ಅಲಂಕಾರಿಕ ವಸ್ತುಗಳ ತಯಾರಿಕೆ ಹಾಗೂ ತರಬೇತಿಯು ಸರ್ಕಾರದಿಂದ ನಡೆಯುತ್ತಿದ್ದು ಇದು ಕುಂಬಾರಿಕೆ ಕಲೆಯ ಬೆಳವಣಿಗೆಯಾಗಿದೆ.

3.5 ವೀಣೆತಂತಿ ಉದ್ದಿಮೆಯ ಬೆಳವಣಿಗೆ :

ಒಂದು ಕಾಲಕ್ಕೆ ಚನ್ನಪಟ್ಟಣದಲ್ಲಿ ಹೆಸರುವಾಸಿಯಾಗಿದ್ದ ವೀಣೆ ತಂತಿಯ ತಯಾರಿಕಾ ಕರಕುಶಲತೆಯು ನಂತರದ ದಿನಗಳಲ್ಲಿ ಅಭಿವೃದ್ದಿಯಾದುದರ ಬಗ್ಗೆ ಯಾವುದೇ ಉಲ್ಲೇಖಗಳಿಲ್ಲ. ಹೈದರಾಲಿಯ ಕಾಲದಿಂದಲೂ ಇಲ್ಲಿ ತಯಾರಾದ ತಂತಿಗಳು ಪ್ರಸಿದ್ಧವಾಗಿದ್ದವು. ದೆಹಲಿಗೆ ಹೈದರಾಲಿ ಚನ್ನಪಟ್ಟಣದ ತಂತಿಗಳನ್ನು ಕಳುಹಿಸಿಕೊಟ್ಟಿದ್ದರಿಂದ ಇದಕ್ಕಾಗಿ ಅಲ್ಲಿ ಬೇಡಿಕೆ ಹೆಚ್ಚಿತ್ತು. ಇಲ್ಲಿ ತಯಾರಾದ ತಂತಿಯ ವಿಶೇಷಗಳೆಂದರೆ 1) ಸ್ಥಳದಲ್ಲೇ ತಯಾರಾದ ಉಕ್ಕನ್ನು ಬಳಸಿದ್ದು 2) ಇದನ್ನು ಹದವಾಗಿ ಕಾಯಿಸಿ ಬಡಿಯುವ ಕೌಶಲ. 20ನೇಯ ಶತಮಾನದ ಆರಂಭದ ವೇಳೆಗೆ ಚನ್ನಪಟ್ಟಣದ ಈ ಕೈಗಾರಿಕೆ ಅವನತಿ ಹೊಂದುತ್ತಿತ್ತು ಇದಕ್ಕೆ ಮೂಲ ಕಾರಣಗಳಿದ್ದವು. 1) ಬೇಡಿಕೆ ಕಡಿಮೆಯಾದುದ್ದು 2) ಉತ್ಕೃಷ್ಟ ಮಟ್ಟದ ವಿಶಿಷ್ಟವಾದ ಉಕ್ಕಿನ ಪೂರೈಕೆಯಲ್ಲಿ ಇದ್ದ ತೊಂದರೆ 3) ಮೈಸೂರಿನಲ್ಲಿ ಬೀಡು ಕಬ್ಬಿಣದಿಂದ ಉಕ್ಕನ್ನು ತಯಾರಿಸುವ ಕೈಗಾರಿಕೆ ನಾಶವಾಗಿ, ಕಾಲಾನಂತರ ಈ ಕೈಗಾರಿಕೆಯಲ್ಲಿ ಕೆಲಸ ಮಾಡುತ್ತಿದ್ದ ಕುಶಲ ಕರ್ಮಿಗಳ ಸಂಖ್ಯೆ ಇಳಿಯಿತು.[15] ಕಾಲಾನಂತರದಲ್ಲಿ ಸಂಗೀತದ ಬಗೆಗಿನ ಆಸಕ್ತಿ ಕಡಿಮೆಯಾದದ್ದು ಈ ಉದ್ದಿಮೆಯ ಅನಭಿವೃದ್ದಿಗೆ ಕಾರಣವಾಗಿರಬಹುದು. ಇಲ್ಲವೆ ಆಧುನಿಕ ತಂತ್ರಜ್ಞಾನಗಳ ಅಳವಡಿಕೆಯಾದಂತೆ ವೀಣೆ ತಂತಿಗಳಲ್ಲಿಯೂ ಮಾರ್ಪಾಡುಗಳಾದದ್ದು ಸಹ ಈ ಉದ್ದಿಮೆಗೆ ಕುಂದಾದಂತೆ ಕಂಡು ಬರುತ್ತದೆ.

3.6 ಹರಳು ಉದ್ದಿಮೆ ಬೆಳವಣಿಗೆ :

ಆರಂಭದಲ್ಲಿ ಹರಳು ಗಣಿ ಪತ್ತೆಯಾದಾಗ ಹರಳುಗಳ ಪ್ರಾಮುಖ್ಯತೆಯ ಹೆಚ್ಚಿನ ಅರಿವಿಲ್ಲದ್ದರಿಂದ ಚನ್ನಪಟ್ಟಣದಲ್ಲಿ ಹರಳು ತಯಾರಿಕಾ ಉದ್ದಿಮೆ ಪ್ರಗತಿದಾಯಕವಾಗಿರಲಿಲ್ಲವೆಂದೆನಿಸುತ್ತದೆ. ನಂತರದಲ್ಲಿ ಈ ಕಲ್ಲುಗಳನ್ನು ಉಜ್ಜಿ ಬಹಳ ನುಣುಪಾದ ಹರಳುಗಳನ್ನಾಗಿ ಮಾರ್ಪಡಿಸುವ, ಕೆಲಸಗಾರರು ಹೆಚ್ಚಿದಂತೆ ಈ ಹರಳು ಗಣಿಗಳ ಶೋಧನಾ ಕಾರ್ಯಕ್ಕೆ ಚಾಲನೆ ದೊರೆಯಿತು. ಈ ಕೆಲಸಗಾರರು ತಮ್ಮಲ್ಲಿ ತಯಾರಿಸಿದ ಹರಳುಗಳನ್ನು ಗಣಿಯ ಮಾಲೀಕರಿಗೆ ಹಿಂದಿರುಗಿಸಿ ಈ ಮಾಲೀಕರು ಅವುಗಳನ್ನು ರಪ್ತು ಮಾಡಲು ಆರಂಭಿಸಿದಾಗ ಈ ಹರಳುಗಳಿಗೆ ಪ್ರಾಮುಖ್ಯತೆ ದೊರೆತು ಈ ಕರಕುಶಲ ಕಲೆ ಅಭಿವೃದ್ಧಿಯಾಗ ತೊಡಗಿತು.

ನಂತರದ ದಿನಗಳಲ್ಲಿ ನಾಲ್ಕಾರು ಕುಟುಂಬಗಳಿಂದ 10–20 ಕುಟುಂಬಗಳಷ್ಟು ಜನರು ಈ ಹರಳು ಉದ್ದಿಮೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಾಗ ಗಣಿಗಳ ಶೋಧನೆ ದಿನದಿಂದ ದಿನಕ್ಕೆ ಹೆಚ್ಚಿ ಈ ಕೆಲಸಗಾರರು ಮಾಲೀಕರಿಂದ ಕಲ್ಲುಗಳನ್ನು ಕೊಂಡು ಹರಳುಗಳಾಗಿ ಮಾರ್ಪಡಿಸಿ ತಾವೇ ಮಧ್ಯವರ್ತಿಗಳಿಗೆ ಮಾರಾಟ ಮಾಡತೊಡಗಿದರು. ಅಲ್ಪ ಲಾಭ ಕಂಡ ಈ ಕೆಲಸಗಾರರು ಹೆಚ್ಚು ಹೆಚ್ಚು ಈ ಉದ್ದಿಮೆಯಲ್ಲಿ ತೊಡಗಿಸಿಕೊಂಡು ಇಂದಿಗೂ ಚನ್ನಪಟ್ಟಣದ ಮದೀನಾ ಚೌಕ್‌ನಲ್ಲಿ ಈ ಕೆಲಸಗಾರರು ಹೆಚ್ಚಾಗಿದ್ದಾರೆ.

ಇಂದು ಈ ಹರಳುಗಳ ತಯಾರಿಕೆಯು ಸಂಪೂರ್ಣವಾಗಿ ಯಂತ್ರಗಳ ಬಳಕೆಯಿಂದಾಗುತ್ತಿದ್ದು, ಗಣಿ ಭಾಗದಲ್ಲಿ ಕಲ್ಲುಗಳನ್ನು ತೆಗೆಯಲು ಸರ್ಕಾರವು 20 ವರ್ಷಗಳಿಗೊಮ್ಮೆ ಅನುಮತಿಯನ್ನು ಪುನರ್ ನವೀಕರಣಗೊಳಿಸಿ ಕೊಡುವುದನ್ನು ಬಿಟ್ಟರೆ ಬೇರ್‍ಯಾವ ಸವಲತ್ತುಗಳು ಈ ಉದ್ದಿಮೆಯ ಬೆಳವಣಿಗೆಗೆ ಸರ್ಕಾರದ ಕಡೆಯಿಂದಾಗಿರುವುದು ಕಂಡು ಬರುವುದಿಲ್ಲ.

3.7 ರೇಷ್ಮೆ ಉದ್ದಿಮೆ ಬೆಳವಣಿಗೆ :

ಮೈಸೂರು ಸಂಸ್ಥಾವನ್ನಾಳಿದ ಟಿಪ್ಪು ಸುಲ್ತಾನನ ಆಳ್ವಿಕೆಯ ಕಾಲದಲ್ಲಿ ಚನ್ನಪಟ್ಟಣದಲ್ಲಿ ಆರಂಭವಾದ ರೇಷ್ಮೆ ಉದ್ದಿಮೆ ಟಿಪ್ಪುವಿನ ಆಳ್ವಿಕೆಯ ನಂತರದ ಕಾಲದಲ್ಲಿ ಹೆಚ್ಚು ಹೆಚ್ಚು ಬೆಳವಣಿಗೆ ಹೊಂದಿರುವುದು ಕಂಡು ಬರುತ್ತದೆ. ಟಿಪ್ಪು ಆರಂಭದಲ್ಲಿ ಈ ರೇಷ್ಮೆ ಹುಳು ಸಾಕಾಣಿಕೆ ಕೇಂದ್ರವನ್ನು ತನ್ನ ಸಂಸ್ಥಾನದ ಪೂರ್ವ ಭಾಗದಲ್ಲಿದ್ದ ಚನ್ನಪಟ್ಟಣದಲ್ಲಿ ಸ್ಥಾಪಿಸಿದ. ಇಂದಿನ ಮೈಸೂರು ಸಿಲ್ಕ್ ಎಂದು ಕರೆಯುವ ರೇಷ್ಮೆಯು ಟಿಪ್ಪು ವಿದೇಶದಿಂದ ಆಮದು ಮಾಡಿಕೊಂಡದ್ದು. ಇಂದು ಹಲವಾರು ರೇಷ್ಮೆ ತಳಿಗಳು ನಾಶವಾಗಿದ್ದರೂ ಈ ರೇಷ್ಮೆ ಮಾತ್ರ ಅಂದಿನಿಂದ ಇಂದಿನವರೆಗೆ ಉಳಿದುಕೊಂಡಿದೆ.

1896 ರಲ್ಲಿ ರಾಷ್ಟ್ರಮಟ್ಟದಲ್ಲಿ ಹಿರಿಯ ಕೈಗಾರಿಕೋದ್ಯಮಿ ಶ್ರೀ ಜೆ.ಎನ್. ಟಾಟಾ ಜಪಾನಿ ಮಾದರಿಯಲ್ಲಿ ರೇಷ್ಮೆ ಎಳೆ ತೆಗೆಯುವ ಉದ್ದಿಮೆಯನ್ನು ಮೈಸೂರಿನ ದಿವಾನರಾಗಿದ್ದ ಶ್ರೀ ಕೆ. ಶೇಷಾದ್ರಿ ಅಯ್ಯರ್‌ರವರೊಡಗೂಡಿ ಆರಂಭಿಸಿದರು. ಇಲ್ಲಿಂದಾಚೆಗೆ ರೇಷ್ಮೆ ಬೆಳೆ ಅಭಿವೃದ್ಧಿ ದಿನೇ ದಿನೇ ಪ್ರಗತಿ ಕಂಡಿತು. ಮೈಸೂರಿನ ಶಿಲ್ಪಿ ಎಂದೇ ಖ್ಯಾತರಾಗಿದ್ದ ಮೈಸೂರಿನ ದಿವಾನರಾದ ಸರ್. ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ ಈ ಉದ್ದಿಮೆಗೆ ಹೆಚ್ಚು ಪ್ರೋತ್ಸಾಹವನ್ನು ಅದರಲ್ಲೂ ಗ್ರಾಮೀಣಾಭಿವೃದ್ಧಿಗೆ ರೇಷ್ಮೆ ಹುಳು ಸಾಕಾಣೆಯ ಅಗತ್ಯವನ್ನು ಕಂಡು ಅದನ್ನು ಪ್ರೋತ್ಸಾಹಿಸಿದರು. ಇದಕ್ಕಾಗಿಯೇ 1913–14 ರಲ್ಲಿ ರೇಷ್ಮೆ ಇಲಾಖೆಯನ್ನು ಸ್ಥಾಪಿಸಿದರು. ಇಲಾಖೆಯ ಅಭಿವೃದ್ಧಿಗಾಗಿ ಇಟಲಿಯ ರಾಯಭಾರಿಯನ್ನು ಮೈಸೂರಿಗೆ ಆಹ್ವಾನಿಸಿ ಅವರ ಮಾರ್ಗದರ್ಶನದಲ್ಲಿ ಪ್ರಖ್ಯಾತ ಸಿಗ್‌ನೊರ್ ವಾಷಿಂಗ್‌ಟನ್ ಮಾರಿಯವರನ್ನು ಮೈಸೂರಿಗೆ ಬರಮಾಡಿಕೊಂಡು ಈ ರೇಷ್ಮೆ ಇಲಾಖೆಯನ್ನು ಸಂಘಟಿಸಿದರು.[16]

ಸಿಗ್ನೊರ್ ವಾಷಿಂಗ್‌ಟನ್ ಮಾರಿರವರ ಮಾರ್ಗದರ್ಶನದ ಮೇರೆಗೆ ಅಪ್ಪಾದೊರೈ ಮೊದಲಿಯರ್‌ರವರು ಚನ್ನಪಟ್ಟಣದಲ್ಲಿ ಯೂರೋಪಿನ ಹಾಗೂ ಚೀನಾ ತಳಿಗಳ ಮೇಲೆ ಪ್ರಯೋಗ ನಡೆಸಿ ಹೊಸ ರೀತಿಯ ಮಿಶ್ರತಳಿ ಅಭಿವೃದ್ಧಿಗೊಳಿಸುವಲ್ಲಿ ಸಫಲರಾದರು. ಹೀಗೆ ಮೊದಲಿಯಾರ್‌ರವರು ಹೊಸ ಹೊಸ ತಳಿಗಳ ಪ್ರಯೋಗ ನಡೆಸಿ ಉನ್ನತ ರೇಷ್ಮೆ ತಳಿಗಳನ್ನು ಪಡೆಯುವ ಕಾರ್ಯ ಮುಂದುವರೆಸುತ್ತಲೇ ರೇಷ್ಮೆ ಬೆಳೆಯ ಅಭಿವೃದ್ಧಿಗೆ ಕಾರಣ ಕರ್ತರಾದರೆಂದರೆ ತಪ್ಪಾಗಲಾರದು. 1921–23 ರಲ್ಲಿ ಹನ್ನೆರಡು ಇಟಾಲಿಯನ್ ಮಾದರಿಯ ರೀಲಿಂಗ್ ಬೇಸಿನ್ಸ್‌ಗಳನ್ನು ಆಮದು ಮಾಡಿಕೊಳ್ಳಲಾಯಿತು. ಮೈಸೂರಿನಲ್ಲಿ 1932 ರಲ್ಲಿ ರೇಷ್ಮೆ ನೇಯುವ ಹಾಗೂ ಬಣ್ಣ ಹಾಕುವ ಕೈಗಾರಿಕೆಯನ್ನು ಫಿಲೇಚರ್‌ನ ಜೊತೆಗೆ ಆರಂಭಿಸಲಾಯಿತು.[17] ಇದು ಚನ್ನಪಟ್ಟಣದ ರೇಷ್ಮೆ ಉದ್ದಿಮೆಯ ಬೆಳವಣಿಗೆಗೆ ಸಹಕಾರಿಯಾಯಿತು. ನಂತರ 1936 ರಲ್ಲಿ ಮೈಸೂರು ಸಂಸ್ಥಾನವು ಸ್ಪನ್‌ಸಿಲ್ಕ್ ಮಿಲ್‌ನ್ನು ಚನ್ನಪಟ್ಟಣದಲ್ಲಿ ಸ್ಥಾಪಿಸಿದ್ದು ರೇಷ್ಮೆ ಅಭಿವೃದ್ಧಿಗೆ ಹಾಕಿದ ಮೈಲಿಗಲ್ಲಾಗಿದೆ. ಆರಂಭದಲ್ಲಿ ಈ ರೇಷ್ಮೆ ಗಿರಣಿಯಲ್ಲಿ ರೇಷ್ಮೆ ಗೂಡಿನಿಂದ ನೂಲನ್ನು ಬಿಚ್ಚಿ ರೇಷ್ಮೆದಾರದ ಎಳೆಗಳನ್ನು ತಯಾರಿಸುವಿಕೆಗೆ ಪ್ರಾಶಸ್ತ್ಯ ನೀಡಲಾಗಿತ್ತು (ಚಿತ್ರ–15). ಹಿರಿಯ ಜೀವಿಗಳು ನೀಡುವ ಮಾಹಿತಿಯಿಂದ ತಿಳಿದು ಬರುವ ಅಂಶವೆಂದರೆ ರೇಷ್ಮೆ ಬಟ್ಟೆ ನೂಲುವಿಕೆಯು ಇತ್ತೀಚಿನ ದಿನಗಳ ಬೆಳವಣಿಗೆಯಾಗಿದ್ದು ಎರಡನೇ ಮಹಾಯುದ್ಧದ ವೇಳೆಯಲ್ಲಿ ಈ ರೇಷ್ಮೆ ನೂಲಿಗೆ ಬಹು ಬೇಡಿಕೆ ಇತ್ತು.

ಭಾರತವನ್ನಾಳುತ್ತಿದ್ದ ಬ್ರಿಟೀಷರು ಎರಡನೇ ಮಹಾಯುದ್ದದಲ್ಲಿ ಭಾಗವಹಿಸಿದಾಗ ಭಾರತದ ರೇಷ್ಮೆ ಉದ್ದಿಮೆಗಳನ್ನು ಪ್ರೋತ್ಸಾಹಿಸಿದರೆಂದು ತಿಳಿದು ಬರುತ್ತದೆ. ಏಕೆಂದರೆ ಯುದ್ಧಕ್ಕೆ ಅನುಕೂಲವಾಗುವ ಪ್ಯಾರಾಚ್ಯೂಟ್‌ಗಳ ನೇಯ್ಗೆ ಚನ್ನಪಟ್ಟಣದಲ್ಲಿ ಆಗುತ್ತಿದ್ದು ತಮಗೆ ಅಗತ್ಯವಿರುವ ಪ್ಯಾರಾಚ್ಯೂಟ್‌ಗಳನ್ನು ಪಡೆಯಲೋಸುಗ ಬ್ರಿಟೀಷರು ಇದರಲ್ಲಿ ಆಸಕ್ತಿ ವಹಿಸಿದರು. ತದ ನಂತರದಲ್ಲಿ 1949ರಲ್ಲಿ The central Silk Board ಸ್ಥಾಪಿತವಾದಾಗ ಈ ಉದ್ದಿಮೆಗಳಿಗೆ ಇನ್ನಷ್ಟು ಬೆಂಬಲ ದೊರೆತಿರುವುದನ್ನು ಕಾಣಬಹುದು. ಮುಂದಿನ ದಿನಗಳಲ್ಲಿ ಬಹು ಪ್ರಸಿದ್ಧ ಮೈಸೂರ್ ಸಿಲ್ಕ್ ಸೀರೆಗಳ ಉತ್ಪಾದನೆ ಈ ಗಿರಣಿಯಲ್ಲಿ ಆರಂಭವಾದಂತೆ ಅವುಗಳ ಪ್ರದರ್ಶನ ಹಾಗೂ ಮಾರಾಟವು ಭರದಿಂದ ಸಾಗಿತ್ತು.

ಸ್ವಾತಂತ್ರ್ಯಾನಂತರದಲ್ಲಿ ಈ ರೇಷ್ಮೆ ಗಿರಣಿಯ ಅಭಿವೃದ್ಧಿಗಾಗಿ ಉನ್ನತ ಜಪಾನಿ ಯಂತ್ರಗಳನ್ನು ಆಮದು ಮಾಡಿಕೊಂಡಿದ್ದಲ್ಲದೆ ಇಲ್ಲಿನ ಜನರಿಗೆ ತರಬೇತಿಯನ್ನು ಕೊಡಿಸಿದರೂ ಅದು ಸಫಲವಾಗಲಿಲ್ಲ. ಆದರೆ ಇಂದು ಈ ರೇಷ್ಮೆ ಗಿರಣಿ ಸಂಪೂರ್ಣವಾಗಿ ಮುಚ್ಚಿದ್ದರೂ ಅದರ ಶೋಂರೂಂ ಗಳು ಇಂದಿಗೂ ಸೀರೆ ಪ್ರದರ್ಶನಗಳನ್ನು ಆಯೋಜಿಸಿ ಕೆಲವು ವಿಶೇಷ ಸಂದರ್ಭಗಳಲ್ಲಿ ರಿಯಾಯಿತಿ ದರಗಳಲ್ಲಿ ಸೀರೆ ಮಾರಾಟವು ಇಲ್ಲಿ ನಡೆಯುತ್ತಿದೆ.

ಅಡಿಟಿಪ್ಪಣಿಗಳು :

1. ಡಿ.ಸಿ. ರಾಜಪ್ಪ, (ಸಂ.), 'ಮೈಸೂರು ರಾಜ್ಯದಲ್ಲಿ ವಾಣಿಜ್ಯ ಮತ್ತು ಕರಕುಶಲ ಕಲೆಗಳು', ಪು.32.
2. ಹೆಚ್. ಕೃಷ್ಣೇಗೌಡ, ಮತ್ತು ದೇ. ನಾರಾಯಣಸ್ವಾಮಿ (ಸಂ.), 'ಕಣ್ವಸಿರಿ', ಪು.29.
3. ಪಿ.ವಿ. ನಂಜರಾಜ ಅರಸು (ಸಂ.), 'ಮೈಸೂರು ನೂರಿನ್ನೂರು ವರ್ಷಗಳ ಹಿಂದೆ', ಪು.223.
4. ಮೌಖಿಕ ಸಂದರ್ಶನ: ಪ್ರಕಾಶ್, ಸಹಾಯಕ ಬೋಧಕರು, ಅರಗು ಬಣ್ಣ ವಿಭಾಗ, ಕರಕುಶಲ ತರಬೇತಿ ಕೇಂದ್ರ, ಚನ್ನಪಟ್ಟಣ.
5. ಮೌಖಿಕ ಸಂದರ್ಶನ: ಸು.ತ.ರಾಮೇಗೌಡ(ಸಂ.) 'ಬಯಲುಸೀಮೆ ಪತ್ರಿಕೆ', ಚನ್ನಪಟ್ಟಣ.
6. ಮೌಖಿಕ ಸಂದರ್ಶನ: ಈಶ್ವರರಾಜು, ಮಾಲೀಕರು, ಶ್ರೀ ಟಾಯ್ಸ್ ಫ್ಯಾಕ್ಟರಿ, ಚನ್ನಪಟ್ಟಣ.
7. ಮೌಖಿಕ ಸಂದರ್ಶನ: ಕೆ. ಅಬ್ದುಲ್ ರೆಹಮಾನ್, ಬೊಂಬೆ ವ್ಯಾಪಾರಿಗಳು, ಚನ್ನಪಟ್ಟಣ.
8. Autography of Hazarath Syed Nizam, P.1-2.
9. ಅದೇ, ಪು.1–2.
10. ಮೌಖಿಕ ಸಂದರ್ಶನ: ಸಯ್ಯದ್ ಬಸಾರತ್ ವುಲ್ಲಾ, ಮೆಹದವಿಯಾ ವೃತ್ತ, ಚನ್ನಪಟ್ಟಣ.
11. Autography of Hazarath Syed Nizam, Pp.1-2.

12 ಪಿ.ವಿ. ನಂಜರಾಜಅರಸು (ಸಂ.), ಪು.227.

13 ಮೌಖಿಕ ಸಂದರ್ಶನ: ಈಶ್ವರರಾಜು, ಮಾಲೀಕರು, ಶ್ರೀ ಟಾಯ್ಸ್ ಫ್ಯಾಕ್ಟರಿ, ಚನ್ನಪಟ್ಟಣ.

14 ಮೌಖಿಕ ಸಂದರ್ಶನ: ನಾಗರತ್ನ, ಮಾಯಾ ಆರ್ಗನಿಕ್ ಸರ್ವೀಸ್, ಚನ್ನಪಟ್ಟಣ.

15 ಡಿ.ಸಿ.ರಾಜಪ್ಪ (ಸಂ.), ಪು.33

16 Suryanath .U. Kamath (Editor), 'Karnataka State Gazetteer Mysore District', P.296.

17 ಅದೇ, ಪು.296.

ಅಧ್ಯಾಯ–4

ವೃತ್ತಿಪರ ವರ್ಗಗಳು

ಅಧ್ಯಾಯ-4

ವೃತ್ತಿಪರ ವರ್ಗಗಳು

ಅನಾದಿ ಕಾಲದಿಂದಲೂ ಮಾನವನು ತನ್ನ ಕರಕೌಶಲ್ಯವನ್ನು ಹಲವಾರು ವಿಧಗಳಲ್ಲಿ ಬಳಸಿಕೊಂಡು ತನಗೆ ಅಗತ್ಯವಾದ ವಸ್ತುಗಳನ್ನು ಅಭಿವೃದ್ಧಿಪಡಿಸಿದ್ದಾನೆ. ಮಾಂಸಕ್ಕಾಗಿ ಪ್ರಾಣಿಗಳನ್ನು ಬರಿಗೈಯಲ್ಲಿ ಕೊಲ್ಲುತ್ತಿದ್ದ ಅವನು ನಂತರ ಅವುಗಳ ಮೂಳೆಗಳು, ಕೋರೆಹಲ್ಲುಗಳು ಮತ್ತು ಮೊನಚಾದ ಕಲ್ಲುಗಳಿಂದ ಹರಿತವಾದ ಉಪಕರಣಗಳನ್ನು ತಯಾರಿಸಿ, ಕೈ ಕಸಬಿಗೆ ನಾಂದಿ ಹಾಕಿದ. ಕಾಡುಗಳಲ್ಲಿ ಬೆಳೆಯುವ ಹಣ್ಣು ಬೇರುಗಳನ್ನು ಸಂಗ್ರಹಿಸಿ ಅವುಗಳನ್ನು ಒಯ್ಯಲು, ಜೊಂಡು ಮತ್ತು ಟೊಂಗೆಗಳಿಂದ ಬುಟ್ಟಿಗಳನ್ನು ತಯಾರಿಸಿದ. ತೇವದಿಂದ ಕೂಡಿದ ಜೇಡಿಮಣ್ಣಿಗೆ ಆಕಾರ ಕೊಟ್ಟು ಬಿಸಿಲಿನಲ್ಲಿ ಒಣಗಿಸಿ ಅಥವಾ ಬೆಂಕಿಯಲ್ಲಿ ಬೇಯಿಸಿ, ಪಾತ್ರೆಗಳನ್ನು ರೂಪಿಸಿದ. ಚಳಿಯಿಂದ ಸಂರಕ್ಷಣೆ ಪಡೆಯಲು, ಒರಟು ವಸ್ತ್ರಗಳನ್ನು ಹೆಣೆದ. ತನ್ನಲ್ಲಿ ಕಲ್ಪನಾಶಕ್ತಿ ವೃದ್ಧಿಯಾದಂತೆ ಈ ಉಪಯುಕ್ತ ವಸ್ತುಗಳ ಮೇಲೆ ಅಲಂಕಾರಿಕ ಗೆರೆಗಳನ್ನು ಗೀಚಿದ. ಮುಂದೆ ಮರಗೆಲಸದಲ್ಲಿ ತೊಡಗಿದ, ದಂತವನ್ನು ಕೆತ್ತಿದ, ತನ್ನ ಪ್ರೌಢಿಮೆಯ ಗುರುತಾಗಿ ಸೂಕ್ಷ್ಮವಾದ ಪಿಂಗಾಣಿಯನ್ನು ತಯಾರಿಸಿದ. ರತ್ನಗಂಬಳಿಗಳನ್ನು ನೇಯ್ದ. ಲೋಹ ಕೆತ್ತನೆಯಲ್ಲಿ ಪರಿಣತಿ ಪಡೆದ[1].

ಮಾನವನ ಅಗತ್ಯತೆಗೆ ತಕ್ಕಂತೆ ರೂಪುಗೊಂಡ ಕೌಶಲ್ಯಗಳು ಹಲವು ವಸ್ತುಗಳ ತಯಾರಿಕೆಗೆ ದಾರಿಯಾದಂತೆ ಜನಾಂಗದಿಂದ ಜನಾಂಗಕ್ಕೆ ಈ ಕೌಶಲ್ಯಗಳು ವರ್ಗಾವಣೆಗೊಂಡವು. ಒಂದೇ ರೀತಿಯ ಕುಶಲ ವಸ್ತುಗಳನ್ನು ತಯಾರಿಸುತ್ತಿದ್ದು, ಒಂದು ಜನಾಂಗ ಅಥವಾ ಸಮುದಾಯ ಕ್ರಮೇಣ ಒಂದು ಪ್ರತ್ಯೇಕ ಜಾತಿ ಎನಿಸಿತು.[2] ತಾವು ಕಂಡುಕೊಂಡ ವೃತ್ತಿಗಳಲ್ಲಿ ನಿರತರಾದ ಜನರು ವೃತ್ತಿಪರ ವರ್ಗಗಳಾಗಿ ರೂಪುಗೊಂಡರು.

ಸ್ವಾತಂತ್ರ್ಯ ಪೂರ್ವಕಾಲದಲ್ಲಿ ನೋಡುವುದಾದರೆ, ಪ್ರತಿ ಗ್ರಾಮಗಳಲ್ಲಿಯೂ ಎಲ್ಲಾ ವೃತ್ತಿಗಳ ಜನರು ವಾಸಿಸುತ್ತಿದ್ದುದು ಕಂಡುಬರುತ್ತದೆ. ಒಂದು ಗ್ರಾಮ ಎಂದಾದರೆ ಗ್ರಾಮದಲ್ಲಿ ಪ್ರಮುಖವಾಗಿ ಒಕ್ಕಲುತನ ಮಾಡುತ್ತಿದ್ದ ಒಕ್ಕಲಿಗರು, ಪೌರೋಹಿತ್ಯ ಮಾಡುತ್ತಿದ್ದ ಬ್ರಾಹ್ಮಣರು, ಚಿನ್ನಗೆಲಸ ಮತ್ತು ಕಬ್ಬಿಣ ಕೆಲಸ ಮಾಡುವ ವಿಶ್ವಕರ್ಮರು, ಬಟ್ಟೆಗಳನ್ನು ಶುಚಿಗೊಳಿಸುವ ಅಗಸರು, ಕ್ಷೌರಿಕ ವೃತ್ತಿಯನ್ನು ಮಾಡುತ್ತಿದ್ದ ಭಜಂತ್ರಿಗಳು, ಮಣ್ಣಿನಿಂದ ಮಡಿಕೆ ಕುಡಿಕೆ ಮಾಡುತ್ತಿದ್ದ ಕುಂಬಾರರು, ಚರ್ಮದ ಕೆಲಸ ಮಾಡುವ ಚಮ್ಮಾರರು, ಇನ್ನೂ ಮುಂತಾದ ಎಲ್ಲಾ ವೃತ್ತಿಯವರನ್ನು

ಕಾಣಬಹುದಾಗಿತ್ತು. ಹಾಗೂ ಅಂದಿನ ದಿನಗಳಲ್ಲಿ ಇವರ ವೃತ್ತಿಗೆ ಪ್ರತಿಯಾಗಿ ವರ್ಷಕ್ಕೆ ಒಮ್ಮೆ ಇವರುಗಳಿಗೆ ದವಸ-ಧಾನ್ಯಗಳನ್ನು ನೀಡಿ ಅವರ ಜೀವನಕ್ಕೆ ಸಹಕಾರಿಯಾಗಲು ಕೆಲವೊಮ್ಮೆ ಜಮೀನುಗಳನ್ನು ನೀಡಿ ಅದರಿಂದ ಬರುವ ಆದಾಯವು ಈ ವರ್ಗಗಳಿಗೆ ಜೀವನಾಧಾರವಾಗಿತ್ತು.

ಸ್ವಾತಂತ್ರ್ಯಾನಂತರ ಬದಲಾದ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಳ ಹಿನ್ನೆಲೆಯಲ್ಲಿ ತಲೆಮಾರಿನಿಂದ ತಲೆಮಾರಿಗೆ ವಂಶಪಾರಂಪರ್ಯಾವಾಗಿ ನಡೆದು ಬಂದ ವೃತ್ತಿಗಳ ಅನುಸರಣೆ ಕಾಲಕ್ರಮೇಣ ಬದಲಾಗಿರುವುದನ್ನು ಕಾಣಬಹುದು. ಆರ್ಥಿಕವಾಗಿ ಲಾಭಗಳಿಸಲು ಸಾಮಾಜಿಕವಾಗಿ ಉತ್ತಮ ಸ್ಥಾನ-ಮಾನಗಳನ್ನು ಗಳಿಸಲು ತಾವು ಅನುಸರಿಸುತ್ತಿದ್ದ ವೃತ್ತಿಗಳನ್ನು ಬದಲಾಯಿಸಿಕೊಂಡದ್ದೂ ಇದೆ. ಉದಾ: ಒಬ್ಬ ಕುಂಬಾರನ ಮಗ ಕುಂಬಾರನಾಗಿಯೇ ಮುಂದುವರಿಯದೆ ತನಗೆ ಲಾಭದಾಯಕವೆನಿಸಿದ ಬೇರೆ ವೃತ್ತಿಯನ್ನು ಅವಲಂಬಿಸಿರುವ ಉದಾಹರಣೆಗಳಿವೆ. ಈ ವೃತ್ತಿಪರ ವರ್ಗಗಳು ಕಾಲಕಾಲಕ್ಕೆ ಆದ ಬದಲಾವಣೆಗೆ ತಕ್ಕಂತೆ ವೃತ್ತಿಗಳನ್ನು ಬದಲಾಯಿಸಿ ತಮ್ಮ ಜೀವನ ಮಟ್ಟವನ್ನು ಉತ್ತಮಪಡಿಸಿಕೊಳ್ಳಲು ಇತರ ವೃತ್ತಿಗಳಲ್ಲಿ ಅವಲಂಬಿತರಾಗಿರುವುದು ಕಂಡುಬರುತ್ತದೆ.

ಈ ಮೇಲ್ಕಂಡ ಹಿನ್ನೆಲೆಯಲ್ಲಿಯೇ ನೋಡುವುದಾದರೆ ಚನ್ನಪಟ್ಟಣ ತಾಲ್ಲೂಕಿನಾದ್ಯಂತ ಕಂಡು ಬರುವ ಗ್ರಾಮಗಳಲ್ಲಿಯೂ ಎಲ್ಲಾ ವೃತ್ತಿಪರ ವರ್ಗಗಳು ಸ್ವಾತಂತ್ರ್ಯಪೂರ್ವದಲ್ಲಿ ಕಂಡುಬರುತ್ತಿದ್ದು, ಸ್ವಾತಂತ್ರ್ಯಾನಂತರ ಸರ್ಕಾರದಿಂದ ಕೆಲವು ಸಮುದಾಯಗಳಿಗೆ ದೊರೆತ ಬೆಂಬಲ, ಮೀಸಲಾತಿ ಸೌಲಭ್ಯಗಳು, ತರಬೇತಿಗಳು ಜನರು ವೃತ್ತಿಗಳನ್ನು ಬದಲಾಯಿಸಿಕೊಂಡು ಆ ಮೂಲಕ ತಮಗೆ ಆಸಕ್ತಿದಾಯಕ ಹಾಗೂ ಲಾಭದಾಯಕ ವೃತ್ತಿಗಳಲ್ಲಿ ತೊಡಗಿಕೊಂಡಿರುವುದು ಕಂಡುಬರುತ್ತದೆ. ಒಂದು ಕಾಲಕ್ಕೆ ಪೌರೋಹಿತ್ಯವನ್ನು ಮಾಡಿಕೊಂಡು ಅದಕ್ಕೆ ಪ್ರತಿಯಾಗಿ ರಾಜ-ಮಹಾರಾಜರಿಂದ ಜಮೀನುಗಳನ್ನು ಪಡೆದು ಅದರಿಂದ ಆದಾಯ ಪಡೆಯುತ್ತಿದ್ದ ಬ್ರಾಹ್ಮಣ ವರ್ಗವು ಸ್ವಾತಂತ್ರ್ಯಾನಂತರ ಉಳುವವನೆ ಭೂಮಿಯ ಒಡೆಯ ಕಾನೂನು ಜಾರಿಯಾದಾಗ ತಮ್ಮ ಭೂಮಿಗಳನ್ನು ಕಳೆದುಕೊಂಡು ಬೇರೆ ವೃತ್ತಿಗಳನ್ನು ಆಶ್ರಯಿಸುವ ಅಗತ್ಯತೆ ಉಂಟಾಯಿತು. ಹೀಗೆ ಒಂದು ಕಾಲಕ್ಕೆ ತಾತನಿಂದ ಬಂದ ವೃತ್ತಿಯನ್ನು ತಂದೆ, ತಂದೆಯಿಂದ ಮಕ್ಕಳು, ಮಕ್ಕಳಿಂದ ಮೊಮ್ಮಕ್ಕಳು, ಪರಿಪಾಲಿಸುತ್ತಿದ್ದುದು ಕಾಲಾನಂತರದಲ್ಲಿ ಬದಲಾದಂತೆ ಈ ತಾಲ್ಲೂಕಿನಲ್ಲಿಯೂ ಬದಲಾವಣೆಗಳು ಕಂಡುಬಂದಿವೆ.

ಬೊಂಬೆ ನಗರ ಚನ್ನಪಟ್ಟಣದಲ್ಲಿ ಬೊಂಬೆಗಳ ತಯಾರಿಕಾ ವೃತ್ತಿಯನ್ನು ಅವಲಂಬಿಸಿರುವ ಜನಾಂಗಗಳ ಜೊತೆಗೆ ಕೃಷಿಕ ವೃತ್ತಿಯನ್ನೇ ಪ್ರಮುಖವಾಗಿ ಅವಲಂಬಿಸಿರುವ ಒಕ್ಕಲಿಗರು, ಬಿದಿರಿನಿಂದ ಮೊರ, ಬುಟ್ಟಿಗಳನ್ನು ಹೆಣೆಯುವ ಮೇದರು, ಚಿನ್ನಗೆಲಸ ಮರಗೆಲಸ ಹಾಗೂ ಕಬ್ಬಿಣ ಕೆಲಸ ಮಾಡುವ ವಿಶ್ವಕರ್ಮ

ಸಮುದಾಯದವರು, ಮಡಿಕೆಗಳನ್ನು ತಯಾರಿಸುವ ಕುಂಬಾರರು, ಕುರಿಗಳನ್ನು ಸಾಕುವ ಕುರುಬರು, ಗಾರೆ ಕೆಲಸವನ್ನು ಮಾಡುವ ಉಪ್ಪಾರರು, ಚರ್ಮ ಹದ ಮಾಡಿ ಪಾದರಕ್ಷೆಗಳನ್ನು ತಯಾರಿಸುವ ಚಮ್ಮಾರರು ಇನ್ನು ಮುಂತಾದ ವೃತ್ತಿಪರ ವರ್ಗಗಳಿದ್ದು, ಇಂದು ನಿರ್ದಿಷ್ಟ ಸಮುದಾಯವೇ ಇದರಲ್ಲಿ ನಿರತರಾಗಿದ್ದಾರೆಂದು ಹೇಳುವುದು ಕಷ್ಟ. ಕಾಲಕಾಲಕ್ಕೆ ಆದ ಬದಲಾವಣೆಗಳಿಂದ ಆಧುನಿಕ ತಂತ್ರಜ್ಞಾನಗಳ ಅಳವಡಿಕೆಯಿಂದ ತಮ್ಮಲ್ಲಿ ಉತ್ಪಾದನೆಯಾಗುವ ವಸ್ತುಗಳಿಗೆ ಬೇಡಿಕೆ ಕಡಿಮೆಯಾದಂತೆ ಲಾಭತರುವ ಇತರೆ ವೃತ್ತಿಗಳನ್ನು ಅವಲಂಬಿಸಿದ್ದಾರೆ. ಆದರೂ ಕೆಲವು ಭಾಗಗಳಲ್ಲಿ ಕೆಲವು ನಿರ್ದಿಷ್ಟ ವೃತ್ತಿಪರ ವರ್ಗಗಳೂ ಇಂದಿಗೂ ಜೀವಂತವಾಗಿವೆ.

4.1 ಬೊಂಬೆ ತಯಾರಿಕಾ ವೃತ್ತಿ :

ವಿಶ್ವವ್ಯಾಪಿ ಜನಪ್ರಿಯಗೊಂಡಿರುವ ಚನ್ನಪಟ್ಟಣದ ಬೊಂಬೆಗಳು ಆಬಾಲವೃದ್ಧರ ಮನಸೂರೆಗೊಂಡಿವೆ. ಇಂತಹ ಬೊಂಬೆಗಳ ತಯಾರಿಕಾ ವೃತ್ತಿಯು ಇಂದು ಯಾವುದೇ ಒಂದು ವರ್ಗಕ್ಕೆ ಮೀಸಲಾದ ವೃತ್ತಿಯಾಗಿಲ್ಲ (ಚಿತ್ರ–16). ಟಿಪ್ಪುವಿನ ಆಳ್ವಿಕೆಯ ಕಾಲಕ್ಕೂ ಹಿಂದಿನಿಂದಲೂ ಚನ್ನಪಟ್ಟಣದಲ್ಲಿ ಈ ವೃತ್ತಿಯು ಚಾಲ್ತಿಯಲ್ಲಿದ್ದರೂ ಅದರ ವ್ಯಾಪಕತೆ ಕಡಿಮೆ ಇದ್ದುದಾಗಿ ಕಂಡು ಬರುತ್ತದೆ.

ಆರಂಭದಲ್ಲಿ ಕೇವಲ ಮುಸ್ಲಿಂ ಜನಾಂಗದವರು ಮಾತ್ರವೇ ಈ ವೃತ್ತಿಯಲ್ಲಿ ತೊಡಗಿಕೊಂಡಿರುವುದು ಗೋಚರವಾಗುತ್ತದೆ. ಇದಕ್ಕೆ ಮುಖ್ಯವಾಗಿ ವಿದೇಶದಿಂದ ಕರಗತ ಮಾಡಿಕೊಂಡಿದ್ದ ಕಲೆಯನ್ನು ಬಿತ್ತರಿಸುವಲ್ಲಿ ಪ್ರಯತ್ನ ಪಟ್ಟ ಮುಸಲ್ಮಾನ ವ್ಯಕ್ತಿ ನೀಡಿದ ತರಬೇತಿಯು ಕಾರಣವಾಗಿರಲೂಬಹುದು ಹಾಗೂ ಯಾವುದೇ ನಿರ್ಬಂಧವಿಲ್ಲದೆ ಯಥೇಚ್ಚವಾಗಿ ದೊರೆಯುತ್ತಿದ್ದ ಹಾಲೆಮರಗಳು ಈ ಸಮುದಾಯದವರು ಹೆಚ್ಚಾಗಿ ಬೊಂಬೆ ತಯಾರಿಕೆಯಲ್ಲಿ ತೊಡಗಲು ಸಹಕಾರಿಯಾಗಿರಬಹುದು. ಕೇವಲ ಗೃಹೋಪಯೋಗಿ ಹಾಗೂ ಸಣ್ಣಪುಟ್ಟ ಬೊಂಬೆಗಳ ತಯಾರಿಕೆಗೆ ಮಾತ್ರ ಮೀಸಲಾಗಿದ್ದ ಈ ವೃತ್ತಿಯು ಮುಂದಿನ ದಿನಗಳಲ್ಲಿ ಹೊಸ ಹೊಸ ವಸ್ತುಗಳ ಉತ್ಪಾದನೆಯಲ್ಲಿ ತೊಡಗಿದಂತೆ ಸ್ಥಳೀಯ ಬೇಡಿಕೆಯ ಜೊತೆಗೆ ಹೊರ ನಾಡಿನಲ್ಲಿಯೂ ಬೇಡಿಕೆಗಳು ಹೆಚ್ಚಾದಂತೆ ಈ ವೃತ್ತಿಯ ಅವಲಂಬಿತ ವರ್ಗ ಹೆಚ್ಚುತ್ತಾ ಸಾಗಿರುವುದು ಗಮನಾರ್ಹ. ಈ ವೇಳೆಗೆ ಕಡಿಮೆ ಖರ್ಚಿನಲ್ಲಿ ತನ್ನ ಕೌಶಲದಿಂದ ನಿರ್ಮಿತಗೊಳ್ಳುತ್ತಿದ್ದ ವಸ್ತುಗಳು ಲಾಭದಾಯಕವಾಗಿ ಜೀವನೋಪಾಯಕ್ಕೆ ಅನುಕೂಲವಾದಾಗ ಇತರೆ ಸಮುದಾಯಗಳಾದ ಪರಿಶಿಷ್ಟ ಜಾತಿ, ಪಂಗಡದವರು, ವಿಶ್ವಕರ್ಮರು, ಉಪ್ಪಾರರು, ಬಣಜಿಗರು, ಒಕ್ಕಲಿಗರು ಸಹ ಈ ವೃತ್ತಿಯಲ್ಲಿ ತೊಡಗಿಕೊಂಡರು. ಈ ಬೊಂಬೆಗಳ ವ್ಯಾಪಾರ ದಿನೇ ದಿನೇ ಹೆಚ್ಚಿದಂತೆಲ್ಲಾ ಬೊಂಬೆಗಳ ಬಿಡಿ ಭಾಗಗಳ ತಯಾರಿಕೆಯು ತಾಲ್ಲೂಕಿನ ನೀಲಕಂಠನಹಳ್ಳಿ, ಸುಣ್ಣಘಟ್ಟ, ಹೊಂಗನೂರು, ಕರಿಯಪ್ಪನ ದೊಡ್ಡಿಗಳಲ್ಲಿ ನೆಲೆಸಿರುವ ಜನರ ಮುಖ್ಯ ವೃತ್ತಿಯಾಗಿ ಪರಿಣಮಿಸಿತು.

ಸ್ವಾತಂತ್ರ್ಯಾನಂತರದಲ್ಲಿ ಚುರುಕುಗೊಂಡ ವಿದೇಶಿ ವ್ಯಾಪಾರದಿಂದಾಗಿ ಬ್ರಾಹ್ಮಣರಾದಿಯಾಗಿ ಎಲ್ಲಾ ವರ್ಗಗಳ ಜನರು ಈ ವೃತ್ತಿಯಲ್ಲಿ ತೊಡಗಿಕೊಂಡರು. ಸುಲಭ ರೀತಿಯಲ್ಲಿ ಲಭ್ಯವಾಗುತ್ತಿದ್ದ ಕಚ್ಚಾ ವಸ್ತುಗಳು, ತಯಾರಿಕೆಗೆ ಬೇಕಾದ ಅಗತ್ಯ ಕಾರ್ಮಿಕ ವರ್ಗದ ಲಭ್ಯತೆಯು ಈ ವೃತ್ತಿಯಲ್ಲಿ ಹೆಚ್ಚು ಜನರು ತಮ್ಮನ್ನು ತೊಡಗಿಸಿಕೊಳ್ಳಲು ಕಾರಣವಾಯಿತು. ಆದರೆ ನಂತರದ ದಿನಗಳಲ್ಲಿ ಕಚ್ಚಾ ವಸ್ತುಗಳ ಕೊರತೆ ಹಾಗೂ ಇತರೆ ಆಟಿಕೆಗಳ ಪೈಪೋಟಿಯಿಂದಾಗಿ ಈ ಮರದ ಬೊಂಬೆಗಳಿಗೆ ಬೇಡಿಕೆ ಕಡಿಮೆಯಾದಂತೆ ಜನರು ಇತರೆ ವೃತ್ತಿಗಳನ್ನು ಅವಲಂಬಿಸಿ ನಡೆದರೂ ಬಹಳಷ್ಟು ಹಿಂದಿನಿಂದಲೂ ಕೈ ಹಿಡಿದು ನಡೆಸಿರುವ ವೃತ್ತಿಯನ್ನು ಬಿಡದವರು ಇಂದಿಗೂ ಅದನ್ನು ಮುಂದುವರೆಸಿಕೊಂಡು ಬರುತ್ತಿದ್ದು ಅದರಲ್ಲಿಯೂ ಮುಸ್ಲಿಂರು ಪ್ರಧಾನರಾಗಿದ್ದಾರೆ.

4.2 ಒಕ್ಕಲಿಗರು :

ಒಕ್ಕಲುತನವನ್ನೇ ಪ್ರಮುಖ ವೃತ್ತಿಯನ್ನಾಗಿ ಅವಲಂಬಿಸಿರುವ ಒಕ್ಕಲಿಗರು ಚನ್ನಪಟ್ಟಣ ತಾಲ್ಲೂಕಿನಾದ್ಯಂತ ಕಂಡುಬರುತ್ತಿದ್ದು, ಜನಸಂಖ್ಯೆಯಲ್ಲಿ ಪ್ರಧಾನವಾಗಿದ್ದಾರೆ. ಮುಖ್ಯವಾಗಿ ಭತ್ತ, ರಾಗಿ, ತೆಂಗು, ವೀಳ್ಯೆದೆಲೆ, ಹಿಪ್ಪುನೆರಳೆ, ಮಾವು ಹಾಗೂ ಬಾಳೆಗಳನ್ನು ವಿಶೇಷವಾಗಿ ಬೆಳೆಯಲಾಗುತ್ತದೆ. ಇವುಗಳ ಜೊತೆಗೆ ಇತ್ತೀಚೆಗೆ ತರಕಾರಿಗಳು ಹಾಗೂ ಹೂಗಳನ್ನು ಬೆಳೆಯುವುದರ ಜೊತೆಗೆ ಕೋಳಿಸಾಕಾಣಿಕೆ, ರೇಷ್ಮೆ ಹುಳು ಸಾಕಾಣಿಕೆ, ಪಶುಸಂಗೋಪನೆ, ಕುರಿಸಾಕಾಣಿಕೆಯ ವೃತ್ತಿಗಳನ್ನೂ ಸಹ ಅಳವಡಿಸಿಕೊಂಡಿದ್ದಾರೆ.

ತಾಲ್ಲೂಕಿನಲ್ಲಿ ಮಳೆ ಆಶ್ರಯದಲ್ಲಿ ಬೆಳೆಯುವ ಬೆಳೆಗಳೇ ಅಧಿಕ. ನಾಡಿನ ಜೀವನಾಡಿಯಾದ ಕಣ್ವನದಿಗೆ ಅಡ್ಡಲಾಗಿ ಕಟ್ಟಲಾಗಿರುವ ಕಣ್ವ ಜಲಾಶಯದಿಂದಾಗಿ ಸುತ್ತಮುತ್ತಲ ಗ್ರಾಮಗಳಲ್ಲಿನ ಕೆರೆಗಳಿಗೆ ಮುಖ್ಯವಾಗಿ ಪಟ್ಲುಕೆರೆ, ರಾಮಮ್ಮನಕೆರೆ, ಕೂಡ್ಲೂರುಕೆರೆ, ಹರೂರು, ಮಳೂರು ಕೆರೆಗಳಿಗೆ ನೀರು ಪೂರೈಕೆಯಾಗುತ್ತದೆ.[3] ಈ ನೀರಿನಿಂದ ಅನುಕೂಲ ಪಡೆಯುವ ನಾಗವಾರ, ಅಬ್ಬೂರು, ದಶವಾರ, ಕನ್ನಮಂಗಲ, ಮಳೂರು, ಕೂಡ್ಲೂರು, ಹರೂರು ಗ್ರಾಮಗಳಲ್ಲಿ ಮುಖ್ಯವಾಗಿ ಭತ್ತ, ತೆಂಗು, ಹಿಪ್ಪುನೇರಳೆ, ವೀಳ್ಯೆದೆಲೆ ಹಾಗೂ ಬಾಳೆಯನ್ನು ಪ್ರಮುಖವಾಗಿ ಬೆಳೆಯುತ್ತಿದ್ದಾರೆ. ಇತ್ತೀಚೆಗೆ ಅಭಿವೃದ್ಧಿಪಡಿಸಿದ ಇಗ್ಗಲೂರು ಜಲಾಶಯದಿಂದಾಗಿ ತಾಲ್ಲೂಕಿನ ಗರಕಹಳ್ಳಿ, ಸುಳ್ಳೇರಿ, ಇಗ್ಗಲೂರು, ಕೃಷ್ಣಾಪುರ, ನುಣ್ಣೂರು, ನೇರಳೂರು, ಸೋಗಾಲ ಗ್ರಾಮಗಳಿಗೆ, ನೀರಿನ ಪೂರೈಕೆಯಾಗುತ್ತಿದ್ದು, ಇಲ್ಲಿಯೂ ಸಹ ಹಿಪ್ಪುನೇರಳೆ, ತೆಂಗು, ಭತ್ತ, ರಾಗಿ, ಕಬ್ಬು, ಬಾಳೆ ಪ್ರಮುಖ ಬೆಳೆಗಳಾಗಿವೆ. ಇವುಗಳ ಜೊತೆಗೆ ಇತ್ತೀಚೆಗೆ ಇತರೆ ಲಾಭದಾಯಕ ಬೆಳೆಗಳಾದ ತರಕಾರಿಗಳು, ಹೂಗಳನ್ನು ಸಹ ಬೆಳೆಯಲಾಗುತ್ತಿದ್ದು, ತಾಲ್ಲೂಕಿನ ಅಂಬಾಡಹಳ್ಳಿಯಲ್ಲಿ ಪ್ರಮುಖವಾಗಿ ದೇವರ ತುಳಿಸಿಯನ್ನು ವಿಶೇಷವಾಗಿ ಬೆಳೆಯಲಾಗುತ್ತಿದೆ.

ಇತ್ತೀಚಿನ ದಿನಗಳಲ್ಲಿ ಪ್ರಾಕೃತಿಕ ವಿಕೋಪಗಳಿಂದಾಗುವ ಬೆಳೆಯ ನಾಶ, ಬೆಂಬಲ ಬೆಲೆಯ ಕೊರತೆ, ಕೃಷಿ ಕಾರ್ಮಿಕರ ಕೊರತೆಗಳಿಂದಾಗಿ ಒಕ್ಕಲಿಗರು ಇಂದು ಇತರೆ ಲಾಭದಾಯಕ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಸರ್ಕಾರಿ ಉದ್ಯೋಗಗಳು ಹಾಗೂ ವ್ಯಾಪಾರ–ವಾಣಿಜ್ಯೋದ್ಯಮಗಳನ್ನು ತಮ್ಮ ವೃತ್ತಿಯನ್ನಾಗಿ ಆಶ್ರಯಿಸಿದ್ದಾರೆ. ಎಷ್ಟೇ ಆದಾಯ ಕಡಿಮೆಯಾಗಿದ್ದರೂ ತಮ್ಮ ಮೂಲ ವೃತ್ತಿಯನ್ನು ಬಿಡದ ವರ್ಗವು ಇಂದಿಗೂ ವ್ಯವಸಾಯವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದು, ಜೊತೆಗೆ ಆಧುನಿಕ ತಂತ್ರಗಳ ಅಳವಡಿಕೆಯಿಂದ ಕೃಷಿಯನ್ನು ಚೇತರಿಸಿಕೊಂಡು ಅದರ ಒಂದು ಭಾಗವಾಗಿ ಕುರಿ, ಕೋಳಿ, ಪಶು ಸಂಗೋಪನೆ ಈ ವರ್ಗಗಳಲ್ಲಿ ಕಾಣಬಹುದು.

4.3 ಮೇದರು :

ಸುಮಾರು 100–120 ವರ್ಷಗಳಿಂದ ಚನ್ನಪಟ್ಟಣದ ಬೈರಾಪಟ್ಟಣ, ಮಾಕಳಿ, ಕೋಡಂಬಳ್ಳಿ, ಕಬ್ಬಾಳು ಮುಂತಾದ ಗ್ರಾಮಗಳಲ್ಲಿ ವಾಸಿಸುತ್ತಿರುವ ಈ ಜನಾಂಗದವರು ಚನ್ನಪಟ್ಟಣ ನಗರದ ರೈಲ್ವೆ ನಿಲ್ದಾಣದ ಬಳಿ ಮೂರ್ನಾಲ್ಕು ಬೀದಿಗಳಲ್ಲಿ ವಾಸಿಸುತ್ತಿದ್ದು, ಈ ಭಾಗವೆಲ್ಲಾ ಮೇದರ ಬೀದಿ ಎಂದೇ ಗುರುತಿಸಲ್ಪಡುತ್ತಿದೆ. ತಮ್ಮನ್ನು ಗಾವರಿಗರು, ಗೌರಿ ಮಕ್ಕಳು ಎಂದು ಕರೆದುಕೊಳ್ಳುವ ಇವರು ಮುಖ್ಯ ವೃತ್ತಿ ಬಿದಿರಿನಿಂದ ವಿವಿಧ ವಸ್ತುಗಳನ್ನು ತಯಾರಿಸುವುದೇ ಆಗಿದೆ.[4] ಇವರಲ್ಲಿ ಗೌರಿ ಮೇದರು, ಗೌಡ ಪಂಗಡದವರು, ನಾಯಕ ಪಂಗಡದವರೆಂದು ಒಳಪಂಗಡಗಳಿವೆ. ಗೌರಿ ಮೇದರು ಮತ್ತು ಗೌಡ ಪಂಗಡದವರ ಮಾತೃಭಾಷೆ, ಕನ್ನಡವಾಗಿದೆ. ನಾಯಕ ಪಂಗಡದವರು ಹೊರನಾಡಿನಿಂದ ಬಂದವರಾಗಿದ್ದು, ತಮಿಳು, ತೆಲಗು, ಮಾತೃ ಭಾಷೆಯುಳ್ಳವರಾಗಿದ್ದಾರೆ. ಮೇದರಲ್ಲಿ ಭೈರವೇಶ್ವರ, ಈಶ್ವರ, ಮುನಿಯಪ್ಪ ಮೊದಲಾದ ದೇವರ ಒಕ್ಕಲಿನವರಿದ್ದಾರೆ.[5]

ಮೇದರು ತಮ್ಮ ಜನಾಂಗದ ವೃತ್ತಿಯ ಬಗ್ಗೆ ತಮ್ಮದೇ ಆದ ನಂಬಿಕೆಯನ್ನು ಹೊಂದಿದ್ದಾರೆ. ಶ್ರೀನಿವಾಸ್‌ರವರು ಹೇಳುವ ಪ್ರಕಾರ ಈ ವೃತ್ತಿಯು ಈಶ್ವರನ ಅನುಗ್ರಹ. ಒಮ್ಮೆ ಪಾರ್ವತಿ ಈಶ್ವರನ ಬಳಿ ಮುತ್ತೈದೆಯರಿಗೆ ಬಾಗಿನ ಕೊಡಲು ಮೊರ ಕೇಳಿದಾಗ ಈಶ್ವರನು ಅದನ್ನು ತಯಾರಿಸುವ ಮೇದರ ಕೇತಯ್ಯನನ್ನು ಸೃಷ್ಟಿಸಿದರು. ಮೊರ ನೇಯಲು ಬೇಕಾದ ಬಿದಿರಿಗಾಗಿ ತನ್ನ ಕೊರಳಲ್ಲಿದ್ದ ಹಾವನ್ನು ಬಿದಿರಾಗಿ ಪರಿವರ್ತಿಸಿ ಅದನ್ನು ಕತ್ತರಿಸಲು ಬೇಕಾದ ಮಚ್ಚಿಗಾಗಿ ತನ್ನ ಕೈಯಲ್ಲಿದ್ದ ತ್ರಿಶೂಲವನ್ನೇ ನೀಡಿದರು. ಬಿದಿರನ್ನು ಕಡಿಯಲು ಅನುಕೂಲವಾಗಲು, ಒಂದು ಮಗುವನ್ನು ಮರದ ಕೊಂಟಾಗಿ ಪರಿವರ್ತಿಸಿ ಈ ಜನಾಂಗಕ್ಕೆ ನೀಡಿದರೆಂಬ ನಂಬಿಕೆ ಇದೆ. ಅಂದಿನಿಂದ–ಇಂದಿನವರೆಗೆ ಈ ಜನಾಂಗದವರು ಮೇದರ ಕೇತಯ್ಯನನ್ನು ತಮ್ಮ ಗುರುವಾಗಿ ಪೂಜಿಸುತ್ತಾ ಶಿವ–ಪಾರ್ವತಿಯರನ್ನು ಸ್ಮರಿಸುತ್ತಾ ಬಿದಿರಿನಿಂದ ವಿವಿಧ ವಸ್ತುಗಳ ತಯಾರಿಸಿ ಈ ವೃತ್ತಿಯಲ್ಲಿ ತೊಡಗಿಕೊಂಡಿದ್ದಾರೆ.[6]

ಮೇದ ವೃತ್ತಿಯಲ್ಲಿ ತೊಡಗಿರುವ ಕುಟುಂಬಗಳ ಸಂಖ್ಯೆ 150ಕ್ಕೂ ಹೆಚ್ಚಾಗಿದ್ದು, ಇವರು ತಯಾರಿಸುವ ಪ್ರಮುಖ ವಸ್ತುಗಳೆಂದರೆ, ರೇಷ್ಮೆತಟ್ಟೆಗಳು, ಮಾವಿನ ಕಾಯಿ ಇಡಲು ಬಳಸುವ ಪುಟ್ಟಿ, ಮೊರ, ಬೀಸಣಿಗೆ, ಮಂಕರಿ, ಹೂ ಬುಟ್ಟಿಗಳು, ಮೋದುಗಳು*, ಕೋಳಿಗಳ ಪಂಜರಗಳು, ರೇಷ್ಮೆಗೂಡಿಗೆ ಬಳಸುವ ಚಂದ್ರಿಕೆಗಳು ಹಾಗೂ ಆಧುನಿಕವಾಗಿ ಕಿಟಕಿಗಳಿಗೆ ಹಾಕುವ ಸ್ಕ್ರೀನ್‌ಗಳು (ಪರದೆಗಳು) ಹಾಗೂ ಮದುವೆ ಸಂದರ್ಭಗಳಲ್ಲಿ ಅಲಂಕಾರಕ್ಕೆ ಬಳಸುವ ಆರ್ಚ್‌ಗಳು ಇವರ ಪ್ರಮುಖ ಉತ್ಪನ್ನಗಳಾಗಿವೆ. ಆರಂಭದಲ್ಲಿ ಈ ವೃತ್ತಿಗೆ ಅಗತ್ಯವಾದ ಬಿದಿರು ಶಿವಮೊಗ್ಗ, ಭದ್ರಾವತಿ, ಮಾಗಡಿ ಕಡೆಗಳಿಂದ ಲಭ್ಯವಾಗುತ್ತಿತ್ತು (ಚಿತ್ರ–17).

ಇಂದು ಚನ್ನಪಟ್ಟಣದ ಸುತ್ತಮುತ್ತಲ ಗ್ರಾಮಗಳಾದ ಮಾಕಳಿ, ದಶವಾರ, ಕೋಡಂಬಳ್ಳಿ, ಕಬ್ಬಾಳು, ಕೆಂಗಲ್ ಕಡೆಗಳಿಂದ ದೊರೆಯುತ್ತಿದ್ದು, ಒಂದು ಬಿದಿರಿನ ಬೆಲೆ 40 ರಿಂದ 50 ರೂ.ಗಳಷ್ಟಿದೆ.

ಸಾಮಾಜಿಕವಾಗಿಯು ಅಷ್ಟೇನು ಪ್ರಬಲವಾಗದ ಈ ಜನಾಂಗವು ಸಮಾಜದಲ್ಲಿ ಉನ್ನತಸ್ಥಾನವನ್ನೇನು ಪಡೆಯಲಿಲ್ಲ. ಸಮಾಜದ ಪ್ರತಿಯೊಂದು ಕುಟುಂಬಗಳಿಗೂ ಅಗತ್ಯವಿರುವ ವಸ್ತುಗಳನ್ನು ಈ ಜನಾಂಗವು ತಯಾರಿಸಿದರೂ ಇವರ ಸ್ಥಾನ–ಮಾನ ಸಾಮಾಜಿಕವಾಗಿ ಹಾಗೆಯೇ ಇದೆ. ಇನ್ನು ಈ ಜನಾಂಗವು ಆರ್ಥಿಕವಾಗಿಯೂ ಸಬಲರಾದಂತೆ ಕಂಡುಬರುವುದಿಲ್ಲ. ಇಂದಿನ ದಿನಗಳಲ್ಲಿ ಬಳಕೆಯಾಗುತ್ತಿರುವ ಪ್ಲಾಸ್ಟಿಕ್ ವಸ್ತುಗಳು ಹಾಗೂ ಅಲ್ಯೂಮಿನಿಯಂ ಪಾತ್ರೆಗಳಿಂದಾಗಿ ಈ ಬಿದಿರಿನ ಉತ್ಪನ್ನಗಳಿಗೆ ಬೇಡಿಕೆ ಕಡಿಮೆಯಾಗುತ್ತಿದ್ದು, ದೊರೆಯುತ್ತಿರುವ ಲಾಭಾಂಶವೂ ಕಡಿಮೆ ಇರುವುದರಿಂದ, ಈ ಜನಾಂಗವು ತಮ್ಮ ವೃತ್ತಿಯನ್ನು ತ್ಯಜಿಸಿ ಬೇರೆ ವೃತ್ತಿಯನ್ನು ಅವಲಂಬಿಸುತ್ತಿದ್ದಾರೆ. ಆದರೂ ಪಾರಂಪರ್ಯವಾಗಿ ಬಂದಿರುವ ಕುಲಕಸುಬನ್ನು ಬಿಡಲಾಗದೆ ಈ ಜನಾಂಗದ ಹೆಂಗಸರು, ಗಂಡಸರು ಆಬಾಲವೃದ್ಧರಾಗಿ ಈ ವೃತ್ತಿಯಲ್ಲಿ ನಿರತರಾಗಿದ್ದಾರೆ.

4.4 ವಿಶ್ವಕರ್ಮರು:

ಶಿಲ್ಪ ಎಂಬ ಶಬ್ಧಕ್ಕೆ ಅನೇಕ ಅರ್ಥಗಳಿವೆ. ಕೆಲಕಾಲ ಉಳಿಯಬಲ್ಲ ಯಾವುದೇ ಕಟ್ಟೋಣಗಳಿಗೆ ಶಿಲ್ಪ ಎಂದು ಹೇಳಬಹುದು. ಅದು ವಿಮಾನ, ಯಂತ್ರ, ರಥ ಯಾವುದೇ ಆಗಿರಬಹುದು. ಇದರೊಂದಿಗೆ ಮೂರ್ತಿ ಶಿಲ್ಪ, ವಾಸ್ತುಶಿಲ್ಪವು ಒಳಗೊಳ್ಳುತ್ತವೆ. ಈ ಶಿಲ್ಪಗಾರರು ಎಂದರೆ ಗುಡಿಗಾರ, ಚಮ್ಮಾರ, ಕುಂಬಾರ, ಬಡಗಿ ಮತ್ತು ಅಕ್ಕಸಾಲಿಗ ಹಾಗೂ ಇವರೊಂದಿಗೆ ಚಿತ್ರಗಾರರನ್ನು ಸೇರಿಸಿ ಕುಶಲಕರ್ಮಿಗಳು ಎಂದು ವರ್ಗೀಕರಣ ಮಾಡಲಾಗಿದೆ. ಮೇಲಿನ ಯಾವುದೇ ವಿಂಗಡಣೆಯಲ್ಲಿಯೂ 'ಅಕ್ಕಸಾಲಿಗ' ಎಂಬುವುದು ಸಾಮಾನ್ಯವಾಗಿ ಕಂಡು ಬರುವ ಅಂಶ. ಇದರಿಂದಾಗಿ

---

* ಮೋದು: ರೇಷ್ಮೆ ಸಾಕಾಣಿಕೆಗೆ ಹಿಪ್ಪುನೇರಳೆ ಸೊಪ್ಪನ್ನು ಸಂಗ್ರಹಿಸುವ ಬುಟ್ಟಿಗಳು

ಕರಕುಶಲತೆಗೆ ಅಕ್ಕಸಾಲಿಗನೇ ಮುಖ್ಯ ಎಂದಾಗುವುದಲ್ಲದೆ ಸಾಮಾಜಿಕವಾಗಿಯೂ ಆತನ ಸ್ಥಾನ ಮುಖ್ಯವಾದುದು.[7]

ಗ್ರಾಮೀಣ ಜನರ ವ್ಯವಸಾಯಕ್ಕೆ ಬೇಕಾಗುವ ಉಪಕರಣಗಳ ನಿರ್ಮಾಣಕ್ಕಾಗಿ ಬಡಿಗ, ಕಮ್ಮಾರ ಮುಂತಾದ ವೃತ್ತಿಯವರು ತಮ್ಮ ಕಾರ್ಯವನ್ನು ಮಾಡುತ್ತಾ ಬಂದಿದ್ದಾರೆ.[8] ವಿಶ್ವ ಬ್ರಹ್ಮನಿಂದ ಬಂದವರೆಂದು, ವಿಶ್ವದಲ್ಲಿ ಮಾನವನ ಬದುಕಿಗೆ ಅಗತ್ಯವಾದ ವಸ್ತುಗಳನ್ನು ತಯಾರಿಸುವ "ವಿಶ್ವಕರ್ಮ"ರೆಂದೂ ಈ ವರ್ಗದವರು ಹೇಳಿಕೊಳ್ಳುತ್ತಾರೆ. "ವಿಶ್ವದ ಕಾರ್ಮಿಕರು" ಎಂದು ಕರೆಯಲ್ಪಡುತ್ತಿದ್ದರು. ಕಾಲಾನುಕ್ರಮದಲ್ಲಿ 'ವಿಶ್ವಕರ್ಮ' ಎಂಬ ಹೆಸರು ಬರಲು ಕಾರಣವಾಯ್ತು ಎಂಬ ಅಭಿಪ್ರಾಯವಿದೆ. ವಿಶ್ವಕರ್ಮದಲ್ಲಿ ಕಮ್ಮಾರ, ಬಡಗಿ, ಅಕ್ಕಸಾಲಿ, ಶೆಟ್ಟಿ, ಕಂಚುಗಾರರು ಎಂಬ ಐದು ವರ್ಗಗಳು ಕಂಡು ಬರುತ್ತವೆ. ಇವರು ಕ್ರಮವಾಗಿ ಕಬ್ಬಿಣ, ಮರ, ಚಿನ್ನ, ತಾಮ್ರ ಮತ್ತು ಕಂಚುಗಳಿಂದ ವಸ್ತುಗಳನ್ನು ಸಿದ್ದಗೊಳಿಸುವ ವೃತ್ತಿಯವರಾಗಿದ್ದಾರೆ. ಇವರಿಗೆ ಕೆಲವು ಕಡೆ 'ಪಾಂಚಾಲರು' ಎನ್ನುತ್ತಾರೆ. ಸಾಮಾನ್ಯವಾಗಿ ಇವರನ್ನು 'ಆಚಾರರು' ಎಂದು ಕರೆಯುವುದು ವಾಡಿಕೆ.

ಚನ್ನಪಟ್ಟಣ ತಾಲ್ಲೂಕಿನ ವ್ಯಾಪ್ತಿಯಲ್ಲಿನ ಆಚಾರರಲ್ಲಿ ಶಿವಾಚಾರರು (ಲಿಂಗಾಯಿತಾಚಾರರು) ಕುಲಾಚಾರರು, ಮತಾಚಾರರು ಎಂಬ ಪಂಗಡಗಳಿವೆ.[9] ಈ ವರ್ಗದವರು ಚನ್ನಪಟ್ಟಣದ ಗ್ರಾಮಗಳಲ್ಲಿ ಅಲ್ಪಸಂಖ್ಯೆಯಲ್ಲಿದ್ದು ಪ್ರಮುಖವಾಗಿ ಚನ್ನಪಟ್ಟಣ ನಗರದ ವ್ಯಾಪ್ತಿಯಲ್ಲಿ ಬಹುಸಂಖ್ಯಾತರಾಗಿದ್ದಾರೆ. ಕಾಳಿದೇವಿಯ ಆರಾಧಕರಾದ ಇವರು ತಮ್ಮ ಕಸುಬಿನ ಬಗ್ಗೆ ಇವರದೇ ಆದ ನಂಬಿಕೆಗಳಿವೆ. ಪ್ರತಿದಿನ ಬೆಳಗಾದ ನಂತರ ಮನುಷ್ಯನ ಶುಚಿತ್ವದ ಕಲ್ಪನೆಯಂತೆಯೇ ಕೈಕಾಲು ಮುಖತೊಳೆದುಕೊಳ್ಳುವಂತೆ, ಸ್ನಾನ ಮಾಡುವಂತೆ ಕುಲುಮೆಯನ್ನು ದಿನಂಪ್ರತಿ ಸ್ವಚ್ಚಗೊಳಿಸುವ ಪದ್ಧತಿ. ಇನ್ನು ಪ್ರತಿ ಅಮಾವಸ್ಯೆಯಂದು ಕುಲುಮೆಯನ್ನು ಪ್ರಾರಂಭಿಸುವುದಿಲ್ಲ. ಕಾರಣ ಅಂದು ಕುಲುಮೆ ಹಚ್ಚಿದರೆ ಅನಾಹುತಗಳು ಜರುಗುವುದು ಎಂಬ ನಂಬಿಕೆ ಇದೆ. ಜೊತೆಗೆ ಪೂಜೆ ಸಲ್ಲಿಸಿದ ದೇವಿಕಾಳಿಕಾ ಮಾತೆಗೆ ಸುತ್ತಿಗೆ ಪೆಟ್ಟು ಹೊಡೆದಂತೆ ಎಂಬ ನಂಬಿಕೆ ಇಂದಿಗೂ ಇದೆ.

ಪ್ರಮುಖವಾಗಿ ಈ ವೃತ್ತಿಯ ಅವಲಂಬಿತರು ತಯಾರಿಸುವ ಉತ್ಪನ್ನಗಳೆಂದರೆ, ಕುಡುಗೋಲು, ಈಳಿಗೆ, ಊದುಕೊಳವೆ, ಒನಕೆಗೆ ಬಳಸುವ ಬಳೆ, ನೇಗಿಲು ಇತ್ಯಾದಿ ಜೊತೆಗೆ ಚಿನ್ನ ಹಾಗೂ ಬೆಳ್ಳಿಯ ಲೋಹಗಳಿಂದ ತಯಾರಿಸುವ ಅಲಂಕಾರಿಕ ಆಭರಣಗಳು ದೇವರ ವಿಗ್ರಹಗಳು ಇತ್ಯಾದಿ (ಚಿತ್ರ-18). ಈ ವರ್ಗದವರು ಟಿಪ್ಪುವಿನ ಕಾಲದಲ್ಲಿ ಹೆಚ್ಚು ಈ ವೃತ್ತಿಯ ಅವಲಂಬಿತರಾಗಿದ್ದರೆಂದು ತೋರಿಬರುತ್ತದೆ. ಕಾರಣ ಆ ವೇಳೆಗೆ ಚನ್ನಪಟ್ಟಣ ವೀಣೆ ತಂತಿಗಳ ತಯಾರಿಕೆಗೆ ಹೆಸರಾಗಿದ್ದಿತ್ತು. ಆದರೆ ಕಾಲಾನಂತರದಲ್ಲಿ ಇಂದು ಆಧುನಿಕ ಪರಿಕರಗಳು ಲಭ್ಯವಾದಂತೆ ಈ ವಸ್ತುಗಳಿಗೆ

ಬೇಡಿಕೆ ಇಳಿಮುಖವಾದದ್ದು ಈ ವರ್ಗದವರು ಬೇರೆ ವೃತ್ತಿಯನ್ನರಸುವುದು ಅನಿವಾರ್ಯವಾಗಿದೆ. ಈ ವರ್ಗದದರಲ್ಲಿಯೂ ಶಿಕ್ಷಣ ಪಡೆದವರು ಬೇರೆ ಬೇರೆ ಉದ್ಯೋಗದಲ್ಲಿದ್ದಾರೆ. ಅಲ್ಪಸ್ವಲ್ಪ ಜಮೀನುಳ್ಳವರು ವ್ಯವಸಾಯ ವೃತ್ತಿಯನ್ನೇ ನಡೆಸುತ್ತಾರೆ. ಹೆಚ್ಚಿನ ಮಂದಿ ವಂಶಪಾರಂಪರ್ಯವಾಗಿ ಬಂದಿರುವ ವೃತ್ತಿಯನ್ನೇ ಮುಂದುವರೆಸಿದ್ದಾರೆ.[10]

4.5 ಕುಂಬಾರರು:

ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ವೃತ್ತಿಪರ ಕುಟುಂಬಗಳಾಗಿ ಈ ಹಿಂದೆ ನೆಲೆಸಿದ್ದವರು. ಮುಖ್ಯವಾಗಿ ಈ ತಾಲ್ಲೂಕಿನ ಬೇವೂರು ಮಂಡ್ಯ, ಕುಡಿಕೆ ಬೇವೂರು, ನಾಗವಾರ, ಸೈಯದ್‌ವಾಡಿ ಬಳಿಯ ಕುಂಬಾರಗೇರಿಗಳಲ್ಲಿ ನೆಲೆಸಿರುವ ಈ ವರ್ಗದವರಲ್ಲಿ ತೆಲಗು ಕುಂಬಾರರು, ಕರಿಕುಂಬಾರರು, ಬೈಲ ಕುಂಬಾರರು, ಗುಂಡಾಭಕ್ತರು ಇತ್ಯಾದಿ ಪಂಗಡಗಳಿವೆ.[11] ಮೂಲವಾಗಿ ವೈಷ್ಣವ ಪಂಥಕ್ಕೆ ಸೇರುವ ಇವರು ಬೇವೂರಿನ ತಿಮ್ಮಪ್ಪನ ಆರಾಧಕರಾಗಿದ್ದಾರೆ. ಆರಂಭದಲ್ಲಿ ಅಡುಗೆ ಮಾಡಲು ಅನುಕೂಲವಾಗುವ ಮಡಿಕೆಗಳು, ದೀಪಗಳು, ಗಂಟೆಗಳು, ಸಣ್ಣ ಸಣ್ಣ ಕುಡಿಕೆಗಳು, ಗುಡಾಣಗಳು ಎಲೆತೋಟಕ್ಕೆ ನೀರುಣಿಸಲು ಬಳಸುವ ಗುಂಬಗಳ ತಯಾರಿಕೆ ಪ್ರಧಾನವಾಗಿದ್ದವು.

ಕಾಲಕಾಲಕ್ಕೆ ಆದ ಬದಲಾವಣೆ ತಕ್ಕಂತೆ ಆಧುನಿಕ ಉಪಕರಣಗಳ ಬಳಕೆ ಹೆಚ್ಚಿದಂತೆ ಇವುಗಳ ಬೇಡಿಕೆ ಇಳಿಮುಖಗೊಂಡಾಗ ಈ ವರ್ಗದವರು ತಮ್ಮ ತಯಾರಿಕಾ ವಸ್ತುಗಳಲ್ಲಿಯೂ ಬದಲಾವಣೆಗಳನ್ನು ತಂದು ನೀರಿನ ಹೂಜಿ ತಯಾರಿಕೆಯನ್ನು ಮೈಗೂಡಿಸಿಕೊಂಡರು ಅಷ್ಟೇ ಅಲ್ಲದೆ ಅಲಂಕಾರಿಕ ವಸ್ತುಗಳ, ಆಧುನಿಕ ರೀತಿಯ ಹೂದಾನಿಗಳ ತಯಾರಿಕೆಯಲ್ಲಿ ತೊಡಗಿರುವುದು ಕಂಡುಬರುತ್ತದೆ. ಆದರೆ ಇಂದು ಮಣ್ಣಿನ ಪಾತ್ರೆಗಳ ಬಳಕೆ ಬಹಳಷ್ಟು ಕಡಿಮೆಯಾದದ್ದು ಇವರ ಆರ್ಥಿಕ ಜೀವನದ ಮೇಲೆಯೂ ಪರಿಣಾಮ ಬೀರಿದ್ದು ಇಂದು ಈ ವಸ್ತುಗಳ ತಯಾರಿಕೆಗೆ ಅಗತ್ಯವಿರುವ ಮಣ್ಣು ತರಲು ಇರುವ ತೊಂದರೆ, ಅವುಗಳನ್ನು ಸುಡಲು ಬಳಸುವ ಸೌದೆಯ ತೊಂದರೆ ಹಾಗೂ ಲಾಭಾಂಶದ ಕೊರತೆಯಿಂದಾಗಿ ಇಂದು ಈ ವರ್ಗದವರು ತಮ್ಮ ವೃತ್ತಿಯನ್ನು ತೊರೆದು ಕೃಷಿ ಕಾರ್ಮಿಕರಾಗಿ, ಗಾರೆ ಕೆಲಸಗಳಲ್ಲಿ, ಮರಗೆಲಸಗಳಲ್ಲಿ ಹಾಗೂ ಪಟ್ಟಣಗಳಲ್ಲಿ ದೊರೆಯುವ ಇತರೆ ಕೆಲಸಗಳನ್ನು ಅವಲಂಬಿಸುತ್ತಿದ್ದಾರೆ. ಈ ವರ್ಗದಲ್ಲಿಯೂ ಸಹ ಜನ ಅಲ್ಪಸ್ವಲ್ಪ ವಿದ್ಯಾವಂತ ರಾಗುತ್ತಿದ್ದು, ಸರ್ಕಾರಿ ಉದ್ಯೋಗಕಾಂಕ್ಷಿಗಳಾಗಿಯೂ ಶಿಕ್ಷಣ ಪಡೆಯುವವರೂ ಇದ್ದಾರೆ.

4.6 ಕುರುಬರು :

ಕುರಿ ಮೇಯಿಸುವುದನ್ನು ಹಾಗೂ ಕಂಬಳಿ ನೇಯುವುದನ್ನು ಪ್ರಮುಖ ವೃತ್ತಿಯಾಗಿ ಅಳವಡಿಸಿಕೊಂಡಿರುವವರನ್ನು ಕುರುಬರೆಂದು ಪರಿಗಣಿಸಿದ್ದಾರೆ. ಕಾಡು ಕುರುಬರು, ಜೇನು ಕುರುಬರು, ಬೆಟ್ಟ ಕುರುಬರು, ಹಂಡೆ ಕುರುಬರು ಇತ್ಯಾದಿ ಹೆಸರುಗಳು ಈ ಜನಾಂಗಕ್ಕೆ ರೂಢಿಯಲ್ಲಿದೆ. ಗ್ರಾಮ ಪ್ರದೇಶದಲ್ಲಿ ನೆಲೆ ನಿಂತ ಚನ್ನಪಟ್ಟಣ ಕುರುಬ ಜನಾಂಗದಲ್ಲಿ ಹಾಲು ಮತ ಮತ್ತು ಕಂಬಳಿ ಕುಲ ಎಂಬ ಪಂಗಡಗಳಿವೆ.[12] ಈ ಪಂಗಡಗಳು ತಾಲ್ಲೂಕಿನ ಚಿಕ್ಕೇನಹಳ್ಳಿ, ಬೇವೂರು, ಮಂಕುಂದ, ಹೊಸೂರುದೊಡ್ಡಿ, ಶೆಟ್ಟಿಹಳ್ಳಿ, ಮುದಗೆರೆ, ತೂಬಿನಕೆರೆ, ದೇವರಹಳ್ಳಿ ಹಾಗೂ ಸಂಕಲಗೆರೆ ಗ್ರಾಮಗಳಲ್ಲಿ ಪ್ರಮುಖವಾಗಿ ಕಂಡು ಬರುತ್ತಿದ್ದು, ಒಂದು ಕಾಲಕ್ಕೆ ಕುರಿ ಸಾಕಾಣಿಕೆಯನ್ನೇ ಪ್ರಮುಖ ವೃತ್ತಿಯಾಗಿ ಆಧರಿಸಿ ಆ ಕುರಿಯ ಉಣ್ಣೆಯಿಂದ ಕಂಬಳಿ ನೇಯುವುದು ಈ ಪಂಗಡಗಳಲ್ಲಿ ಸರ್ವೇಸಾಮಾನ್ಯವಾಗಿತ್ತು. ಇಂದಿಗೂ ಈ ವರ್ಗ ಸಾಕಷ್ಟು ಸಂಖ್ಯೆಯಲ್ಲಿದ್ದರೂ ಬಹುತೇಕ ಕುರಿಸಾಕುವ, ಕಂಬಳಿ ನೇಯುವುದು ಕಡಿಮೆಯಾಗಿದ್ದು, ಕುರುಬಗೌಡರು ಕುರಿಸಾಕಣೆಯಂತೆಯೇ ವ್ಯವಸಾಯದಲ್ಲಿಯೂ ನಿರತರಾಗಿದ್ದಾರೆ. ಇವರಲ್ಲಿ ಮರದ ಕೆಲಸದಲ್ಲಿ ನಿಷ್ಣವಂತರಾಗಿದ್ದು, ಮನೆ ಕಟ್ಟುವುದು, ಅಂದವಾದ ಮರಗೆಲಸ ಮಾಡುವುದರಲ್ಲಿಯೂ ನಿರತರಾಗಿದ್ದಾರೆ. ವಿದ್ಯಾವಂತರು ಉದ್ಯೋಗಗಳ ಕಡೆ ಗಮನಹರಿಸಿದ್ದಾರೆ.[13]

4.7 ಉಪ್ಪಾರರು :

ಉಪ್ಪಾರರು ಅಥವಾ ಉಪ್ಪಲಿಗರೆಂದು ಕರೆಯಲ್ಪಡುವ ಈ ವರ್ಗದವರು ಮುಖ್ಯವಾಗಿ ಚನ್ನಪಟ್ಟಣ ನಗರದ ಮಂಗಳವಾರಪೇಟೆಯಲ್ಲಿ ವಾಸವಾಗಿದ್ದು, ಇವರ ಪ್ರಮುಖ ವೃತ್ತಿ ಗಾರೆ ಕೆಲಸ, ಸುಣ್ಣಗೆಲಸ, ಇಟ್ಟಿಗೆ ಮಾಡುವುದು. ಇವರಲ್ಲಿಯೂ ಗಾರೆ ಉಪ್ಪಾರರು, ಸಾದಾ ಉಪ್ಪಾರರು, ಸುಣ್ಣ ಉಪ್ಪಾರರು, ಕಲ್ಲುಕುಟಿಗ ಉಪ್ಪಾರರು ಇತ್ಯಾದಿ ಉಪ ಪಂಗಡಗಳಿವೆ.[14] ಒಂದು ಕಾಲಕ್ಕೆ ಮಂಗಳವಾರಪೇಟೆಯಲ್ಲಿ ಬಹು ಸಂಖ್ಯಾತರಾಗಿದ್ದ ಇವರು ಮರದ ಆಟಿಕೆಗಳನ್ನು ಸಹ ತಯಾರಿಸುತ್ತಿದ್ದರು.[15] ಆದರೆ ಇಂದು ಕಾಲಕಾಲಕ್ಕೆ ಬದಲಾವಣೆಗಳಾದಂತೆ ಇವರೂ ಸಹ ವೃತ್ತಿಗಳನ್ನು ಬದಲಾಯಿಸಿರುವುದರ ಜೊತೆಗೆ ತಮ್ಮ ಮಕ್ಕಳುಗಳಿಗೆ ವ್ಯವಸ್ಥಿತ ಶಿಕ್ಷಣ ಕೊಡಿಸುತ್ತಾ ಬೇರೆ ಬೇರೆ ವೃತ್ತಿಗಳನ್ನು ಅನುಸರಿಸುತ್ತಿದ್ದಾರೆ.

4.8 ನೇಕಾರರು :

ಆನೇಕಲ್ಲಿನ ದೊಮ್ಮಸಂದ್ರ ಬಳಿಯಿಂದ ಐದಾರು ನೇಕಾರ ಕುಟುಂಬಗಳು ಚನ್ನಪಟ್ಟಣಕ್ಕೆ ವಲಸೆ ಬಂದು ಇಲ್ಲಿ ನೆಲೆನಿಂತವು. ದೇವಾಂಗ ಜನಾಂಗದ ಈ

ವೃತ್ತಿಪರ ವರ್ಗವು ತಾಲ್ಲೂಕಿನ ಎಲೆಕೇರಿಯಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಆರಂಭದಲ್ಲಿ ಕೈಮಗ್ಗಗಳಿಂದ ಬಟ್ಟೆಗಳನ್ನು ನೇಯುತ್ತಿದ್ದು ಇಂದು ಯಾಂತ್ರೀಕೃತ ಮಗ್ಗಗಳ ಬಳಕೆ ಸಾಮಾನ್ಯವಾಗಿದೆ. ತಾಲ್ಲೂಕಿನಲ್ಲಿ ರೇಷ್ಮೆ ಬೆಳೆ ಸಮೃದ್ಧಿಯಾಗಿದ್ದಂತೆ ಈ ಮಗ್ಗಗಳು ಸಾದಾ ರೇಷ್ಮೆ ಬಟ್ಟೆಯನ್ನು ತಯಾರಿಸುತ್ತಿದ್ದವು. ಈ ನೇಕಾರರು ಸ್ಪನ್‌ಸಿಲ್ಕ್ ಮಿಲ್ ಆರಂಭವಾದಾಗ ಅಲ್ಲಿಯೂ ಸಹ ಕೆಲಸ ನಿರ್ವಹಿಸುತ್ತಿದ್ದರು.[16] ಕೈಮಗ್ಗದ ಬಟ್ಟೆಗಳಿಗೆ ಬೇಡಿಕೆ ಕಡಿಮೆಯಾಗಿದ್ದು ಇವರು ಬೇರೆ ವೃತ್ತಿಯಲ್ಲಿ ನಿರತರಾಗಿದ್ದಾರೆ.

ತಾಲ್ಲೂಕಿನ ಗ್ರಾಮಗಳಲ್ಲಿ ಕಂಡು ಬರುವ ಪರಿಶಿಷ್ಟ ವರ್ಗವು ಬಹುಸಂಖ್ಯೆಯಲ್ಲಿ ನೀಲಕಂಠನಹಳ್ಳಿ, ತಿಟ್ಟಮಾರನಹಳ್ಳಿ, ಕುಂತೂರುದೊಡ್ಡಿ, ನೀಲಸಂದ್ರ, ಹರಿಸಂದ್ರಗಳಲ್ಲಿ ವಾಸವಾಗಿದ್ದು ಬಹುವೃತ್ತಿ ಆಧಾರಿತರಾಗಿದ್ದಾರೆ. ಕುಂತೂರುದೊಡ್ಡಿಯಲ್ಲಿ ವಾಸವಾಗಿರುವ ಇವರು ತೆಂಗಿನ ನಾರಿನಿಂದ ಹಗ್ಗ ತಯಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ (ಚಿತ್ರ–19). ಆರಂಭದಲ್ಲಿ ಎಲೆ ತೋಟಗಳಿಗೆ ಬಳಸುವ ನಾರು ಹುರಿಗಳ ತಯಾರಿಕೆ ಆಗುತ್ತಿದ್ದು, ನಂತರದ ದಿನಗಳಲ್ಲಿ ಇವುಗಳಿಗೆ ಬೇಡಿಕೆ ಕಡಿಮೆಯಾದಂತೆ ಇಂದು ಕೇವಲ ಹಗ್ಗಗಳ ತಯಾರಿಕೆಗೆ ಮಾತ್ರ ಈ ವರ್ಗ ಮೀಸಲಾಗಿದೆ. ಇವರಿಗೆ ಅಗತ್ಯವಿರುವ ತೆಂಗಿನನಾರು ತಾಲ್ಲೂಕಿನ ಮೊಗಳ್ಳಿದೊಡ್ಡಿ, ಸೋಗಾಲ ಕಡೆಗಳಿಂದ ಲಭ್ಯವಾಗುತ್ತಿದೆ. ನೀಲಕಂಠನಹಳ್ಳಿಯಲ್ಲಿಯೂ ಸಹ ಈ ಹಗ್ಗ ಅಥವಾ ಹುರಿ ತಯಾರಿಕೆ ಸಾಮಾನ್ಯವಾಗಿರುವುದರ ಜೊತೆಗೆ ಕಾರ್ಪೆಟ್‌ಗಳ ತಯಾರಿಕೆ ಈ ಜನಾಂಗದ ಮುಖ್ಯ ವೃತ್ತಿಯಾಗಿದೆ.[17] ನೀಲಸಂದ್ರದಲ್ಲಿ ಈ ಜನಾಂಗ ಹೆಚ್ಚಾಗಿ ಮರದ ಆಟಿಕೆಗಳ ತಯಾರಿಕೆಯಲ್ಲಿ ತೊಡಗಿದ್ದು, ಈ ವೃತ್ತಿಪರ ವರ್ಗಗಳೂ ಸಹ ಕಾಲಕ್ಕೆ ತಕ್ಕಂತೆ ಬದಲಾವಣೆ ಹೊಂದಿ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಉನ್ನತ ಸ್ಥಾನಗಳನ್ನು ಪಡೆದಿದ್ದಾರೆ.

4.9 ಮುಸ್ಲಿಂರು :

ಮುಖ್ಯವಾಗಿ ತಾಲ್ಲೂಕಿನ ಎಂ.ಕೆ. ದೊಡ್ಡಿ, ಕೋಡಂಬಳ್ಳಿ, ಹೊಂಗನೂರು, ಚನ್ನಪಟ್ಟಣ ಟೌನ್ ವ್ಯಾಪ್ತಿಯಲ್ಲಿ ನೆಲೆಸಿರುವ ಈ ಜನಾಂಗವು ಜನಸಂಖ್ಯೆಯಲ್ಲಿ 2ನೇ ಸ್ಥಾನದಲ್ಲಿದ್ದಾರೆ. ಪ್ರಾದೇಶಿಕವಾಗಿರುವ ಎಲ್ಲಾ ವೃತ್ತಿಗಳಲ್ಲಿ ತೊಡಗಿರುವ ಇವರು ಮರದ ಆಟಿಕೆಗಳ ತಯಾರಿಕೆ, ರೇಷ್ಮೆ ನೂಲು ತೆಗೆಯುವುದು, ಹರಳು ತಯಾರಿಕೆ, ಬೀಡಿ ಕಟ್ಟುವುದು, ಕಬ್ಬಿಣದ ಕೆಲಸ, ವ್ಯಾಪಾರ ಇತ್ಯಾದಿ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರೂ ಸಹ ಕಾಲಕಾಲಕ್ಕೆ ತಕ್ಕಂತೆ ಆದ ಬದಲಾವಣೆಗಳಿಗನುಸಾರವಾಗಿ ಮೂಲ ವೃತ್ತಿಗಳನ್ನು ತ್ಯಜಿಸಿ ಸರ್ಕಾರಿ ಉದ್ಯೋಗಾಂಕ್ಷಿಗಳಾಗಿ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ.

4.10 ಚಮ್ಮಾರರು :

ಚರ್ಮ ಹದ ಮಾಡುವುದನ್ನೇ ಪ್ರಮುಖ ವೃತ್ತಿಯನ್ನಾಗಿ ಅನುಸರಿಸುವ ಈ ಜನಾಂಗವು ಸುಮಾರು 30–40 ವರ್ಷಗಳ ಹಿಂದೆ ತಾಲ್ಲೂಕಿನ ಮಂಗಳವಾರಪೇಟೆಯಲ್ಲಿ ಪ್ರಮುಖವಾಗಿ ನೆಲೆಸಿದ್ದರು. ದನ, ಎಮ್ಮೆಗಳ ಚರ್ಮಗಳನ್ನು ಬಳಸಿ ಚಪ್ಪಲಿಗಳನ್ನು ತಯಾರಿಸುತ್ತಿದ್ದ ಇವರಿಗೆ ಬ್ರಾಂಡೆಡ್ ಕಂಪನಿಗಳಾದ ಬಾಟಾ ಕಂಪನಿಯವರು ಇವರಿಂದ ಚಪ್ಪಲಿಗಳನ್ನು ಒಯ್ದು ಮಾರುತ್ತಿದ್ದರು ಸಹ ಹೇಳಲಾಗುತ್ತದೆ.[18] ಆದರೆ ಇಂದು ಈ ವೃತ್ತಿ ಕಣ್ಮರೆಯಾಗಿದ್ದು, ಇವರು ಗಾರೆ ಕೆಲಸ, ಕೃಷಿ ಕಾರ್ಮಿಕರಾಗಿಯೂ ಸಹ ಕೆಲಸ ನಿರ್ವಹಿಸುತ್ತಿದ್ದಾರೆ. ಸರ್ಕಾರದಿಂದ ಇವರಿಗೆ ಶಿಕ್ಷಣ ಹಾಗೂ ವೃತ್ತಿಯಲ್ಲಿ ಮೀಸಲಾತಿ ದೊರೆತಂತೆ ತಮ್ಮ ಮೂಲ ವೃತ್ತಿಗಳನ್ನು ತ್ಯಜಿಸಿದ ಇವರು ವಿವಿಧ ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದಾರೆ.

4.11 ಬಣಜಿಗರು :

ಚನ್ನಪಟ್ಟಣ ಪಟ್ಟಣ ವ್ಯಾಪ್ತಿಯಲ್ಲಿ ಕಂಡುಬರುವ ಈ ವರ್ಗವು ಎಲೆ ಬಣಜಿಗ ಹಾಗೂ ದಾಸಬಣಜಿಗ ಎಂದು ಗುರ್ತಿಸಲ್ಪಟ್ಟಿದೆ. ಎಲೆ ಬಣಜಿಗರ ಮುಖ್ಯವೃತ್ತಿ ಮುತ್ತುಗದ ಎಲೆಗಳಿಂದ ಊಟದ ಎಲೆ ಹಾಗೂ ದೊನ್ನೆಗಳ ತಯಾರಿಕೆ. ದಾಸ ಬಣಜಿಗರು ಮುಖ್ಯವಾಗಿ ಮದುವೆ ಶುಭ ಸಂದರ್ಭಗಳಿಗೆ ಬೇಕಾದ ಬಳೆ ಹಾಗೂ ಮಂಗಳ ದ್ರವ್ಯಗಳ ವ್ಯಾಪಾರವನ್ನು ವೃತ್ತಿಯಾಗಿ ಅವಲಂಬಿಸಿದ್ದಾರೆ. ಆಧುನಿಕವಾದ ಪ್ಲಾಸ್ಟಿಕ್ ಎಲೆಗಳ ಹಾಗೂ ದೊನ್ನೆಗಳ ಬಳಕೆಯಾದಂತೆ ಈ ಎಲೆ ಬಣಜಿಗರ ವೃತ್ತಿಗೆ ಬೇಡಿಕೆ ಇಳಿಮುಖಗೊಂಡು ಇವರೂ ಸಹ ಬೇರೆ ವೃತ್ತಿಯಲ್ಲಿ ಅವಲಂಬಿತರಾಗಿದ್ದಾರೆ.

4.12 ಬೆಸ್ತರು :

ಮೀನುಗಾರಿಕೆಯೇ ಪ್ರಮುಖ ವೃತ್ತಿಯಾದ ಈ ವರ್ಗದವರನ್ನು ತಾಲ್ಲೂಕಿನ ಮೋಳೆದೊಡ್ಡಿ, ಭೂಹಳ್ಳಿ, ಮಂಕುಂದ, ದೇವರಹಳ್ಳಿ, ಕರಿಯಪ್ಪನದೊಡ್ಡಿಗಳಲ್ಲಿ ಪ್ರಮುಖವಾಗಿ ಕಾಣಬಹುದಾಗಿದೆ. ಚನ್ನಪಟ್ಟಣದ ಬಹುತೇಕ ಕೆರೆಗಳು ವ್ಯವಸಾಯ ಮೂಲವಾದ್ದರಿಂದ ಇಂದು ಮೀನುಗಾರಿಕೆಯು ಇಳಿಮುಖಗೊಂಡಿದ್ದು, ಇವರು ಸೊಪ್ಪು ಮಾರುವುದು, ಹೂ ಮಾರುವುದು, ಗೂಡು ಮಾರುವುದು ಇತರೆ ಕೃಷಿಕ ವೃತ್ತಿಯಲ್ಲಿ ತೊಡಗಿಕೊಂಡಿದ್ದು, ಕಾಲಕಾಲಕ್ಕೆ ಆದ ಬದಲಾವಣೆಯಂತೆ ಶಿಕ್ಷಣಕ್ಕೂ ಪ್ರಾಮುಖ್ಯತೆ ನೀಡಿ ಇವರು ಮೂಲವೃತ್ತಿಯನ್ನು ತ್ಯಜಿಸಿ ಇತರೆ ಉದ್ಯೋಗಗಳ ಕಡೆಗೆ ವಾಲಿದ್ದಾರೆ.

4.13 ಅಗಸರು/ಮಡಿವಾಳರು :

ತಾಲ್ಲೂಕಿನಲ್ಲಿ ಅಲ್ಪಸಂಖ್ಯಾತರಾಗಿ ಕಂಡು ಬರುವ ಈ ವರ್ಗದ ಮೂಲವೃತ್ತಿ ಬಟ್ಟೆ ಶುಚಿಗೊಳಿಸುವುದು. ಯಾವುದೇ ದೇವತಾ ಕಾರ್ಯಗಳು ಹಾಗೂ ಶುಭ ಸಮಾರಂಭಗಳು ಪ್ರಮುಖವಾಗಿ ಈ ವರ್ಗದವರಿಂದಲೇ ಆರಂಭಗೊಳ್ಳುತ್ತಿದ್ದವು.

ಆಧುನಿಕತೆ ಬೆಳೆದಂತೆಲ್ಲಾ ಇವರಿಗೆ ನೀಡುವ ಪ್ರಾಮುಖ್ಯತೆ ಅಲ್ಪವಾಗಿದ್ದು, ಇವರೂ ಸಹ ಆರ್ಥಿಕವಾಗಿ ಸಬಲರಾಗಲು ಇತರೆ ಉದ್ಯೋಗಗಳಲ್ಲಿ ತೊಡಗಿದ್ದಾರೆ. ಇವರಲ್ಲಿಯೂ ಬೆಳ್ಳಿಕುಲ, ನಾಗರ ಕುಲ, ಹಳೇಕುಲ ಇತ್ಯಾದಿ ಉಪಪಂಗಡಗಳಿದ್ದು ಸ್ಥಳೀಯ ದೇವತೆಗಳನ್ನು ಪೂಜಿಸುತ್ತಾರೆ.[19]

ಹೀಗೆ ತಾಲ್ಲೂಕಿನಾದ್ಯಂತ ವಿವಿಧ ವೃತ್ತಿಪರ ವರ್ಗಗಳಿದ್ದು, ಇವರ ಜೀವನ ಕ್ರಮ ಹಿಂದಿಗಿಂತ ಇಂದು ಬಹಳಷ್ಟು ಬದಲಾಗಿರುವುದು ಕಂಡುಬರುತ್ತದೆ. ಅಪ್ಪ ಹಾಕಿದ ಆಲದ ಮರದಂತೆ ಅದೇ ಮೂಲ ವೃತ್ತಿಗಳಿಗೆ ಅಂಟಿಕೊಳ್ಳದೆ ತಮ್ಮ ಆರ್ಥಿಕ ಸಬಲತೆಗಾಗಿ ತಮಗೆ ಅನುಕೂಲವಾಗುವ ವೃತ್ತಿಗಳಲ್ಲಿ ತೊಡಗುತ್ತಿರುವುದು ಸಾಮಾನ್ಯವಾಗಿದ್ದು, ಇಲ್ಲಿ ನಿರ್ದಿಷ್ಟ ಜನಾಂಗದವರೇ ನಿರ್ದಿಷ್ಟ ವೃತ್ತಿಯಲ್ಲಿ ತೊಡಗಿದ್ದಾರೆ ಎಂದು ಸ್ಪಷ್ಟೀಕರಿಸುವುದು ಸಾಧ್ಯವಿಲ್ಲ. ಎಲ್ಲಾ ವರ್ಗ ಸಮುದಾಯಗಳು ಎಲ್ಲಾ ವೃತ್ತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದು ಕಂಡು ಬರುತ್ತಿದೆ.

ಅಡಿಟಿಪ್ಪಣಿಗಳು :

1. ಕರೀಗೌಡ ಬೀಚನಹಳ್ಳಿ (ಸಂ.), 'ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ–2. ಕರಕುಶಲ ಕಲೆಗಳು', ಪು.9.
2. ಅದೇ, ಪು.35.
3. ಎಂ.ಬೈರೇಗೌಡ ಮತ್ತು ತಾ.ಸಿ. ತಿಮ್ಮಯ್ಯ (ಸಂ.), 'ಅರ್ಕಾವತಿ', ಪು.294.
4. ಸೂರ್ಯನಾಥ ಯು.ಕಾಮತ್ (ಸಂ.), 'ಕರ್ನಾಟಕ ರಾಜ್ಯ ಗೆಜೆಟಿಯರ್ ಬೆಂಗಳೂರು ಗ್ರಾಮಾಂತರ ಜಿಲ್ಲೆ', ಪು.158.
5. ಚಕ್ಕಲೂರು ಚನ್ನಪ್ಪ (ಸಂ.), 'ಜನಪದವಾಣಿ', ಪು.23.
6. ಮೌಖಿಕ ಸಂದರ್ಶನ: ಶ್ರೀನಿವಾಸ್, ಮೇದರ ಬೀದಿ, ಚನ್ನಪಟ್ಟಣ.
7. ಕರೀಗೌಡ ಬೀಚನಹಳ್ಳಿ (ಸಂ.), ಪು.26.
8. ಅದೇ, ಪು.354.
9. ಚಕ್ಕಲೂರು ಚನ್ನಪ್ಪ (ಸಂ.), ಪು.24.
10. ಅದೇ, ಪು.26.
11. ಸೂರ್ಯಾನಾಥ ಯು. ಕಾಮತ್, ಪು.155.
12. ಚಕ್ಕಲೂರು ಚನ್ನಪ್ಪ (ಸಂ.), ಪು.17.
13. ಅದೇ, ಪು.18.
14. ಸೂರ್ಯನಾಥ ಯು. ಕಾಮತ್ (ಸಂ.), ಪು.162.
15. ಮೌಖಿಕ ಸಂದರ್ಶನ: ಶಿವರಾಮೇಗೌಡ ನಾಗವಾರ, ನಿವೃತ್ತ ಪ್ರಾಂಶುಪಾಲರು, ಚನ್ನಪಟ್ಟಣ.
16. ಮೌಖಿಕ ಸಂದರ್ಶನ: ಹನುಮಂತಪ್ಪ, ನೇಕಾರರು, ಎಲೇಕೇರಿ, ಚನ್ನಪಟ್ಟಣ.
17. ಮೌಖಿಕ ಸಂದರ್ಶನ: ಮೋಹನ್‌ಕುಮಾರ್, ತರಬೇತಿದಾರರು, ಹಗ್ಗ ತಯಾರಿಕಾ ಉದ್ದಿಮೆ, ತಿಟ್ಟಮಾರನಹಳ್ಳಿ, ಚನ್ನಪಟ್ಟಣ.
18. ಮೌಖಿಕ ಸಂದರ್ಶನ: ಶಿವರಾಮೇಗೌಡ ನಾಗವಾರ, ನಿವೃತ್ತ ಪ್ರಾಂಶುಪಾಲರು, ಚನ್ನಪಟ್ಟಣ.
19. ಸೂರ್ಯನಾಥ ಯು.ಕಾಮತ್ (ಸಂ.), ಪು.148.

ಅಧ್ಯಾಯ–5

ವ್ಯಾಪಾರ–ವಾಣಿಜ್ಯ

ಅಧ್ಯಾಯ–5

ವ್ಯಾಪಾರ–ವಾಣಿಜ್ಯ

ಸುಮಾರು 250–300 ವರ್ಷಗಳ ಹಿಂದೆ ಮುಸಲ್ಮಾನ ವ್ಯಕ್ತಿಯೊಬ್ಬ ತಾನು ಕರಗತ ಮಾಡಿಕೊಂಡಿದ್ದ ಕುಶಲತೆಯನ್ನು ಬಿಂಬಿಸುವ ಸಲುವಾಗಿ ಉಗಮವಾದ ಈ ಮರದ ಕರಕುಶಲ ಉದ್ಯಮವು ಬಹುಶಃ ಇಂದಿನ ವಿದೇಶಿ ವ್ಯಾಪಾರದಲ್ಲಿ ವಿದೇಶಿ ವಿನಿಮಯಗಳಿಸುತ್ತದೆ ಎಂದು ಎಣಿಸಲು ಅಸಾಧ್ಯವಾಗಿತ್ತು. ಕೇವಲ ತನ್ನ ವೃತ್ತಿಯನ್ನಾಗಿ ಇದನ್ನು ಆಯ್ಕೆ ಮಾಡಿಕೊಂಡ ವ್ಯಕ್ತಿ ಆರಂಭದಲ್ಲಿ ವ್ಯಾಪಾರದಲ್ಲಿನ ಲಾಭವನ್ನೇನು ಎಣಿಸಿರಲಿಲ್ಲ ಎಂದೆನಿಸುತ್ತದೆ. ಕಾರಣ ಈಗಾಗಲೇ ನಾವು ಈ ಉದ್ಯಮದ ಉಗಮ ಇತಿಹಾಸದಲ್ಲಿ ಉಲ್ಲೇಖಿಸಿರುವಂತೆ ಸಮೃದ್ಧ ಹಾಲೆಮರಗಳ ಲಭ್ಯತೆ ತನ್ನಲ್ಲಿದ್ದ ಕುಶಲತೆಯನ್ನು ಬಳಸಿ ಮರದ ಆಟಿಕೆಗಳ, ಬೊಂಬೆಗಳ ತಯಾರಿಕೆ ಆರಂಭ ಮಾಡಿದ ವ್ಯಕ್ತಿ ಮುಂದಿನ ದಿನಗಳಲ್ಲಿ ತನ್ನ ಸುತ್ತಲಿನ ಜನಗಳಿಗೆ ಅದರ ಪರಿಚಯ ಮಾಡಿಕೊಟ್ಟಾಗ ವೃತ್ತಿಯನ್ನು ಅವಲಂಬಿಸುವವರು ಹೆಚ್ಚಾದಂತೆ, ಉತ್ಪನ್ನಗಳ ಸಂಖ್ಯೆಯೂ ಹೆಚ್ಚುತ್ತಾ ಹೋಯಿತು.

ಟಿಪ್ಪು ಆಳ್ವಿಕೆಯ ಕಾಲದ ವರೆಗೂ ಈ ಉದ್ದಿಮೆಗೆ ಸಾಕಷ್ಟು ಬೆಂಬಲ, ಪ್ರೋತ್ಸಾಹ ಸಿಕ್ಕಿರುವುದು ಗೋಚರವಾಗುವುದಿಲ್ಲ. ಆದರೆ ಬಲ್ಲ ಮೂಲಗಳ ಪ್ರಕಾರ ಟಿಪ್ಪು ಮತ್ತು ಹೈದರ್‌ನ ಕಾಲದಲ್ಲಿ ಈ ಉದ್ದಿಮೆಗಳ ಬಗ್ಗೆ ಆಸಕ್ತಿ ತೋರಿರುವುದು ಕಂಡು ಬರುತ್ತದೆ. ಈಗಾಗಲೇ ರೂಢಿಯಲ್ಲಿದ್ದ ಈ ಉದ್ದಿಮೆಯನ್ನು ಆರ್ಥಿಕವಾಗಿ ಮುನ್ನಡೆಸಲು ಟಿಪ್ಪು ಫ್ರಾನ್ಸಿನಿಂದ ವಿಖ್ಯಾತ ಕುಶಲ ಕರ್ಮಿಗಳನ್ನು ಕರೆಸಿದ್ದನು. ಅವರ ಮೂಲಕ ಕುಶಲ ಕಲೆಗಳಿಗೆ ಪ್ರೋತ್ಸಾಹ ನೀಡುವುದಲ್ಲದೆ ತನ್ನ ಪ್ರಜೆಗಳಲ್ಲಿ ಆಸಕ್ತರಾದವರಿಗೆ ಅವರಿಂದ ತರಬೇತಿ ಕೊಡಿಸುತ್ತಿದ್ದ.[1] ಇಲ್ಲಿಂದಾಚೆಗೆ ಈ ಕೈಗಾರಿಕೆಗಳಲ್ಲಿ ಉತ್ಪನ್ನವಾದ ವಸ್ತುಗಳ ಮಾರಾಟ ಆರಂಭವಾಗಿದೆ ಎನ್ನಲಾಗಿದೆ.

5.1 ಬೊಂಬೆಗಳು ಮತ್ತು ಆಟಿಕೆ ಸಾಮಾನುಗಳ ಉದ್ಯಮ :

ಆರಂಭದಲ್ಲಿ ಈ ಪ್ರದೇಶದಲ್ಲಿ ಉತ್ಪನ್ನವಾದ ವಸ್ತುಗಳು ಸ್ಥಳೀಯ ಮಾರುಕಟ್ಟೆಗಳಲ್ಲಿ ಮಾರಾಟವಾಗುತ್ತಿದ್ದವು. ಪ್ರಾರಂಭದಲ್ಲಿ ಉತ್ಪನ್ನವಾಗುತ್ತಿದ್ದ ಲಟ್ಟಣಿಗೆಗಳು ಗೃಹೋಪಯೋಗಿ ವಸ್ತುವಾದುದರಿಂದ ಸ್ಥಳೀಯವಾಗಿ ಅವುಗಳ ಕೊಳ್ಳುವಿಕೆ ಹೆಚ್ಚಾಯಿತು ಜೊತೆಗೆ ಪೆನ್ ಹೋಲ್ಡರ್ಸ್‌ಗಳು ಬರೆಯಲು ಅನುಕೂಲವಾಗುತ್ತಿದ್ದರಿಂದ ಈ ವಸ್ತುಗಳಿಗೆ ಬೇಡಿಕೆ ಉಂಟಾಯಿತು. ಇಲ್ಲಿಂದಾಚೆಗೆ

ಈ ಕರಕುಶಲ ವಸ್ತುಗಳ ವ್ಯಾಪಾರ ಹೆಚ್ಚಾಯಿತೆಂದರೆ ತಪ್ಪಾಗಲಾರದು. ವ್ಯಾಪಾರ ಅಭಿವೃದ್ಧಿಯಾದಂತೆಲ್ಲಾ ಉತ್ಪನ್ನಗಳನ್ನು ಮಾರಾಟ ಮಾಡಲು ಅಕ್ಕ-ಪಕ್ಕದ ಊರುಗಳಿಗೆ ತಯಾರಕರು ಹೊತ್ತು ತಿರುಗುವುದು ಸಾಮಾನ್ಯವಾಯಿತು. ಆ ನಂತರದಲ್ಲಿ ಈ ಮರದ ಆಟಿಕೆಗಳು, ಬೊಂಬೆಗಳನ್ನು ಅಲ್ಲಲ್ಲಿ ನಡೆಯುವ ವಾರದ ಸಂತೆಗಳಲ್ಲಿ, ಜಾತ್ರೆಗಳಲ್ಲಿ ಮಾರಾಟ ಮಾಡುವುದು ಸಾಮಾನ್ಯವಾದಂತೆ ಇವು ಜನಪ್ರಿಯಗೊಂಡವು.[2] ಕೈಗಾರಿಕಾಭಿವೃದ್ಧಿಯು ಟಿಪ್ಪುವಿನ ಆಡಳಿತದ ಕಾಲದಲ್ಲಿ ಆತನ ತಂದೆ ಹೈದರನ ಕಾಲಕ್ಕಿಂತಲೂ ಉತ್ತಮ ಸ್ಥಿತಿಯಲ್ಲಿತ್ತು ಕೈಗಾರಿಕಾಭಿವೃದ್ಧಿಯಂತೆಯೇ ವಾಣಿಜ್ಯಾಭಿವೃದ್ಧಿಯೂ ಆಗಿತ್ತು. ದೇಶ – ವಿದೇಶಗಳೆರಡೂ ಕಡೆ ವ್ಯಾಪಾರ ಸಂಪರ್ಕ ಸಮೃದ್ಧಗೊಂಡಿತ್ತು. ಫ್ರಾನ್ಸ್, ಟರ್ಕಿ, ಚೀನಾ, ಇರಾನ್ ಮೊದಲಾದ ದೂರದ ದೇಶಗಳೊಂದಿಗೆ ವ್ಯಾಪಾರ ಸಂಪರ್ಕವಿತ್ತು.[3] ಹೀಗೆ ಟಿಪ್ಪುವಿನ ಕಾಲದಲ್ಲಿ ಈ ಉತ್ಪನ್ನಗಳು ಸ್ಥಳೀಯವಾಗಿ ಹಾಗೂ ವಿದೇಶಿ ಮಾರುಕಟ್ಟೆಗಳಿಗೂ ಮಾರಾಟವಾಗುತ್ತಿದ್ದವು.

ಟಿಪ್ಪುವಿನ ನಂತರದ ಕಾಲದಲ್ಲಿ ಆಳ್ವಿಕೆ ಮಾಡಿದ ಮೈಸೂರು ಒಡೆಯರ ಅವಧಿಯಲ್ಲಿ ಈ ಕರಕುಶಲ ವಸ್ತುಗಳ ವ್ಯಾಪಾರವು ದ್ವಿಗುಣಗೊಂಡಿರುವುದು ಕಂಡು ಬರುತ್ತದೆ. ಮೃದು ಹಾಲೆ ಮರಗಳ ಬಳಕೆಯಿಂದ ಉತ್ತಮವಾಗಿ ರೂಪುಗೊಳ್ಳುತ್ತಿದ್ದ ಈ ಬೊಂಬೆಗಳು ತಮ್ಮ ವರ್ಣ ಸೌಂದರ್ಯದಿಂದ ಮೈಸೂರು ಅರಸರ ಗಮನ ಸೆಳೆದವು. ಬೊಂಬೆಗಳಿಗೆ ಮನಸೋತ ಒಡೆಯರು ಮುಂದೆ ಇವುಗಳನ್ನು ವಸ್ತು ಪ್ರದರ್ಶನಗಳಲ್ಲಿ ಪ್ರದರ್ಶಿಸಲು ಅನುಕೂಲ ಮಾಡಿಕೊಟ್ಟರು. ರಾಜ ಒಡೆಯರ ಕಾಲದಲ್ಲಿ ಆರಂಭವಾದ ಮೈಸೂರು ದಸರಾ ಪಾರಂಪರಿಕವಾಗಿ ಮುಂದುವರೆಯುತ್ತಿದ್ದಂತೆ ಇದನ್ನು ವೀಕ್ಷಿಸಲು ಬರುವ ಜನರು ಸಹಾ ಅಷ್ಟೇ ಸಂಖ್ಯೆಯಲ್ಲಿ ಹೆಚ್ಚುತ್ತಿದ್ದರು. ಇಂತಹ ಸಂದರ್ಭಗಳಲ್ಲಿ ಮೈಸೂರಿನಲ್ಲಿ ಏರ್ಪಾಡಾಗುತ್ತಿದ್ದ ದಸರಾ ವಸ್ತು ಪ್ರದರ್ಶನದಲ್ಲಿ ಈ ಗೊಂಬೆಗಳ ಪ್ರದರ್ಶನ ಅದರ ವ್ಯಾಪಾರ ವಾಣಿಜ್ಯದ ಅಭಿವೃದ್ಧಿಗೆ ಸಹಕಾರಿಯಾಯಿತು. ದೇಶದ ಮೂಲೆ-ಮೂಲೆಗಳಿಂದ ದಸರಾ ವೀಕ್ಷಣೆಗೆ ಬರುತ್ತಿದ್ದ ಜನ ವಸ್ತು ಪ್ರದರ್ಶನದಲ್ಲಿನ ಮರದ ಆಟಿಕೆಗಳನ್ನು ನೋಡಿ ಸಂತೋಷಗೊಂಡು ಅವುಗಳನ್ನು ತಮ್ಮೊಡನೆ ಕೊಂಡೊಯ್ದರು. ಅಲ್ಲಿಂದಾಚೆಗೆ ಕೇವಲ ಸ್ಥಳೀಯ ಮಟ್ಟದಲ್ಲಿ ಮಾತ್ರ ಪರಿಚಿತವಾಗಿದ್ದ ಈ ಬೊಂಬೆಗಳು ಬೇರೆ ಬೇರೆ ರಾಜ್ಯಗಳಿಗೂ ಪರಿಚಿತವಾದಾಗ ಇದನ್ನು ನೋಡಲು ಈ ಕುಶಲತೆಯನ್ನು ಕಲಿಯಲು ಹಾಗೆಯೇ ಈ ವಸ್ತುಗಳನ್ನು ಕೊಳ್ಳಲು ಜನರು ಮುಂದಾದರು. ಇನ್ನೂ ಕೆಲವರು ಈ ವಸ್ತುಗಳ ಕೊಳ್ಳುವಿಕೆ-ಮಾರುವಿಕೆಯಲ್ಲಿ ಲಾಭ ಸಂಪಾದನೆಯ ದೃಷ್ಟಿಯಲ್ಲಿ ಚಿಂತನೆ ನಡೆಸಿದರು.

ಮೈಸೂರು ಒಡೆಯರ ಅವಧಿಯಲ್ಲಿನ ದಿವಾನರುಗಳು ಸಹ ಈ ಕರಕುಶಲ ವಸ್ತುಗಳ ವ್ಯಾಪಾರ ವಾಣಿಜ್ಯಕ್ಕೆ ಸಹಕರಿಸುವುದು ತಿಳಿದು ಬರುತ್ತದೆ. ಚನ್ನಪಟ್ಟಣದ

ಗುಡಿ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಮೈಸೂರು ಬ್ಯಾಂಕ್‌ನ ಒಂದು ಶಾಖೆಯನ್ನು ವಿಶ್ವೇಶ್ವರಯ್ಯನವರು ಚನ್ನಪಟ್ಟಣದಲ್ಲಿಯೂ ಆರಂಭಿಸಿದ್ದು ಕರಕುಶಲ ಉದ್ದಿಮೆಯ ವ್ಯಾಪಾರ ವಾಣಿಜ್ಯಕ್ಕೆ ಅನುಕೂಲವಾಯಿತು. ಇವರ ಈ ಪ್ರಯತ್ನದಿಂದಾಗಿ ಉದ್ಯಮದಾರರಿಗೆ ಬಂಡವಾಳ ಹೂಡಿಕೆಗೆ, ಕಚ್ಚಾ ವಸ್ತುಗಳನ್ನು ಕೊಳ್ಳಲು, ಉತ್ಪನ್ನವಾದ ವಸ್ತುಗಳನ್ನು ಮಾರಾಟಮಾಡಲು ಸುಲಭಸಾಧ್ಯವಾಯಿತು. ವಿಶ್ವೇಶ್ವರಯ್ಯನವರ ನಂತರ ಅಧಿಕಾರಕ್ಕೆ ಬಂದ ಮಿರ್ಜಾ ಇಸ್ಮಾಯಿಲ್ ಅವರು ಸಹ ಕರಕುಶಲ ಉದ್ದಿಮೆಗಳಿಗೆ ಪ್ರೋತ್ಸಾಹ ನೀಡಿರುವುದು ಕಂಡು ಬರುತ್ತದೆ. ಈ ವೇಳೆಗಾಗಲೇ ಆರಂಭವಾಗಿದ್ದ ಕುಶಲಕರ್ಮಿ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆಯುವವರಿಗೆ ಶಿಷ್ಯವೇತನ ಹೆಚ್ಚಿಸಿ ತರಬೇತಿ ನೀಡಿ ಕಲೆಯ ಆ ಮೂಲಕ ವ್ಯಾಪಾರ ವಾಣಿಜ್ಯದ ಅಭಿವೃದ್ಧಿಗೆ ಸಹಕಾರಿಯಾದರು.[4]

ಟಿಪ್ಪುವಿನ ಕಾಲದಿಂದ ಬ್ರಿಟೀಷರ ಆಡಳಿತಾವಧಿಯ ಅಂತ್ಯದವರೆಗೆ ಕೇವಲ ಸ್ಥಳೀಯ ಹಾಗೂ ದೇಶೀಯ ಮಾರುಕಟ್ಟೆಗಳಲ್ಲಿ ಹೆಚ್ಚಾಗಿ ಮಾರಾಟವಾಗುತ್ತಿದ್ದ ಈ ಕರಕುಶಲ ವಸ್ತುಗಳ ವ್ಯಾಪಾರ-ವಾಣಿಜ್ಯ ಮಂದಗತಿಯಲ್ಲಿ ನಡೆಯುತ್ತಿದ್ದುದು ಕಂಡು ಬರುತ್ತದೆ. ಸ್ವಾತಂತ್ರ್ಯ ನಂತರದಲ್ಲಿ ಈ ಉದ್ದಿಮೆಯ ಬೆಳವಣಿಗೆಯಾದಂತೆ ವ್ಯಾಪಾರ ವಾಣಿಜ್ಯಗಳು ಹಂತ ಹಂತವಾಗಿ ಮುಂದುವರೆದಿರುವುದು ತಿಳಿದು ಬರುತ್ತದೆ. ಕೊಲೊಂಬೋ ಯೋಜನೆಯಡಿ ಕ್ರಿ.ಶ. 1959 ರಲ್ಲಿ ಸ್ಥಳೀಯ ಜನರನ್ನು ಜಪಾನಿಗೆ ಕಳುಹಿಸಿ ಆ ಮೂಲಕ ಅವರಿಗೆ ಯಾಂತ್ರೀಕೃತ ಲೇತ್‌ಗಳ ಬಳಕೆಯಿಂದ ವಿವಿಧ ಕರಕುಶಲ ವಸ್ತುಗಳ ಉತ್ಪಾದನೆಯ ತರಬೇತಿ ನೀಡಿದಾಗ, ಮಾನವ ಶಕ್ತಿಯಿಂದ ನಡೆಯುವ ಯಂತ್ರಗಳಿಗಿಂತ ಯಾಂತ್ರೀಕೃತ ಲೇತ್‌ಗಳಿಂದ ಬಹಳ ವೇಗವಾಗಿ ಕರಕುಶಲ ವಸ್ತುಗಳ ಉತ್ಪಾದನೆ ಹೆಚ್ಚಿತಲ್ಲದೆ ಬಹಳ ನವಿರಾದ, ಸೂಕ್ಷ್ಮ ಕೆಲಸಗಳನ್ನೊಳಗೊಂಡ ವಸ್ತುಗಳು ವಿದೇಶಿಯರನ್ನು ಆಕರ್ಷಿಸಿದವು (ಚಿತ್ರ-20). ಈ ವೇಳೆಗಾಗಲೇ ತಮ್ಮನ್ನು ಸಂಪೂರ್ಣವಾಗಿ ಈ ಉದ್ದಿಮೆಗೆ ತೊಡಗಿಸಿಕೊಂಡಿದ್ದ ಸಯ್ಯದ್ ನಿಜಾಂ ಹಾಗೂ ಎಂ.ಲಿಂಗಯ್ಯನವರು ಈ ಕರಕುಶಲ ವಸ್ತುಗಳನ್ನು ವಿದೇಶಕ್ಕೆ ರಫ್ತು ಮಾಡಲು ಆಲೋಚಿಸಿ ಅದರ ಬಗ್ಗೆ ಸೂಕ್ತ ಸಲಹೆಗಳೊಂದಿಗೆ ಎಲ್ಲಾ ಉದ್ದಿಮೆದಾರರು ಒಗ್ಗೂಡಿ ಆರಂಭಿಸಿದ್ದೇ 'Channapatna Handicrafts Export Association.'[5] ಆರಂಭದಲ್ಲಿ ಈ ಸಂಘದ ಮುಖಾಂತರವೇ ವಿದೇಶಗಳಿಗೆ ವಸ್ತುಗಳು ರವಾನೆಯಾಗತೊಡಗಿದಾಗ ಈ ಕರಕುಶಲ ವಸ್ತುಗಳ ವ್ಯಾಪಾರ ಒಂದು ಹಂತವನ್ನೇರಿದಂತೆ ತಿಳಿದು ಬರುತ್ತದೆಯಾದರೂ ಕಾಲಾನಂತರದಲ್ಲಿ ವ್ಯಾಪಾರಿಗಳು ವೈಯಕ್ತಿಕವಾಗಿ ರಫ್ತು ಮಾಡತೊಡಗಿದರು. ಇಂದಿಗೂ ಅಮೇರಿಕಾ, ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್, ಜಪಾನ್, ಇಟಲಿ, ಸಿಂಗಾಪುರ, ಶ್ರೀಲಂಕಾ ಮುಂತಾದ ರಾಷ್ಟ್ರಗಳಿಗೆ ರಫ್ತಾಗುತ್ತಿವೆ.[6] ಈ ವಸ್ತುಗಳ ಪ್ಯಾಕಿಂಗ್‌ಗಾಗಿ ಹಿಂದೆ ವಾಲೆಗರಿಗಳಿಂದ ಹೆಣೆದ ಬುಟ್ಟಿಯನ್ನು ಬಳಸಲಾಗುತ್ತಿತ್ತು. ಚನ್ನಪಟ್ಟಣದ ಕೂಡ್ಲೂರಿನ ಬಳಿಯ

ವಾಲೆತೋಪಿನಿಂದಾಗಿ ಈ ವಾಲೆ ಗರಿಗಳು ಯಥೇಚ್ಛವಾಗಿ ದೊರೆಯುತ್ತಿದ್ದು ಅವುಗಳಿಂದ ಬುಟ್ಟಿಗಳನ್ನು ಹೆಣೆದು ಪ್ಯಾಕಿಂಗ್‌ಗೆ ಸಿದ್ಧಗೊಳಿಸುತ್ತಿದ್ದರು.

ಇಷ್ಟೆಲ್ಲಾ ಸ್ಥಳೀಯ ಹಾಗೂ ವಿದೇಶಿಯ ಮಾರುಕಟ್ಟೆಯಲ್ಲಿ ಹೆಸರುಗಳಿಸಿದ ಈ ಉದ್ದಿಮೆಯ ವ್ಯಾಪಾರ ವಾಣಿಜ್ಯವು ಮುಂದಿನ ದಿನಗಳಲ್ಲಿ ಇಳಿಮುಖ ಕಂಡಿತು. ಕಾರಣ ಈಶ್ವರ ರಾಜುರವರು ಹೇಳುವಂತೆ ಕರ್ನಾಟಕದ ಕರಕುಶಲತೆಯಂತೆಯೇ ನೆರೆ ರಾಜ್ಯಗಳಾದ ಕೇರಳ ರಾಜ್ಯದಲ್ಲಿ Kerala States Handicrafts, ಆಂಧ್ರ ಪ್ರದೇಶದ Lepakshi Handicrafts, ರಾಜಸ್ಥಾನದ Rajasthan Handicrafts, ತಮಿಳು ನಾಡಿನ ಪ್ರಂಪೂಹಾರ್‌ನಲ್ಲಿ ಹ್ಯಾಂಡಿಕ್ರಾಫ್ಟ್‌ಗಳಿದ್ದು ಇವು ಕರ್ನಾಟಕದ ಕರಕುಶಲ ವಸ್ತುಗಳನ್ನು ಮಾರಲು ನಿರಾಸಕ್ತಿ ತೋರಿವೆ. ಕರ್ನಾಟಕವು ತನ್ನ ಸಂಸ್ಕೃತಿಯಲ್ಲಿ ಮೈಗೂಡಿಸಿಕೊಂಡಿರುವಂತೆ 'Live and Let Live' ನಂತೆ ತನ್ನ ಕರಕುಶಲ ವಸ್ತುಗಳ ಜೊತೆಗೆ ಇತರ ರಾಜ್ಯಗಳ ಕರಕುಶಲ ವಸ್ತುಗಳನ್ನು ಮಾರಾಟ ಮಾಡುತ್ತಿದ್ದು ಇದು ರಾಜ್ಯದ ಕರಕುಶಲ ವಸ್ತುಗಳ ಮೇಲೆ ಪರಿಣಾಮ ಬೀರಿದೆ. ಹೀಗಿದ್ದರೂ ಸರ್ಕಾರವೂ ಈ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟಕ್ಕಾಗಿ ಉಚಿತ ಸ್ಟಾಲ್‌ಗಳನ್ನು ತೆರೆಯಲು ಅವಕಾಶ ಕೂಡ ನೀಡಿ ಪ್ರೋತ್ಸಾಹಿಸುತ್ತಿದೆ.[7]

ಕ್ರಿ.ಶ.1980ರ ವರೆಗೂ ಚೆನ್ನಾಗಿಯೇ ನಡೆಯುತ್ತಿದ್ದ ಈ ಕರಕುಶಲ ವಸ್ತುಗಳ ವ್ಯಾಪಾರ ವಾಣಿಜ್ಯವು ನಂತರದಲ್ಲಿ ತೀವ್ರ ಹಿನ್ನಡೆ ಸಾಧಿಸಿದ್ದು ಚೀನಾ ದೇಶದ ಕರಕುಶಲ ವಸ್ತುಗಳಿಂದಾಗಿ. ಈ ಚೀನಾ ಆಟಿಕೆಗಳ ಭರಾಟೆ ಎಷ್ಟರ ಮಟ್ಟಿಗೆ ಆಕ್ರಮಿಸಿತೆಂದರೆ ಯಾಂತ್ರಿಕ ಶಕ್ತಿಯಿಂದ ತಯಾರಾಗುತ್ತಿದ್ದ ಚೀನಾ ಮಾದರಿಗಳು ಕಡಿಮೆ ಬೆಲೆಗೆ ದೊರೆಯಲು ಆರಂಭವಾದಂತೆ ಚನ್ನಪಟ್ಟಣದ ವಸ್ತುಗಳು ಸ್ಪರ್ಧಿಸಲಾರದೇ ಹೋದವು. ಆದರೆ ಕ್ರಮೇಣ ಚೀನಾ ಆಟಿಕೆಗಳಿಗೆ ಬಳಸುವ ಬಣ್ಣವು ಅಪಾಯಕಾರಿಯಾದದ್ದೆಂದು, ಮಕ್ಕಳು ಅದನ್ನು ಹಿಡಿದು ಆಡುವಾಗ ಆ ಬಣ್ಣವು ಮಕ್ಕಳ ಬಾಯಿಂದ ದೇಹವನ್ನು ಸೇರಿ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆಂದು ರುಜುವಾತಾದಾಗ ಚನ್ನಪಟ್ಟಣದ ಕರಕುಶಲ ಉದ್ದಿಮೆ ಇನ್ನೊಮ್ಮೆ ಚೇತರಿಸಿಕೊಳ್ಳಲು ಅವಕಾಶವಾಯಿತು. ಚನ್ನಪಟ್ಟಣದ ಮರದ ಸಾಮಾನುಗಳಿಗೆ ಬಳಸುವ ಬಣ್ಣಗಳು ನೈಸರ್ಗಿಕವಾದವುಗಳಾದ್ದರಿಂದ ಆ ವಸ್ತುಗಳಿಗೆ ಬೇಡಿಕೆ ಇಮ್ಮಡಿಯಾದಾಗ ವ್ಯಾಪಾರ-ವಾಣಿಜ್ಯವೂ ಸುಧಾರಿಸಿತು.[8]

ಮುಖ್ಯವಾಗಿ ಗೊಂಬೆಗಳನ್ನು ಹೊರದೇಶಗಳಿಗೆ ಮುಂಬೈ ಖಾಸಗಿ ಮಧ್ಯವರ್ತಿಗಳಾದಂಥ ಎಕ್ಸ್‌ಪೋರ್ಟ್ ಕ್ರಿಯೇಶನ್, ಸಾಂಗ್ಲಿ ಎಕ್ಸ್‌ಪೋರ್ಟ್, ಮಂಗಲ್ ಎಕ್ಸ್‌ಪೋರ್ಟ್‌ಗಳ ಮೂಲಕ ರಫ್ತು ಮಾಡಲಾಗುತ್ತದೆ. ಸ್ಥಳೀಯವಾಗಿ ಮಾರಾಟ ಮಳಿಗೆಗಳ ಮುಖಾಂತರ ಮತ್ತು ಹೊರ ರಾಜ್ಯಗಳಿಗೆ ಆರ್ಡರ್‌ಗಳನ್ನು ಪಡೆದು ಅವರ ಅವಶ್ಯಕತೆಗೆ ತಕ್ಕಂತೆ ಗೊಂಬೆಗಳು ಮತ್ತು ಆಟಿಕೆಗಳನ್ನು

ಪೂರೈಸಲಾಗುತ್ತದೆ. ಈ ಕೈಗಾರಿಕೆಯು ವರ್ಷಕ್ಕೆ ಸುಮಾರು 3 ರಿಂದ 5 ಕೋಟಿಗಳು ವಿದೇಶಿ ವಿನಿಮಯವನ್ನು ಮತ್ತು ಸ್ಥಳೀಯವಾಗಿ ಸುಮಾರು 1½ ಕೋಟಿಯಿಂದ 2 ಕೋಟಿ ರೂ.ಗಳಷ್ಟು ಆದಾಯವನ್ನು ನೀಡುತ್ತದೆ. ಈ ಕೈಗಾರಿಕೆಯು ಸಾಮಾನ್ಯ ಕಾರ್ಮಿಕ ವರ್ಗಕ್ಕೆ ಸುಮಾರು ಶೇ.50ರಷ್ಟು ಉದ್ಯೋಗ ಅವಕಾಶಗಳನ್ನು ನೀಡುತ್ತಿದ್ದು ಪ್ರತಿ ಕಾರ್ಮಿಕನು ಸುಮಾರು 250 ರೂ.ಗಳಿಂದ 450 ರೂ.ಗಳಷ್ಟು ಪ್ರತಿದಿನ ಪಡೆದು ಜೀವನ ನಿರ್ವಹಿಸುತ್ತಿದ್ದಾನೆ. ಈ ಕೈಗಾರಿಕೆಯಲ್ಲಿ ಮಹಿಳೆಯರು, ಪುರುಷರು ಮತ್ತು ಎಲ್ಲಾ ಸಮುದಾಯದ ಜನರು ದುಡಿಯುತ್ತಿದ್ದಾರೆ.[9]

ಪ್ರಾರಂಭದಲ್ಲಿ ಈ ಕರಕುಶಲ ವಸ್ತುಗಳ ತಯಾರಿಕೆಗೆ ಹಾಲೆ ಮರಗಳನ್ನು ಮಾತ್ರವೇ ಬಳಸುತ್ತಿದ್ದು ಇಂದು ಕೊರತೆ ಉಂಟಾದಂತೆ ರಬ್ಬರ್, ತೇಗ, ಹರ್ಕ್ಯುಲಸ್, ರೋಸ್ ವುಡ್ ಮರಗಳನ್ನು ಸಹ ಕರಕುಶಲಕ್ಕೆ ಬಳಸಲಾಗುತ್ತಿದ್ದು ವಸ್ತುಗಳ ತಯಾರಿಕೆಗೆ ಬಳಸಲಾದ ಮರಗಳ ಮೇಲೆ ಅವುಗಳ ಬೆಲೆಗಳು ನಿಗಧಿಯಾಗಿರುತ್ತದೆ. ಉದಾ: ಒಂದು ಮಧ್ಯಮ ಗಾತ್ರದ ಹಾಲೆಮರದ ವಿಗ್ರಹದ ಬೆಲೆ 500 ರೂ.ಗಳೆಂದರೆ ಅದೇ ವಿಗ್ರಹವನ್ನು ತೇಗ ಅಥವಾ ರೋಸ್‌ವುಡ್‌ನಲ್ಲಿ ಮಾಡಿದ್ದೆ ಆದರೆ ಅದರ ಬೆಲೆ ಮೂರು ಪಟ್ಟು ಜಾಸ್ತಿಯಾಗುತ್ತದೆ. ಮರಗಳ ದೊರೆಯುವಿಕೆ ಮತ್ತು ಆ ಮರಗಳಿಗಿರುವ ಮೌಲ್ಯವು ವ್ಯಾಪಾರ-ವಾಣಿಜ್ಯದ ಮೇಲೆ ಪರಿಣಾಮ ಬೀರಿದೆ. ಇಂದಿನ ದಿನಗಳಲ್ಲಿ ಉಡುಗೊರೆಗೆ ಬಳಸುವ ಶ್ರೀಗಂಧದ ಹಾರಗಳು, ಶ್ರೀಗಂಧದ ದೇವರ ವಿಗ್ರಹಗಳು ಇವುಗಳ ತಯಾರಿಕೆಯು ಸರ್ಕಾರದ ಮುಖಾಂತರವೇ ನಡೆಯುತ್ತಿದೆ. ಸರ್ಕಾರವು ತನಗೆ ಬೇಕಾದ ವಸ್ತುಗಳ ಆರ್ಡರ್‌ನ್ನು ಉದ್ದಿಮೆದಾರರಿಗೆ ನೀಡಿ ಅದಕ್ಕೆ ಬೇಕಾದ ಮರವನ್ನು ಒದಗಿಸಿ ತಮಗೆ ಬೇಕಾದ ವಸ್ತುಗಳನ್ನು ಪಡೆದುಕೊಳ್ಳುತ್ತಿದೆ. ಒಂದು ವೇಳೆ ಉದ್ದಿಮೆದಾರರೇ ಇಂತಹ ಬೆಲೆ ಬಾಳುವ ಮರಗಳ ಉತ್ಪನ್ನವನ್ನು ಮಾಡಬೇಕಾದರೆ ಅವರಿಗೆ ಸರ್ಕಾರದಿಂದ ಪರವಾನಗಿಯ ಅಗತ್ಯವಿದ್ದು ಅದಕ್ಕೆ ತಕ್ಕಂತೆ ಸರ್ಕಾರಕ್ಕೆ ತೆರಿಗೆಯನ್ನು ಪಾವತಿಸಬೇಕಾಗುತ್ತದೆ. ಹಾಗಾಗಿ ಇಂದು ಕರಕುಶಲ ವಸ್ತುಗಳ ಬೆಲೆಗಳು ಹಿಂದಿಗಿಂತ ಇಂದು ಜಾಸ್ತಿಯಾಗಿವೆ.[10]

ಈ ಮರದ ಆಟಿಕೆಗಳ / ಬೊಂಬೆಗಳ ತಯಾರಿಕೆಯಲ್ಲಿ ಬಳಸುತ್ತಿದ್ದ ಬಣ್ಣವು ಅರಗು ಮಿಶ್ರಿತವಾಗಿತ್ತು. ಈ ಅರಗಿನ ಬೆಲೆ ಆರಂಭದಲ್ಲಿ 1 ಕೆಜಿ.ಗೆ 20 ರಿಂದ 30 ರೂ.ಗಳಾಗಿತ್ತು. ಈ ಅರಗಿನಲ್ಲಿಯೂ ಶ್ರೇಷ್ಟತೆಯ ಆಧಾರದ ಮೇಲೆ ವಿವಿಧ ರೀತಿಯ ಅರಗುಗಳು ದೊರಕುತ್ತವೆ. ಈ ಅರಗು ಮಧ್ಯಪ್ರದೇಶದ ಗೋಂಡ್ಯಾದಿಂದ ಬರುತ್ತಿತ್ತು. ಅಂದಿನ ದಿನಗಳಲ್ಲಿ ಹೆಚ್ಚಾಗಿ ಸರಬರಾಜಾಗುತ್ತಿದ್ದ ಈ ಅರಗಿಗೆ ಕಡಿಮೆ ಬೆಲೆ ಇದ್ದುದರಿಂದ ಈ ಕರಕುಶಲ ವಸ್ತುಗಳ ಬೆಲೆಗಳು ಸಾಧಾರಣವಾಗಿದ್ದವು. ಆದರೆ ಇಂದು ಬೆಲೆ ಹೆಚ್ಚಾಗಲು ಇದರ ಕಚ್ಚಾ ವಸ್ತುಗಳಾದ ಮರ ಹಾಗು ಅರಗಿನ ಬೆಲೆಯೂ ಹೆಚ್ಚಿರುವುದೇ ಕಾರಣವಾಗಿದೆ. ಇಂದಿನ ದಿನಗಳಲ್ಲಿ 1 ಕಿಲೋ ಅರಗಿಗೆ 800 ರೂ.ಗಳವರೆಗೂ ಬೆಲೆ ಇದೆ.[11] ಹಾಗೆಯೇ ಈ ಮರಗಳನ್ನು ಲೇತ್‌ಗಳಲ್ಲಿ

ಬೇಕಾದ ಆಕಾರಕ್ಕೆ ಕತ್ತರಿಸಿದರೂ ಅದನ್ನು ನುಣುಪುಗೊಳಿಸಲು ತಾಳೆಗರಿಗಳನ್ನು ಬಳಸಲಾಗುತ್ತದೆ. ಈ ತಾಳೆ ಗರಿಗಳ ಬೆಲೆ 1 ಕಟ್ಟಿಗೆ 20 ರೂ.ಗಳಷ್ಟಿದೆ. ಹೀಗೆ ಮರದ ವಸ್ತುಗಳ ತಯಾರಿಕೆಗೆ ಬಳಸುವ ವಸ್ತುಗಳ ಬೆಲೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವಂತೆ ಈ ವಸ್ತುಗಳ ಬೆಲೆಯೂ ದ್ವಿಗುಣಗೊಳ್ಳುತ್ತಿದೆ. ಈ ಉದ್ದಿಮೆಯಲ್ಲಿ ತಯಾರಾಗುವ ವಸ್ತುಗಳನ್ನು ಮಾರಾಟ ಮಾಡುವ ವ್ಯಾಪಾರಸ್ಥರಿಗಿಂತ ವಿದೇಶಗಳಿಗೆ ರಫ್ತು ಮಾಡುವ ಮಧ್ಯವರ್ತಿಗಳು ಅಧಿಕ ಲಾಭ ಪಡೆಯುತ್ತಿದ್ದಾರೆ. ವ್ಯಾಪಾರಗಳ ಲಾಭ ಸಾಧಾರಣವಾಗಿದ್ದರೆ ಅವುಗಳನ್ನು ತಯಾರಿಸುವ ಕುಶಲಕರ್ಮಿಗಳು ಅತೀ ಕಡಿಮೆಯ ಸಂಪಾದನೆಯಲ್ಲಿದ್ದಾರೆ. ಮಧ್ಯವರ್ತಿಗಳ ಸಂಪರ್ಕವಿಲ್ಲದೆ ಉದ್ದಿಮೆದಾರರು ನೇರವಾಗಿ ವ್ಯಾಪಾರದಲ್ಲಿ ಪಾಲ್ಗೊಳ್ಳಲು ಕೆಲವು ತೊಂದರೆಗಳನ್ನು ಎದುರಿಸ ಬೇಕಾಗುತ್ತದೆ. ಉದಾ: ವಸ್ತುಗಳ ಸಾಗಾಣೆಯಲ್ಲಿ ವ್ಯತ್ಯಾಸವಾದಾಗ ಅವುಗಳ ನಷ್ಟವನ್ನು ಉದ್ದಿಮೆದಾರರು ಎದುರಿಸಬೇಕಾಗುವುದರಿಂದ ಉದ್ದಿಮೆದಾರರು ಮಧ್ಯವರ್ತಿಗಳ ಮುಖಾಂತರವೇ ರಫ್ತು ವ್ಯಾಪಾರ ಕೈಗೊಳ್ಳುತ್ತಾರೆ. ಹೀಗಾಗಿ ಇಲ್ಲಿ ಮಧ್ಯವರ್ತಿಗಳ ಪಾತ್ರ ಮುಖ್ಯವಾಗಿದೆ.

ಚನ್ನಪಟ್ಟಣದ ವ್ಯಾಪಾರಸ್ಥರಾದ ಶ್ರೀ ಅಬ್ದುಲ್ ರೆಹಮಾನ್‌ರವರು ಹೇಳುವಂತೆ ಕರ್ನಾಟಕದ ರಾಜ್ಯದೊಳಗಡೆ ಸರಬರಾಜಾಗುವ ಉತ್ಪಾದಕ ವಸ್ತುಗಳಿಗೆ ಶೇ.5 ರಂತೆ ಮೌಲ್ಯಾಧರಿತ ತೆರಿಗೆ ನೀಡಬೇಕಾಗುತ್ತದೆ. ವ್ಯಾಪಾರವು ವರ್ಷ ಪೂರ್ತಿ ಒಂದೇ ರೀತಿಯಾಗಿರದೆ ಆರ್ಡರ್‌ಗಳಿಗೆ ತಕ್ಕಂತೆ ಏರು–ಪೇರಾಗುವ ಸಾಧ್ಯತೆ ಇದೆ ಎಂದು ಹೇಳುತ್ತಾರೆ. ಇಂದು ಹೆಚ್ಚಾಗಿ ಉತ್ಪನ್ನಗಳನ್ನು ಶೇ.60ರಷ್ಟು ಸಾಲಗಳನ್ನು ನೀಡುವುದರ ಜೊತೆಗೆ ಕೊಡಲಾಗುತ್ತದೆ. ಒಂದು ವೇಳೆ ಸಂಪೂರ್ಣ ಹಣ ಪಾವತಿಸಿ ಉತ್ಪನ್ನಗಳನ್ನು ಕೊಂಡೊಯ್ಯಬೇಕೆಂಬ ನಿರ್ಬಂಧ ಹಾಕಿದರೆ ಅದು ವ್ಯಾಪಾರದ ಮೇಲೆ ಪರಿಣಾಮ ಬೀರುವುದರಿಂದ ಇಂದು ಸಾಲ ಕೊಡುವುದು, ತೆಗೆದುಕೊಳ್ಳುವುದು ಸಾಮಾನ್ಯವಾಗಿದೆ. ಇವರ ಅಂಗಡಿಯಲ್ಲಿ ಕನಿಷ್ಟ ತಿಂಗಳಿಗೆ 2 ಲಕ್ಷ ರೂ.ಗಳಿಂದ 3ಲಕ್ಷ ರೂ.ಗಳವರೆಗೂ ವ್ಯಾಪಾರ ನಡೆಯುತ್ತದೆ.[12]

ಕರಕುಶಲ ಕೈಗಾರಿಕೆಗಳಲ್ಲಿ ಕೆಲಸ ನಿರ್ವಹಿಸುವ ಕುಶಲಕರ್ಮಿಗಳು ಇಂದು ಬೇರೆ ಉದ್ಯೋಗವನ್ನರಿಸಿ ಹೋಗುತ್ತಿರುವುದರಿಂದಲೂ ಈ ಕರಕುಶಲ ಉದ್ದಿಮೆಯ ವ್ಯಾಪಾರ ಕುಸಿಯುತ್ತಿದೆ. ಕಾರಣ ಇಂದು ವಿವಿಧ ಪ್ಲಾಸ್ಟಿಕ್, ರಬ್ಬರ್‌ನಿಂದಾದ ಆಟದ ಸಾಮಾನುಗಳ ಭರಾಟೆ ಮಾರುಕಟ್ಟೆಯಲ್ಲಿ ಯಥೇಚ್ಛವಾಗಿದ್ದು, ಇಂದು ಹಾಲೆಮರಗಳನ್ನು ತಂದು ಅವುಗಳನ್ನು ಹದಗೊಳಿಸಿ ಬೊಂಬೆಗಳನ್ನು ತಯಾರಿಸುವ ಕುಶಲಕರ್ಮಿಗಳಿಗೆ ಬರುವ ಲಾಭ ಅತ್ಯಲ್ಪವಾಗಿದ್ದು ಇಂದು ಕಲೆಗೆ ಬೆಲೆಯಿಲ್ಲದಂತಾಗಿದೆ. ಹಾಗಾಗಿ ಇಂದು ಈ ಕುಶಲಕರ್ಮಿಗಳು ಗರಿಷ್ಟ ಸಂಪಾದನೆಯತ್ತ ಒಲವು ತೋರುತ್ತಿರುವುದು ಈ ಕರಕುಶಲ ವಸ್ತುಗಳ ವ್ಯಾಪಾರಕ್ಕೆ ಭಾರಿ ಪೆಟ್ಟು ನೀಡುತ್ತಿದೆ. ಸರ್ಕಾರದ ನಿರ್ಬಂಧಗಳ ನಡುವೆಯೂ ಈ

ಕುಶಲಕರ್ಮಿಗಳು ಬಹು ಪ್ರಾಯಾಸದಿಂದ ತಾವು ಕೈ ಹಿಡಿದಿರುವ ಕುಲಕಸುಬನ್ನು ಬಿಡಲಾಗದೆ ಈ ಕಾಯಕವನ್ನು ಮುಂದುವರೆಸಿದ್ದರೂ ಇವರಿಂದ ಸಾಮಾನುಗಳನ್ನು ಕೊಂಡು ಹೊರಗಡೆಗೆ ರಫ್ತು ಮಾಡುವ ಮಧ್ಯವರ್ತಿಗಳು ಅಧಿಕ ಲಾಭಗಳಿಸಿ ಐಷಾರಾಮಿ ಜೀವನ ನಡೆಸುತ್ತಿರುವುದು ಕುಶಲಕರ್ಮಿಗಳು ಈ ಕೆಲಸದ ಬಗ್ಗೆ ನಿರಾಸಕ್ತಿ ತಾಳಲು ಕಾರಣವಾಗಿದ್ದು ಇದೂ ಸಹ ಉದ್ಯಮ ಕುಸಿತಕ್ಕೆ ಕಾರಣವಾಗುತ್ತಿದೆ.

ಹೀಗೆ ಒಂದು ಕಾಲಕ್ಕೆ ಚನ್ನಪಟ್ಟಣದ ಸುತ್ತಮುತ್ತದ ಗ್ರಾಮಗಳಲ್ಲಿ ಸಮೃದ್ಧವಾಗಿದ್ದ ಹಾಲೆಮರ, ಸರಾಗವಾಗಿ ದೊರಕುತ್ತಿದ್ದ ಅರಗು, ಆಸಕ್ತಿ ವಹಿಸಿ ದುಡಿಮೆ ಮಾಡುತ್ತಿದ್ದ ಕೆಲಸಗಾರರು ಬಂದ ಹಣದಲ್ಲಿ ಜೀವನ ನಡೆಸಿಕೊಂಡು ಹೋಗುತ್ತಿದ್ದರು. ಆದರೆ ಇಂದು ಈ ಕರಕುಶಲ ಉದ್ದಿಮೆಗೆ ಬೇಕಾದ ಕಚ್ಚಾವಸ್ತುಗಳು ಸುಲಭವಾಗಿ ದೊರಕುತ್ತಿಲ್ಲ ಹಾಗೂ ಇಂದಿನ ಬೆಲೆ ಏರಿಕೆಯ ದಿನಗಳಲ್ಲಿ ಅಲ್ಪ ಸಂಪಾದನೆಯನ್ನು ಆಧಾರವಾಗಿಟ್ಟು ಜೀವನ ನಡೆಸುವುದೂ ದುಸಾಧ್ಯವಾಗ ತೊಡಗಿದಾಗ ಈ ಕುಶಲಕರ್ಮಿಗಳು ತಮ್ಮ ಕಾಯಕ ಬಿಟ್ಟು ಇತರೆ ಕೆಲಸಗಳಲ್ಲಿ ನಿರತರಾಗುತ್ತಿದ್ದಾರೆ. ತಲೆ ತಲೆಮಾರುಗಳಿಂದ ಈ ವ್ಯಾಪಾರವನ್ನು ನೆಚ್ಚಿ ಬಂದ ವ್ಯಾಪಾರಸ್ಥರು ಲಾಭಾಂಶ ಕಡಿಮೆಯಾದರೂ ತಮ್ಮ ಜೀವನ ನಿರ್ವಹಣೆಗೆ ಸರಿಹೊಂದುವಂತೆ ನಿರ್ವಹಿಸಿಕೊಂಡು ಹೋಗುತ್ತಿದ್ದಾರೆ. ಇನ್ನು ಈ ಕರಕುಶಲತೆಯ ಕೈಗಾರಿಕೆಗಳ ಮಾಲೀಕರು ಹೊಸ ಹೊಸ ರೀತಿಯ ವಸ್ತುಗಳ ಅನ್ವೇಷಣೆ ಮತ್ತು ಉತ್ಪಾದನೆಯಲ್ಲಿ ತೊಡಗಿ ಇಂದಿಗೂ ಅದು ಉಳಿಯುವಂತೆ ಮಾಡಿದ್ದಾರೆ. ಹೀಗಾಗಿ ವ್ಯಾಪಾರ ವಾಣಿಜ್ಯವು ಅಂದಿಗೂ ಇಂದಿಗೂ ಅಜ ಗಜಾಂತರ ವ್ಯತ್ಯಾಸದಿಂದ ಕೂಡಿದೆ (ಚಿತ್ರ–21).

ವಿವಿಧ ಕಾಲಾವಧಿಯಲ್ಲಿನ ಕರಕುಶಲವಸ್ತುಗಳ ಮೌಲ್ಯ

ಕ್ರ ಸಂ.	ವಸ್ತುಗಳ ವಿಧಗಳು	ವರ್ಷ	ಮೌಲ್ಯ	ವರ್ಷ	ಮೌಲ್ಯ
1	ಲಟ್ಟಣಿಗೆ	1960	25 ಪೈಸೆ	2011	20 ರೂ.
2	ರೈಲ್ವೆ ಇಂಜಿನ್	1960	25 ಪೈಸೆ	2011	25 ರೂ.
3	ಮೂರು ಚಕ್ರದ ಗಾಡಿ	1960	25 ರೂ.	2011	250 ರೂ.
4	ಮಕ್ಕಳ ಅಡಿಗೆ ಸಾಮಗ್ರಿಗಳ ಆಟಿಕೆಗಳು	1960	8 ರೂ.	2011	60 ರೂ.
5	ಪೆನ್ ಸ್ಟ್ಯಾಂಡ್	1960	3 ರೂ.	2011	30 ರೂ.
6	ಮಕ್ಕಳ ಆಟಿಕೆ ಗಿಲಕಿಗಳು	1960	1 ರೂ.	2011	10 ರೂ.[13]

5.2 ಕುಂಬಾರಿಕೆ ಉದ್ಯಮ :

ಚನ್ನಪಟ್ಟಣದ ಕುಂಬಾರಿಕೆಯ ವ್ಯಾಪಾರ-ವಾಣಿಜ್ಯವನ್ನು ಚರ್ಚಿಸುವುದಾದರೆ ಇಂದು ಈ ಉದ್ಯಮವು ನೆಲಕಚ್ಚುತ್ತಿದ್ದು ಅದರ ವ್ಯಾಪಾರ 80% ರಷ್ಟು ಇಲ್ಲವಾಗಿದೆ. ಒಂದು ಕಾಲಕ್ಕೆ ಅಡುಗೆ ಮಾಡುವ ಪಾತ್ರೆಗಳಾದಿಯಾಗಿ, ನೀರು ಸಂಗ್ರಹಿಸುವ ಮಡಕೆಗಳು, ನೀರು ಕುಡಿಯುವ ಲೋಟಗಳು, ಧಾನ್ಯ ಸಂಗ್ರಹಿಸುವ ಗುಡಾಣಗಳು, ದೇವರಿಗೆ ಹಚ್ಚುವ ದೀಪಗಳು, ದೇವತಾ ಕಾರ್ಯಕ್ಕೆ ಬಳಸುವ ಗಡಿಗೆಗಳು ಹೀಗೆ ಹಲವಾರು ಬಗೆಗಳಲ್ಲಿ ಉತ್ಪಾದನೆಯಾಗುತ್ತಿದ್ದ ಈ ವಸ್ತುಗಳು ಸ್ಥಳೀಯ ಮಾರುಕಟ್ಟೆಗಳಲ್ಲಿ ಲಭ್ಯವಾಗುತ್ತಿದ್ದುದು ಸಾಮಾನ್ಯವಾಗಿತ್ತು. ಈ ಉತ್ಪಾದಕರು ದೊಡ್ಡ ದೊಡ್ಡ ಮಂಕರಿಗಳಲ್ಲಿ ಈ ಸಾಮಾನುಗಳನ್ನು ತುಂಬಿಸಿ ಊರು ಊರುಗಳಲ್ಲಿ ತಿರುಗಿ ಮಾರಾಟ ಮಾಡುತ್ತಿದ್ದರು. ಅಂದಿನ ಕಾಲಕ್ಕೆ ಇವುಗಳಿಗೆ ಒಳ್ಳೆಯ ಬೆಲೆ ಇದ್ದಂತೆ ತೋರುತ್ತದೆ. ಏಕೆಂದರೆ ಪ್ರತಿಯೊಬ್ಬರ ಮನೆಯಲ್ಲಿಯೂ ಈ ಮಡಿಕೆಗಳ ಬಳಕೆ ಸರ್ವೇ ಸಾಮಾನ್ಯವಾಗಿತ್ತು. ಮಡಿಕೆ ಮಾಡುವ ಕಲೆಯನ್ನು ಮೈಗೂಡಿಸಿಕೊಂಡಿದ್ದ ಈ ಕೆಲಸಗಾರರು ಕೆರೆಗಳಲ್ಲಿ ದೊರೆಯುವ ಜೇಡಿಮಣ್ಣನ್ನು ಸಂಗ್ರಹಿಸಿ ಹದಗೊಳಿಸಿ ಮಡಿಕೆಗಳನ್ನು ತಯಾರಿಸಿ ಮಾರಾಟ ಮಾಡಿ ಬಂದ ಹಣದಲ್ಲಿ ಸಾಧಾರಣ ಜೀವನ ನಿರ್ವಹಣೆ ಮಾಡುತ್ತಿದ್ದರು. ಆದರೆ ಇಂದಿನ ಆಧುನಿಕ ಯುಗದಲ್ಲಿ ವಿವಿಧ ಸ್ಟೀಲ್, ಅಲ್ಯುಮಿನಿಯಂ, ಪ್ಲಾಸ್ಟಿಕ್ ವಸ್ತುಗಳು ಮಾರುಕಟ್ಟೆಗೆ ಬರುತ್ತಿದ್ದಂತೆ ಈ ಮಡಿಕೆಗಳು ಮೂಲೆ ಗುಂಪಾದವು. ಈ ಕಸುಬನ್ನು ನೆಚ್ಚಿಕೊಂಡ ಕೆಲಸಗಾರರ ಬದುಕೂ ಸಹ ಕಠಿಣವಾಯಿತು. ಮಕ್ಕಳು, ಮಹಿಳೆಯರಾದಿಯಾಗಿ ಕುಟುಂಬದ ಎಲ್ಲಾ ಸದಸ್ಯರು ಈ ಕೆಲಸದಲ್ಲಿ ತೊಡಗಿಸಿಕೊಂಡರು ಅವರಿಗೆ ದೊರೆಯುವ ಲಾಭ ಅತ್ಯಲ್ಪ. ಇಂದಿನ ದಿನಗಳಲ್ಲಿ ತಾಲ್ಲೂಕಿನ ಕುಡಿಕೆ ಬೇವೂರಿನಲ್ಲಿ ಇಂದು ಕೇವಲ ಸಣ್ಣ ಸಣ್ಣ ದೇವರ ಕುಡಿಕೆಗಳು, ದೀಪಗಳು ಹಾಗೂ ಗಡಿಗೆಗಳನ್ನು ಮಾತ್ರವೇ ತಯಾರು ಮಾಡಲಾಗುತ್ತಿದೆ.[14]

ಇಲ್ಲಿನ ಹಿರಿಯವರಾದ ಏಲಕ್ಕಿ ತಿಮ್ಮಶೆಟ್ಟಿಯವರು ಹೇಳುವ ಪ್ರಕಾರ ಇಂದು ದೇವರ ಸಣ್ಣ ಕುಡಿಕೆಗಳಿಗೆ ಮಾತ್ರ ಬೇಡಿಕೆಯಿದ್ದು ಇವರು ಒಂದು ದಿನಕ್ಕೆ ಕನಿಷ್ಟ 450 ಕುಡಿಕೆಗಳಷ್ಟು ತಯಾರಿಸುತ್ತಾರೆ. ಈ ಕುಡಿಕೆಗಳಿಗಿರುವ ಬೆಲೆ ಕೇವಲ 50 ಪೈಸೆಯಿಂದ 1ರೂ. ಮಾತ್ರ. ಈ ಕುಡಿಕೆಗಳನ್ನು ಸಿದ್ದಗೊಳಿಸಿ ಮಾರುಕಟ್ಟೆಯಲ್ಲಿರುವ ಕುಂಕುಮದ ಅಂಗಡಿಗಳಿಗೆ ಸರಬರಾಜು ಮಾಡಬೇಕಾಗುತ್ತದೆ. ಬರುವ ಸಂಪಾದನೆ ಅಲ್ಪವಾದರೂ ಕೈಹಿಡಿದ ಕಸುಬನ್ನು ಬಿಡಲಾಗದೆ ಈ ವೃತ್ತಿಯನ್ನು ಮುಂದುವರೆಸುತ್ತಿದ್ದಾರೆ.[15] ಇವೆಲ್ಲವನ್ನು ನೋಡಿ ಬೇಸತ್ತ ಈ ಕುಂಬಾರರು ಇಂದು ಬೇರೆ ಉದ್ಯೋಗಗಳನ್ನು ಅರಸಿ ಪಟ್ಟಣ ಸೇರಿರುವುದೂ ಉಂಟು. ಇದರಿಂದ ಒಟ್ಟಾರೆ ಇಂದು ಕುಂಬಾರಿಕೆಯ ವ್ಯಾಪಾರ-ವಾಣಿಜ್ಯ ಅಧೋಗತಿಗಿಳಿದಿರುವುದು ಸ್ಪಷ್ಟವಾಗುತ್ತದೆ.

ಆರಂಭದಲ್ಲಿ ಈ ಮಡಿಕೆ ಕುಡಿಕೆಗಳು, ವಸ್ತು ವಿನಿಮಯ ಪದ್ಧತಿಯ ಮೂಲಕ ಮಾರಾಟವಾಗುತ್ತಿದ್ದವು. ಕಾಲಾನಂತರದಲ್ಲಿ ಹಣದ ಚಲಾವಣೆಯಾದಾಗ ಇವುಗಳ ಮಾರಾಟ ಪೈಸೆಗಳಲ್ಲಿ ನಂತರದಲ್ಲಿ ರೂಪಾಯಿಗಳಲ್ಲಿ ಆಗಿರುವುದು ಕಂಡುಬರುತ್ತದೆ. ಬೇವೂರಿನ ಏಲಕ್ಕಿ ತಿಮ್ಮಶೆಟ್ಟಿರವರು ಹೇಳುವ ಪ್ರಕಾರ, ಅಂದಿಗೂ-ಇಂದಿಗೂ ಈ ಮಣ್ಣಿನ ವಸ್ತುಗಳ ಮೌಲ್ಯವನ್ನು ಈ ಕೆಳಗಿನಂತೆ ನೋಡಬಹುದು.

ಕ್ರ ಸಂ.	ವಸ್ತುಗಳ ವಿಧಗಳು	ವರ್ಷ	ಮೌಲ್ಯ	ವರ್ಷ	ಮೌಲ್ಯ
1	ದೀಪ	1950	ಒಂದಾಣೆ	2010	1 ರೂ.
2	ಕುಡಿಕೆ	1950	ಎರಡಾಣೆ	2010	2 ರೂ.
3	ಮಧ್ಯಮ ಗ್ರಾತದ ನೀರಿನ ಮಡಿಕೆಗಳು	1950	ಐದಾಣೆ	2010	40-60 ರೂ.[16]

5.3 ಹರಳು ಉದ್ಯಮ :

ಚನ್ನಪಟ್ಟಣ ಹರಳು ಉದ್ದಿಮೆಯ ವ್ಯಾಪಾರವು ಆರಂಭದಲ್ಲಿ ಸ್ಥಳೀಯವಾಗಿದ್ದು ಅದಕ್ಕೆ ವಿದೇಶಿ ವ್ಯಾಪಾರ ಲಭ್ಯವಾಗುವವರೆಗೂ ಅಧಿಕ ಲಾಭಾಂಶವನ್ನೇನು ಕಂಡಿರಲಿಲ್ಲವೆನಿಸುತ್ತದೆ. ಜಮೀನುಗಳಲ್ಲಿ ಕಂಡು ಬಂದ ಈ ಹರಳು ಕಲ್ಲನ್ನು ಅಗೆದು ತೆಗೆಯಲು ಅಂದು ಕೂಲಿ ಕಾರ್ಮಿಕರಿಗೂ ಕೊರತೆ ಇದ್ದಂತೆ ಇಲ್ಲ. ಗ್ರಾಮದ ಸಾಕಷ್ಟು ಕೂಲಿ ಕಾರ್ಮಿಕರು ಈ ಗಣಿಯನ್ನು ಅಗೆದು ತೆಗೆಯಲು ಸಹಕರಿಸುತ್ತಿದ್ದುದರಿಂದ ವ್ಯಾಪಾರ ವಾಣಿಜ್ಯಕ್ಕೆ ಅಂತಹ ತೊಂದರೆಗಳೇನು ಇಲ್ಲದೆ ಸ್ಥಳಿಯವಾಗಿದ್ದ ಕಲ್ಲನ್ನು ಕತ್ತರಿಸಿ ನುಣುಪುಗೊಳಿಸುವ ಕಾರ್ಮಿಕರಿಗೆ ಕೊಟ್ಟು ಅವರಿಂದ ಹರಳುಗಳನ್ನು ಪಡೆದು ಮಧ್ಯವರ್ತಿಗಳಿಗೆ ಇವುಗಳನ್ನು ತಲುಪಿಸುತ್ತಿದ್ದ ಈ ಗಣಿ ಮಾಲೀಕರಿಗೆ ವಿದೇಶಿ ಮೌಲ್ಯ ತಿಳಿದಾಗಲೇ ಈ ಉದ್ಯಮಕ್ಕೊಂದು ಬೆಲೆ ಬಂದಂತೆ ತೋರುತ್ತದೆ.

ಪ್ರಾರಂಭದಲ್ಲಿ ಗಣಿ ಕೆಲಸಕ್ಕೆ ಸರ್ಕಾರದ ಅತಿಯಾದ ನಿರ್ಬಂಧವೇನೂ ಇರದಿದ್ದರು, ಬೇರೆಡೆಗೆ ಉದ್ಯೋಗವರೆಸಿ ಹೋಗುವ ಬದಲು ಸ್ವಗ್ರಾಮದಲ್ಲಿಯೇ ದೊರೆಯುವ ಈ ಗಣಿಕೆಲಸ ಮಾಡುವ ಕೆಲಸಗಾರರಿದ್ದಾಗ ಈ ಹರಳು ಕಲ್ಲುಗಳ ವ್ಯಾಪಾರ ನಿರಾತಂಕವಾಗಿತ್ತು. ಅಂದಿನ ದಿನಗಳಲ್ಲಿ 1 ಕೆ.ಜಿ. ಕಚ್ಚಾ ಹರಳು ಕಲ್ಲುಗಳಿಗೆ ಬೆಲೆ 400ರೂ. ಯಿಂದ 800ರೂ.ವರೆಗೂ ಇತ್ತು. ಕೆಲವೊಮ್ಮೆ ಜಮೀನಿನ ಮೇಲ್ಭಾಗದಲ್ಲಿಯೇ ಸಿಗುವ ಈ ಹರಳು ಕಲ್ಲುಗಳು ಒಮ್ಮೊಮ್ಮೆ 3-4 ಅಡಿಗಳಷ್ಟು ಭೂಮಿಯನ್ನು ಅಗೆದು ಹೊರತೆಗೆಯಬೇಕಾಗುತ್ತಿದ್ದುದರಿಂದ ಈ ಗಣಿ ಕೆಲಸ ಮಾಡುವ ಕೆಲಸಗಾರರ ಬೇಡಿಕೆಯೂ ಹೆಚ್ಚಿತು.

ಕಾಲಾನಂತರದಲ್ಲಿ ಗಲ್ಫ್ ರಾಷ್ಟ್ರಗಳಲ್ಲಿ ಈ ಹರಳುಗಳಿಗೆ ಮೌಲ್ಯ ಹೆಚ್ಚಿದಂತೆ ಅದು ಚನ್ನಪಟ್ಟಣದ ಹರಳು ಉದ್ದಿಮೆಯ ವ್ಯಾಪಾರದ ಮೇಲೂ ಪರಿಣಾಮ ಬೀರಿತು. ಈ ರಾಷ್ಟ್ರಗಳಲ್ಲಿ ಈ ರೂಬಿ ಹರಳುಗಳನ್ನು ಶವ ಸಂಸ್ಕಾರಕ್ಕೆ ಬಳಸುವುದು ಹಾಗೂ ಅವುಗಳನ್ನು ಕರೆನ್ಸಿಯಾಗಿ ಸಂಗ್ರಹಿಸಿಟ್ಟುಕೊಳ್ಳಲು ಪ್ರಾರಂಭಿಸಿದಂತೆ ಈ ಹರಳು ಉದ್ದಿಮೆಯ ವ್ಯಾಪಾರ ಶ್ರೀಮಂತಗೊಂಡಿತು. ಈ ಉದ್ದಿಮೆಯಲ್ಲಿ ನಿರತರಾದವರು 'Gem Cutters Co-operative Soceity' ಯನ್ನು ಸ್ಥಾಪಿಸಿಕೊಂಡು ಅದರಲ್ಲಿ ಸದಸ್ಯತ್ವ ಹೊಂದಿದ ನಂತರ ಈ ಸಂಘದಿಂದ ಹರಳು ಕತ್ತರಿಸಲು ಅಗತ್ಯ ಸಲಕರಣೆಗಳನ್ನು ಪಡೆಯುತ್ತಿದ್ದುದಷ್ಟೇಯಲ್ಲದೇ ಅವುಗಳ ಮಾರಾಟಕ್ಕೆ ಅನುಕೂಲ ಮಡಿಕೊಂಡರು.[17] ಈ ವೇಳೆಯಲ್ಲಿ ಕಚ್ಚಾ ಹರಳು ಕಲ್ಲುಗಳ ಬೆಲೆ 1 ಕೆ.ಜಿ. ಗೆ 4000ರೂ. ನಿಂದ 8000 ರೂ.ವರೆಗೂ ಹೆಚ್ಚಾಯಿತು. ಇವುಗಳಲ್ಲಿ ಒಳ್ಳೆಯ ಗುಣಮಟ್ಟದ ಹರಳುಗಳಿಗೆ 1 ಕೆ.ಜಿ. ಗೆ 14 ರಿಂದ 15 ಸಾವಿರ ರೂ. ಗಳ ವರೆಗೂ ಮೌಲ್ಯವಿದೆ. ಆದರೆ ಇಂದು ಗಣಿ ಕೆಲಸಕ್ಕೆ ಸರ್ಕಾರದ ನಿರ್ಬಂಧ, ಪರವಾನಗಿ ಶುಲ್ಕ ಏರಿಕೆ, ಕೆಲಸಗಾರರ ಕೊರತೆಯಿಂದಾಗಿ ಈ ಉದ್ದಿಮೆಯ ವ್ಯಾಪಾರ ವಾಣಿಜ್ಯವು ಮೊದಲಿನಂತಿರದೆ ಕುಸಿಯುತ್ತಿದೆ. ಮೊದಲಿನಷ್ಟು ಹರಳು ಗಣಿಯೂ ಇಲ್ಲಿ ಈಗ ಲಭ್ಯವಾಗದಿರುವುದು, ಪರವಾನಗಿಯ ನವೀಕರಣಕ್ಕೆ ಅರ್ಜಿ ಸಲ್ಲಿಸಿದರೆ ಅದು ಜಾರಿಗೆ ವಿಳಂಬವಾಗುತ್ತಿರುವುದೂ ಸಹ ಈ ವ್ಯಾಪಾರದ ಮೇಲೆ ಪರಿಣಾಮ ಬೀರಿದ್ದು ಇಂದು ಇದು ವ್ಯಾಪಾರದಲ್ಲಿನ ಲಾಭಕ್ಕಿಂತ ನಷ್ಟಕ್ಕೆ ಎಡೆ ಮಾಡಿದೆ.[18]

5.4 ರೇಷ್ಮೆ ಉದ್ಯಮ :

ರೇಷ್ಮೆ ಬೆಳೆಯನ್ನು ಮೈಸೂರು ಸಂಸ್ಥಾನದಲ್ಲಿ ಪ್ರಮುಖ ಬೆಳೆಯನ್ನಾಗಿಸುವ ಟಿಪ್ಪುವಿನ ಬಹುದೊಡ್ಡ ಕನಸಿನಿಂದಾಗಿ ರೇಷ್ಮೆ ವ್ಯಾಪಾರವು ಟಿಪ್ಪುವಿನ ಕಾಲದಿಂದೀಚೆಗೆ ಆರಂಭಗೊಂಡಿತು. ಟಿಪ್ಪು ಕಾಲಕ್ಕೆ ಹಿಂದೆ ರೇಷ್ಮೆ ವ್ಯಾಪಾರವೆಂಬುದಿರಲಿಲ್ಲ. ಏಕೆಂದರೆ ಮೈಸೂರು ಸಂಸ್ಥಾನದಲ್ಲಿ ರೇಷ್ಮೆ ಪರಿಚಿತವಾದುದ್ದೇ ಟಿಪ್ಪುವಿನಿಂದ. ವ್ಯಾಪಾರದ ಅಭಿವೃದ್ಧಿಗಾಗಿ ಟಿಪ್ಪುವಿನ ಸರ್ಕಾರ ಸ್ವತಃ ಒಂದು ವ್ಯಾಪಾರದ ಕಂಪನಿಯನ್ನು (ಇಂಗ್ಲೆಂಡಿನಲ್ಲಿ ಈಸ್ಟ್ ಇಂಡಿಯಾ ಕಂಪನಿಯಿದ್ದಂತೆ) ಸ್ಥಾಪಿಸಿತ್ತು. ಆ ಕಂಪನಿಗೆ ಷೇರುದಾರರಾಗಲು ರೈತರನ್ನು ಹಾಗೂ ಸಾರ್ವಜನಿಕರನ್ನು ಪ್ರೋತ್ಸಾಹಿಸಲಾಗುತ್ತಿತ್ತು. 500 ರೂಪಾಯಿಗಳಿಗಿಂತಲೂ ಹೆಚ್ಚು ಷೇರುಗಳನ್ನು ಪಡೆದಿರುವವರಿಗೆ ಶೇ.50 ರಷ್ಟು ಲಾಭ ಪಡೆಯುವ ಸೌಲಭ್ಯವನ್ನು ಟಿಪ್ಪು ಕಲ್ಪಿಸಿಕೊಟ್ಟಿದ್ದನು.[19] ಟಿಪ್ಪುವಿನ ಪ್ರೋತ್ಸಾಹದಿಂದಾಗಿ ಈ ವೇಳೆಗೆ ಚನ್ನಪಟ್ಟಣ ರೇಷ್ಮೆ ಬೆಳೆಯ ಪ್ರಮುಖ ಕೇಂದ್ರವಾಯಿತಷ್ಟೇ ಅಲ್ಲದೆ ಚನ್ನಪಟ್ಟಣವು ವ್ಯಾಪಾರ ವಾಣಿಜ್ಯದ ದೃಷ್ಟಿಯಿಂದ ಮುಂದುವರೆಯಲು ಸಾಧ್ಯವಾಯಿತು. ರೇಷ್ಮೆ ಬೆಳೆಯನ್ನು ಚನ್ನಪಟ್ಟಣದ ಕೃಷಿಕರು ಅಳವಡಿಸಿಕೊಂಡು ಬೆಳೆಯ ಉತ್ಪನ್ನ ಹೆಚ್ಚಾದಂತೆ ಇಲ್ಲಿ ರೇಷ್ಮೆ ಗೂಡುಗಳಿಂದ ನೂಲು

ತೆಗೆಯುವ ಫಿಲೇಚರ್‌ಗಳ ಸ್ಥಾಪನೆಯಾಗಿ ಆ ಮೂಲಕ ವ್ಯಾಪಾರ ವಾಣಿಜ್ಯಕ್ಕೆ ಉತ್ತೇಜನ ದೊರೆತು ಮುಂದೆ ರೇಷ್ಮೆ ಮಾರುಕಟ್ಟೆ ಸ್ಥಾಪನೆಗೆ ಅವಕಾಶವಾಯಿತು.

ಕೃಷಿಕರು ತಾವು ಬೆಳೆದ ರೇಷ್ಮೆಯನ್ನು ಸ್ಥಳೀಯವಾಗಿದ್ದ ಫಿಲೇಚರ್*ಗಳಿಗೆ ಮಾರಾಟ ಮಡುತ್ತಿದ್ದರು. ನಂತರದಲ್ಲಿ ರೇಷ್ಮೆ ನೂಲನ್ನು ಕೊಂಡು ಅವುಗಳಿಂದ ಬಟ್ಟೆ ತಯಾರಿಸುವ ಕೈಗಾರಿಕೆಗಳು ಸ್ಥಾಪನೆಯಾದಂತೆ ಈ ರೇಷ್ಮೆಗೆ ಒಳ್ಳೆಯ ಬೆಲೆ ದೊರೆತು ಹೆಚ್ಚು ಕೃಷಿಕರು ಈ ಬೆಳೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಮೈಸೂರು ದಿವಾನರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ ಈ ಉದ್ದಿಮೆಗೆ ಹೆಚ್ಚು ಪ್ರೋತ್ಸಾಹ ದೊರೆತು ನಂತರದ ದಿನಗಳಲ್ಲಿ ಸ್ಪನ್ ಸಿಲ್ಕ್‌ಮಿಲ್ ಆರಂಭವಾದಾಗ ಇಲ್ಲಿನ ನೂರಾರು ಜನರಿಗೆ ಉದ್ಯೋಗ ದೊರೆಯಿತಲ್ಲದೆ, ರೇಷ್ಮೆ ಬೆಳೆಗೆ ಉತ್ತಮ ಬೆಲೆ ದೊರಕಿ ವ್ಯಾಪಾರ ವಾಣಿಜ್ಯವು ಪ್ರಗತಿಯಲ್ಲಿತ್ತು.

ಅಂದಿನ ಅಂಕಿ-ಅಂಶವು ಈ ಕೆಳಗಿನಂತಿದೆ

ಘಟಕದ ಹೆಸರು ಮತ್ತು ವಿಳಾಸ	ಸ್ಥಾಪನೆಯಾದ ವರ್ಷ	ಉತ್ಪಾದನೆ ಆಗುತ್ತಿದ್ದ ವಸ್ತುಗಳು	ಒಟ್ಟು ಬಂಡವಾಳ ಹೂಡಿಕೆ ಲಕ್ಷ ರೂ.ಗಳಲ್ಲಿ	ಉದ್ಯೋಗಿಗಳ ಸಂಖ್ಯೆ
ಸರ್ಕಾರಿ ಸ್ಪನ್‌ಸಿಲ್ಕ್ ಮಿಲ್, ಚನ್ನಪಟ್ಟಣ	1936	ರೇಷ್ಮೆ ನೂಲು ಹಾಗೂ ಜಮಖಾನೆಗಳು	1627.05	893[20]

ಮುಂದೆ ಈ ರೇಷ್ಮೆಯು ಹೊರ ರಾಜ್ಯ, ರಾಷ್ಟ್ರಗಳಿಗೆ ರಫ್ತಾದಾಗಲೂ ಇದಕ್ಕೆ ಒಳ್ಳೆಯ ಬೆಂಬಲ ಬೆಲೆ ಲಭ್ಯವಾಯಿತು. ಈ ರೇಷ್ಮೆ ಉದ್ದಿಮೆಯು ಬ್ರಿಟೀಷರ ಆಡಳಿತಾವಧಿಯ ವೇಳೆ ಸ್ವಲ್ಪ ಪ್ರೋತ್ಸಾಹಗೊಂಡು ವ್ಯಾಪಾರ ಚುರುಕಾಗಿರುವುದು ಕಂಡುಬರುತ್ತದೆ.

1956 ರಲ್ಲಿ ಕಾರಣಾಂತರಗಳಿಂದ ಸ್ಪನ್‌ಸಿಲ್ಕ್ ಮಿಲ್ ಮುಚ್ಚಲ್ಪಟ್ಟಿತು. ರಾಜ್ಯದಲ್ಲಿ ಈ ಕಾರ್ಖಾನೆಯನ್ನು ಊರ್ಜಿತಗೊಳಿಸುವ ದೃಷ್ಟಿಯಿಂದ 1960ರ ಏಪ್ರಿಲ್‌ನಲ್ಲಿ ಸರ್ಕಾರದವರು ಅಧಿಕೃತ ಲಿಕ್ವಿಡೇಟರರಿಂದ ಈ ಕಾರ್ಖಾನೆಯನ್ನು ಕೊಂಡುಕೊಂಡರು. ಆಧುನಿಕ ಯಂತ್ರೋಪಕರಣಗಳನ್ನು ಅಭಿವೃದ್ಧಿಪಡಿಸಿ ಇದನ್ನು ಲಾಭದಾಯಕ ರೀತಿಯಲ್ಲಿ ನಡೆಸಿಕೊಂಡು ಹೋಗಲು ಸರ್ಕಾರದವರು ಪ್ರಯತ್ನಿಸಿದರು.[21] ಅದಕ್ಕೆ ಪೂರಕವಾಗಿ ಕೆಲಸಗಾರರಿಗೆ ತರಬೇತಿ ಕೊಡಿಸಿದರೂ ಅದು ಸಫಲವಾಗದಿದ್ದಾಗ ಸ್ಪನ್ ಸಿಲ್ಕ್‌ಮಿಲ್ ಸಂಪೂರ್ಣವಾಗಿ ಮುಚ್ಚಿ ಹೋದಾಗ ಈ ರೇಷ್ಮೆ ವ್ಯಾಪಾರ ಚನ್ನಪಟ್ಟಣದಲ್ಲಿ ಇಳಿಮುಖವಾಯಿತು. ಆದರೆ ಇಂದಿಗೂ ರೇಷ್ಮೆ

---

* ಫಿಲೇಚರ್ : ರೇಷ್ಮೆ ಕೋಶಗಳಿಂದ ರೇಷ್ಮೆ ಎಳೆಯನ್ನು ಸುತ್ತುವ ಕೇಂದ್ರಗಳು.

ಬೆಂಬಲ ಬೆಲೆಗಳ ಏರುವಿಕೆ–ಇಳಿಯುವಿಕೆಗಳ ನಡುವೆಯೂ ರೇಷ್ಮೆ ಬೆಳೆ ಚನ್ನಪಟ್ಟಣದ ಹಲವಾರು ಕೃಷಿಕರ ಜೀವನಾಧಾರವಾಗಿದ್ದು ರೇಷ್ಮೆ ಬೆಳೆ ಹಾಳಾದಾಗ ನಷ್ಟವನ್ನು ಅನುಭವಿಸುತ್ತಾ ಉತ್ತಮ ಬೆಳೆ ಬಂದಾಗ ಸೂಕ್ತ ಬೆಲೆ ದೊರೆತದ್ದೇ ಆದರೆ ಲಾಭವನ್ನು ಪಡೆಯುತ್ತಾ ವ್ಯಾಪಾರ ವಾಣಿಜ್ಯವು ಮಧ್ಯಮ ಪ್ರಮಾಣದಲ್ಲಿ ನಡೆಯುತ್ತಾ ಸಾಗುತ್ತಿದೆಯಾದರೂ ರಾಷ್ಟ್ರದ ಆರ್ಥಿಕತೆಗೆ ಲಕ್ಷಾಂತರ ರೂ.ಗಳ ವಿದೇಶಿ ವಿನಿಮಯವನ್ನು ಗಳಿಸಿಕೊಡುತ್ತಿದೆ.

ಅಡಿಟಿಪ್ಪಣಿಗಳು :

1. ಕೆ.ಎಸ್.ರಮಾ, 'ಜೀವನ ಚರಿತ್ರೆ ಮಾಲೆ-12 ಮೈಸೂರು ಹುಲಿ ಟಿಪ್ಪು ಸುಲ್ತಾನ್', ಪು.63.
2. ಮೌಖಿಕ ಸಂದರ್ಶನ: ಕೃಷ್ಣೇಗೌಡ, ಪ್ರಾಧ್ಯಾಪಕರು, ಚನ್ನಪಟ್ಟಣ.
3. ಕೆ.ಎಸ್.ರಮಾ, ಪು.63
4. ಮೌಖಿಕ ಸಂದರ್ಶನ: ಪ್ರಕಾಶ್, ಸಹಾಯಕ ಬೋಧಕರು, ಅರಗುಬಣ್ಣ ವಿಭಾಗ, ಕರಕುಶಲ ತರಬೇತಿ ಕೇಂದ್ರ, ಚನ್ನಪಟ್ಟಣ.
5. ಮೌಖಿಕ ಸಂದರ್ಶನ: ಈಶ್ವರ್ ರಾಜ್, ಮಾಲೀಕರು, ಶ್ರೀ ಟಾಯ್ಸ್ ಫ್ಯಾಕ್ಟರಿ, ಚನ್ನಪಟ್ಟಣ.
6. ಹೆಚ್. ಕೃಷ್ಣೇಗೌಡ ಮತ್ತು ದೇ. ನಾರಾಯಣಸ್ವಾಮಿ (ಸಂ.), 'ಕಣ್ವ ಸಿರಿ', ಪು.29.
7. ಮೌಖಿಕ ಸಂದರ್ಶನ: ಈಶ್ವರ್ ರಾಜ್.
8. ಮೌಖಿಕ ಸಂದರ್ಶನ: ಮಾಲಿನಿ, ಶ್ರೀ ಟಾಯ್ಸ್ ಫ್ಯಾಕ್ಟರಿ, ಚನ್ನಪಟ್ಟಣ.
9. ಎಲ್.ಬಸವರಾಜು (ಸಂ.), 'ಚೈತ್ರ', ಪು.9.
10. ಮೌಖಿಕ ಸಂದರ್ಶನ: ಈಶ್ವರ್ ರಾಜ್.
11. ಮೌಖಿಕ ಸಂದರ್ಶನ: ಸಯ್ಯದ್ ಬಸಾರತ್ ವುಲ್ಲಾ, ಮೆಹದೆವಿಯಾ ವೃತ್ತ, ಚನ್ನಪಟ್ಟಣ.
12. ಮೌಖಿಕ ಸಂದರ್ಶನ: ಅಬ್ದುಲ್ ರೆಹಮಾನ್, ಬೊಂಬೆ ವ್ಯಾಪಾರಿಗಳು, ಚನ್ನಪಟ್ಟಣ.
13. ಅದೇ.
14. ಮೌಖಿಕ ಸಂದರ್ಶನ: ನಾಗಮ್ಮ, ಕುಡಿಕೆ ಬೇವೂರು, ಚನ್ನಪಟ್ಟಣ.
15. ಮೌಖಿಕ ಸಂದರ್ಶನ: ಏಲಕ್ಕಿ ತಿಮ್ಮಶೆಟ್ಟಿ, ಕುಡಿಕೆ ಬೇವೂರು, ಚನ್ನಪಟ್ಟಣ.
16. ಅದೇ.
17. ಸೂರ್ಯನಾಥ.ಯು. ಕಾಮತ್ (ಸಂ.), 'ಕರ್ನಾಟಕ ರಾಜ್ಯ ಗೆಜೆಟಿಯರ್ ಬೆಂಗಳೂರು ಗ್ರಾಮಾಂತರ ಜಿಲ್ಲೆ,' ಪು.394.
18. ಮೌಖಿಕ ಸಂದರ್ಶನ: ರಮೇಶ್, ಹೊನ್ನನಾಯಕನಹಳ್ಳಿ, ಚನ್ನಪಟ್ಟಣ.
19. ಕೆ.ಎಸ್.ರಮಾ, ಪು.63.
20. ಸೂರ್ಯನಾಥ.ಯು. ಕಾಮತ್ (ಸಂಪಾದಕರು), 'ಕರ್ನಾಟಕ ರಾಜ್ಯ ಗೆಜೆಟಿಯರ್ ಬೆಂಗಳೂರು ಗ್ರಾಮಾಂತರ ಜಿಲ್ಲೆ', ಪು.262.
21. ಮೈಸೂರು ದಸರಾ ವಸ್ತು ಪ್ರದರ್ಶನ ಪ್ರಕಾಶಿಕೆ 1961, ಪು.96.

ಅಧ್ಯಾಯ–6

ಉಪಸಂಹಾರ

ಅಧ್ಯಾಯ–6

ಉಪಸಂಹಾರ

ಭಾರತೀಯ ಇತಿಹಾಸದ ಪುಟಗಳನ್ನು ಅವಲೋಕನ ಮಾಡಿದಾಗ ವೈವಿಧ್ಯಮಯವಾದ ಸಂಸ್ಕೃತಿ ಮತ್ತು ಪರಂಪರೆಯನ್ನು ಭಾರತವು ಹೊಂದಿರುವುದನ್ನು ಗಮನಿಸಬಹುದಾಗಿದೆ. ಈ ಇತಿಹಾಸ ಮತ್ತು ಪರಂಪರೆ ಪ್ರಸ್ತುತವಾದ ನಮ್ಮ ಬದುಕಿಗೆ ಮಾರ್ಗದರ್ಶನವನ್ನು ನೀಡುತ್ತದೆ. ಈ ಸಂಸ್ಕೃತಿಯಲ್ಲಿ ವಿಭಿನ್ನವಾದ ವೃತ್ತಿ ಮತ್ತು ಉದ್ಯಮಗಳನ್ನು ನಾವು ಕಾಣಬಹುದಾಗಿದೆ. ಈ ಉದ್ಯಮಗಳಲ್ಲಿ ಕರಕುಶಲತೆಯ ಉದ್ಯಮವು ಭಾರತೀಯ ಪ್ರಾಚೀನ ವೃತ್ತಿಗಳಲ್ಲಿ ಒಂದಾಗಿದೆ. ಇದು ಇಂದಿಗೂ ಭಾರತೀಯರ ಜೀವನದಲ್ಲಿ ಹಾಸು ಹೊಕ್ಕಾಗಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಭಾರತದ ಅವಿಭಾಜ್ಯ ಅಂಗವಾದ ಕರ್ನಾಟಕವೂ ಸಹ ವಿಶಿಷ್ಟ ಸಂಸ್ಕೃತಿ ಹೊಂದಿದೆ. ಕರ್ನಾಟಕದ ವೃತ್ತಿಗಳಲ್ಲಿ ಕರಕುಶಲತೆಯು ಐತಿಹಾಸಿಕವಾಗಿ ಮಹತ್ವವನ್ನು ಹೊಂದಿದೆ. ಈ ನಿಟ್ಟಿನಲ್ಲಿ ಈ ಉದ್ಯಮದ ಅಧ್ಯಯನವನ್ನು ನಡೆಸಲಾಗಿದೆ.

ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿರುವ ತನ್ನ ಹೃದಯ ಭಾಗದಲ್ಲಿ ಕಣ್ವನದಿಯನ್ನು ಹೊಂದಿ ಸಾಕಷ್ಟು ವೈವಿಧ್ಯಮಯವಾದ ಮಣ್ಣಿನಿಂದಾಗಿ ವಿವಿಧ ಬೆಳೆಗಳ ವ್ಯವಸಾಯಕ್ಕೆ ಯೋಗ್ಯವಾಗಿರುವ ಈ ಚನ್ನಪಟ್ಟಣ ಕಣ್ವ ಮಹರ್ಷಿಗಳು, ದಾಸ ಶ್ರೇಷ್ಠರು ನಡೆದಾಡಿದ ನಾಡು. ಪೌರಾಣಿಕ ಪ್ರಸಿದ್ಧಿ ಪಡೆದಿರುವ ಈ ನಾಡನ್ನು ಗಂಗರು, ಚೋಳರು, ಹೊಯ್ಸಳರು, ವಿಜಯ–ನಗರದ ಅರಸರು, ಮೈಸೂರಿನ ಒಡೆಯರು, ಪಾಳೆಯಗಾರರು ಆಳಿ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಸ್ವಾತಂತ್ರ್ಯ ಚಳುವಳಿಯಲ್ಲಿಯೂ ಪ್ರಮುಖ ಪಾತ್ರ ವಹಿಸಿದ ಈ ಚನ್ನಪಟ್ಟಣದ ನಾಯಕರು ಈ ನೆಲದ ಪ್ರತಿಬಿಂಬಗಳಾಗಿದ್ದಾರೆ. ಇಷ್ಟೆಲ್ಲಾ ಚಾರಿತ್ರಿಕ ಹಿನ್ನಲೆಯನ್ನೊಳಗೊಂಡಿರುವ ಈ ಚನ್ನಪಟ್ಟಣವು ಇಂದು ದೇಶ ವಿದೇಶಗಳಲ್ಲಿ 'ಬೊಂಬೆಯನಗರ' ಎಂದೇ ಗುರುತಿಸಲ್ಪಟ್ಟಿರುವುದು ತನ್ನಲ್ಲಿರುವ ಕರಕುಶಲತೆಯಿಂದಾಗಿ. ಶತ–ಶತಮಾನಗಳಿಂದಲೂ ಹಲವಾರು ಕರಕುಶಲತೆಗಳನ್ನು ಮೈಗೂಡಿಸಿಕೊಂಡಿರುವ ಚನ್ನಪಟ್ಟಣ ಚಂದಾಗಿರುವ ಪಟ್ಟಣವೇ ಸರಿ.

ಚನ್ನಪಟ್ಟಣದ ಕರಕುಶಲತೆಗಳಲ್ಲಿ ಬಹುಮುಖ್ಯವಾದ ಮರದ ಬೊಂಬೆಗಳ/ಆಟಿಕೆಗಳ ತಯಾರಿಕೆಯನ್ನು ಕುರಿತಾಗಿ ಹೇಳುವುದಾದರೆ, ಈ ಭಾಗದಲ್ಲಿದ್ದ ಯಥೇಚ್ಛ

ಹಾಲೆಮರಗಳಿಂದಾಗಿ ಆರಂಭಗೊಂಡ ಈ ಉದ್ಯಮ ಇಂದು ದೇಶ-ವಿದೇಶಗಳಲ್ಲಿ ಬಹು ಪ್ರಖ್ಯಾತಿಗೊಂಡಿದ್ದು, ಭಾರತದ ವಿದೇಶಿ ವಿನಿಮಯ ಗಳಿಕೆಯಲ್ಲಿ ಪ್ರಮುಖ ಸ್ಥಾನವನ್ನು ಹೊಂದಿದೆ. ಯಾವುದೇ ನೀರಾವರಿಯ ಆಶ್ರಯವಿಲ್ಲದೆಯೂ ಬಂಜರು ಭೂಮಿಯಲ್ಲಿಯೂ ಸಹ ಬೆಳೆಯಬಹುದಾದ ಮರ ಈ ಹಾಲೆಮರ. ಬಹಳ ಸುಲಭವಾಗಿ ಲಭ್ಯವಾಗುತ್ತಿದ್ದ ಈ ಮರವನ್ನು ಅವಲಂಬಿಸಿ ಬದುಕು ಸವೆಸುತ್ತಿದ್ದವರು ಬಹಳಷ್ಟು ಮಂದಿ. ತಮ್ಮ ಜೀವನೋಪಾಯಕ್ಕಾಗಿ ಈ ಮರಗಳಿಂದ ಸಣ್ಣ-ಪುಟ್ಟ ಗೊಂಬೆಗಳು, ಆಟಿಕೆಗಳನ್ನು ಸಿದ್ಧ ಪಡಿಸುತ್ತಿದ್ದ ಕುಶಲಕರ್ಮಿಗಳು ಅದರ ಬೇಡಿಕೆ ಹೆಚ್ಚಾದಂತೆ ನಮ್ಮ ಸಂಸ್ಕೃತಿಯ ಪ್ರತಿಬಿಂಬವಾಗುವಂತಹ ರಚನೆಗಳಲ್ಲಿ ತೊಡಗಿದರು.

ಈ ಬೊಂಬೆ ತಯಾರಿಕಾ ಉದ್ದಿಮೆಯು ಇಂದು ನಮ್ಮ ದೇಶಕ್ಕೆ ನೀಡಿರುವ ಕೊಡುಗೆ ಅಪಾರ. ಬಾವಸ್‌ಮಿಯಾ ಎಂಬ ಮುಸಲ್ಮಾನ ವ್ಯಕ್ತಿಯಿಂದ ಆರಂಭವಾದ ಈ ಕುಶಲತೆಯು ಕೇವಲ ಸಣ್ಣ ಪುಟ್ಟ ಗೃಹೋಪಯೋಗಿ ವಸ್ತುಗಳ ತಯಾರಿಕೆಗೆ ಸೀಮಿತವಾಗಿದ್ದು ನಂತರದ ದಿನಗಳಲ್ಲಿ ಇದಕ್ಕೆ ರಾಜ-ಮಹಾರಾಜರ ಪ್ರೋತ್ಸಾಹ ದೊರೆತಾಗ ಈ ಮರದ ವಸ್ತುಗಳ ಉತ್ಪಾದನೆಯು ವಿಸ್ತಾರಗೊಂಡಿರುವುದು ಕಂಡು ಬರುತ್ತದೆ. ನಂತರ ಸ್ವಾತಂತ್ರ್ಯ ನಂತರದಲ್ಲಿ ಸರ್ಕಾರವು ವಹಿಸಿದ ಆಸಕ್ತಿಯಿಂದಾಗಿ ತಂತ್ರಜ್ಞಾನದ ಅಳವಡಿಕೆಯಾದಾಗ ಈ ಉದ್ದಿಮೆಯ ಕ್ಷೇತ್ರವು ವಿಸ್ತಾರವಾಯಿತು. ಅಪಾರ ವಿದೇಶಿ ವಿನಿಮಯ ಗಳಿಸಿರುತ್ತಿರುವ ಈ ಉದ್ದಿಮೆಯು ನಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸುವಲ್ಲಿ ಸಹಕಾರಿಯಾಗಿರುವುದರಲ್ಲಿ ಯಾವುದೇ ಸಂದೇಹವಿಲ್ಲ.

ಇಂದು ಈ ಕರಕುಶಲತೆಯ ಉದ್ದಿಮೆಯಲ್ಲಿ ಉತ್ಪಾದನೆಯಾಗುವ ವಸ್ತುಗಳಲ್ಲಿ ಗೃಹೋಪಯೋಗಿ ವಸ್ತುಗಳು, ಅಲಂಕಾರಿಕ ವಸ್ತುಗಳು, ಮನರಂಜನಾ ವಸ್ತುಗಳು, ಶೈಕ್ಷಣಿಕವಾಗಿ ಬಳಕೆಯಾಗುವ ವಸ್ತುಗಳು, ಅರೋಗ್ಯ ಸಾಧನಗಳಾಗಿ, ದಿನ ಬಳಕೆಯ ವಸ್ತುಗಳಾಗಿ, ಸಂಸ್ಕೃತಿಯ ಪ್ರತೀಕಗಳಾಗಿ ವಸ್ತುಗಳನ್ನು ಉತ್ಪಾದಿಸಲಾಗುತ್ತಿದ್ದು ಇವುಗಳ ಪ್ರಾಮುಖ್ಯತೆ ಅಧಿಕ.

ಎಷ್ಟೇ ಆಧುನಿಕತೆಯನ್ನು ಮೈಗೂಡಿಸಿಕೊಂಡರೂ ಇಂದಿಗೂ ಗೃಹೋಪಯೋಗಿ ವಸ್ತುಗಳಾದ ಚಪಾತಿ ಲಟ್ಟಿಸುವ ಮಣೆ, ಲಟ್ಟಣಿಗೆ, ಮಜ್ಜಿಗೆ ತಯಾರಿಸುವ ಕೈಮಂತುಗಳು ಇಂದಿಗೂ ಬೇಡಿಕೆಯಲ್ಲಿದೆ. ಅಷ್ಟೇ ಅಲ್ಲದೆ ನಮ್ಮ ಆಧುನಿಕ ಅಡಿಗೆ ಪಾತ್ರೆಗಳಾದ ನಾನ್‌ಸ್ಟಿಕ್‌ಗಳ ಬಳಕೆಗೂ ಈ ಮರದ ಚಮಚ, ಸೌಟುಗಳು, ಅಲ್ಲೆಗಳು ಬಳಕೆಯಾಗುತ್ತವೆ. ಇವುಗಳ ಬೇಡಿಕೆ ಇಂದಿನ ದಿನಗಳಲ್ಲಿಯೂ ಬಹುವಾಗಿರುವುದು ಕಂಡು ಬರುತ್ತದೆ. ಇಂದಿನ ಫಾಸ್ಟ್‌ಫುಡ್ ಕಾಲದಲ್ಲಿ ನಮ್ಮ ಹಳೆಯ ಅಡಿಗೆ ಮನೆಯನ್ನು ನೆನಪಿಸುವ ರೀತಿಯಲ್ಲಿ ಆಟದ ಸಾಮಾನುಗಳನ್ನು ತಯಾರಿಸಿ ಅವುಗಳ ಮೂಲಕ ಮಕ್ಕಳಿಗೆ ರಾಗಿ ಬೀಸುವ, ಭತ್ತ ಕುಟ್ಟುವ, ಸೌದೆ ಬಳಸಿ ಅಡುಗೆ ಮಾಡುವ ಒಲೆಗಳು, ನೀರು ತರುವ ಬಿಂದಿಗೆಗಳು ಇತ್ಯಾದಿ

ವಸ್ತುಗಳನ್ನು ನೀಡುವುದರ ಮೂಲಕ ನಮ್ಮ ಪೂರ್ವಿಕರ ಆಹಾರ ಪದ್ಧತಿಯ ಪರಿಚಯ ಮಕ್ಕಳಿಗೆ ಲಭ್ಯವಾಗುತ್ತದೆ.

ಕೇವಲ ಗೃಹೋಪಯೋಗಿ ವಸ್ತುಗಳಾಗಿ ಅಷ್ಟೇ ಅಲ್ಲದೆ ಗೃಹಾಲಂಕಾರಕ್ಕಾಗಿ ಬಳಸುವ ಬಾಗಿಲಪರದೆಗಳು, ಟೇಬಲ್ ಟಾಪ್‌ಗಳು, ನ್ಯಾಪ್‌ಕಿನ ರಿಂಗ್ಸ್‌ಗಳು ಸಹ ಬಹುಪಯೋಗಿ ವಸ್ತುಗಳು. ಅಲ್ಲದೆ ಗೃಹಿಣಿಯರ ಅಲಂಕಾರಿಕ ವಸ್ತುಗಳಾದ ಕಿವಿಯೋಲೆಗಳು, ಕೈ ಬಳೆಗಳು, ಮಣಿಯ ಸರಗಳು ನಮ್ಮ ದೇಶಕ್ಕಿಂತಲೂ ವಿದೇಶಗಳಲ್ಲಿ ಬಹು ಬೇಡಿಕೆಯ ವಸ್ತುಗಳಾಗಿವೆ. ಫ್ಯಾಷನ್ ಜಗತ್ತಿನ ಹೆಂಗಳೆಯರು ಇಂದು ಚಿತ್ತಾಕರ್ಷಕ ಕೈ ಬಳೆಗಳು, ಸರಗಳ ಬಳಕೆಗೆ ಮಾರು ಹೋಗುತ್ತಿದ್ದು ವಸ್ತ್ರದ ಬಣ್ಣಕ್ಕೆ ಹೊಂದುವ ಬಳೆ, ಸರಗಳ ಲಭ್ಯತೆ ಈ ಉದ್ದಿಮೆಯಿಂದಾಗುತ್ತಿವೆ.

ಗೃಹೋಪಯೋಗಿ, ಗೃಹಾಲಂಕಾರಕ್ಕಿಂತಲೂ ಮುಖ್ಯವಾಗಿ ಮಕ್ಕಳ ಆಟಿಕೆಗಳು ವಿಶ್ವ ಮಾನ್ಯವಾಗಿದೆ. ಇದಕ್ಕೆ ಪೂರಕವಾದ ಮತ್ತೊಂದು ಅಂಶವೆಂದರೆ ಅದಕ್ಕೆ ಉಪಯೋಗಿಸುವ ಬಣ್ಣ. ಯಾವುದೇ ಅಪಾಯಕಾರಿ ರಾಸಾಯನಿಕಗಳಿಲ್ಲದ, ಪ್ರಾಕೃತಿಕ ಬಣ್ಣಗಳನ್ನು ಈ ಆಟಿಕೆಗಳಿಗೆ ಬಳಸುತ್ತಿರುವುದು ಇವು ವಿಶ್ವಾದ್ಯಂತ ಜನಪ್ರಿಯವಾಗಲು ಕಾರಣೀಭೂತವಾಗಿದೆ. ಈ ಆಟಿಕೆಗಳಲ್ಲಿರುವ ನೇತಾಡುವ ಮಂಗನನ್ನು ನೋಡಿದರೆ ಮಕ್ಕಳಿಗೆ ಕಪಿಚೇಷ್ಟೆಯ ನೆನಪು ಬರುವುದು ಸಹಜ. ನಾಲ್ಕು ಚಕ್ರದ ಗಾಡಿಗಳು, ಪ್ರಾಣಿ–ಪಕ್ಷಿಗಳು, ವಿವಿಧ ಜಾನಪದ ಕಲೆಗಳನ್ನು ಬಿಂಬಿಸುವ ಡೊಳ್ಳು ಕುಣಿತ, ಯಕ್ಷಗಾನ ಇತ್ಯಾದಿ ಗೊಂಬೆಗಳು ಮಕ್ಕಳಿಗೆ ಆಟದ ಜೊತೆಗೆ ಜ್ಞಾನದ ಪಾಠವನ್ನೂ ನೀಡುತ್ತಿವೆ. ಒಂದು ಕಾಲಕ್ಕೆ ಯಥೇಚ್ಚವಾಗಿದ್ದ ಪ್ರಾಣಿ–ಪಕ್ಷಿಗಳ ಸಂಖ್ಯೆ ಇಂದು ಇಳಿಮುಖವಾಗುತ್ತಿವೆ. ಅದರಲ್ಲೂ ಇಂದಿನ ಆಧುನಿಕತೆ ಹಾಗೂ ತಂತ್ರಜ್ಞಾನವು ಪ್ರಾಣಿ–ಪಕ್ಷಿಗಳ ಅಳಿವಿಗೆ ಕಾರಣವಾಗುತ್ತಿದ್ದು, ಅವುಗಳ ಪ್ರತಿಬಿಂಬವಾದ ಈ ಬೊಂಬೆಗಳು ಮಾತ್ರವೇ ಉಳಿದುಕೊಂಡಿವೆ. ಮಾನವನ ದುರಾಸೆಯಿಂದಾಗಿ ಎಷ್ಟೋ ಪ್ರಾಣಿ ಸಂಕುಲ ಅವನತಿ ಹೊಂದುತ್ತಿದ್ದು ನಮ್ಮ ಮುಂದಿನ ಜನಾಂಗಕ್ಕೆ ಅವುಗಳ ಚಿತ್ರ ಮಾತ್ರವೇ ಉಳಿಯಬಹುದು. ಇಂತಹ ಸಂದರ್ಭದಲ್ಲಿ ಈ ಮರದ ಆಟಿಕೆಗಳ ಉದ್ಯಮದ ಕೊಡುಗೆ ಅಪಾರ ಏಕೆಂದರೆ ಪ್ರಾಣಿಗಳನ್ನು ತಮ್ಮ ಕೌಶಲ್ಯದಿಂದ ಮರಗಳಲ್ಲಿ ಚಿತ್ರಿಸುತ್ತಿರುವ ಈ ಉದ್ದಿಮೆ ಮುಂದಿನ ಜನಾಂಗಕ್ಕೆ ಚಿತ್ರಕ್ಕಿಂತಲೂ ಪ್ರಭಾವಿಕಾರಿಯಾಗಿ ಪ್ರಾಣಿಗಳನ್ನು ಮಕ್ಕಳು ಸ್ಪರ್ಶಿಸಿ ತಿಳಿಯುವಂತೆ ಮಾಡಿವೆ. ಹಾಗೆಯೇ ಇಂದು ಮಾನವನ ಅತಿಯದ ಮೊಬೈಲೆಗಳ ಬಳಕೆಯಿಂದಾಗಿ ಎಷ್ಟೋ ಪಕ್ಷಿ ಸಂಕುಲಗಳು ಕಣ್ಮರೆಯಾಗುತ್ತಿವೆ. ಉದಾ: ಸುಮಾರು 10–15 ವರ್ಷಗಳ ಹಿಂದೆ ಬಹುಸಂಖ್ಯೆಯಲ್ಲಿದ್ದ ಗುಬ್ಬಚ್ಚಿಗಳು ಇಂದು ನಮಗೆ ಕಾಣ ಸಿಗುತ್ತಿಲ್ಲವೆಂದರೆ ನಮ್ಮ ಮುಂದಿನ ಪೀಳಿಗೆಗೆ ಅವುಗಳನ್ನು ಊಹಿಸುವುದು ಅಸಾಧ್ಯ. ಆದರೆ ಈ ಉದ್ದಿಮೆಯ ಫಲವಾಗಿ ಈ ಪಕ್ಷಿಗಳು ಜೀವಂತ ಉಳಿಯುವಂತಾಗಿವೆ. ಕುಶಲ ಕರ್ಮಿಗಳು ತಯಾರಿಸುವ ಗಿಳಿ, ನವಿಲು, ಕೊಕ್ಕರೆ, ಗುಬ್ಬಚ್ಚಿ, ಕೋಳಿ ಇತರೆ ಪಕ್ಷಿಗಳು ಭವಿಷ್ಯದ

ಮಕ್ಕಳಿಗೆ ಕಾಣ ಸಿಗಲಿರುವ ಪಕ್ಷಿ ಸಂಕುಲಗಳಾಗಿವೆ (ಚಿತ್ರ–22). ಈ ನಿಟ್ಟಿನಲ್ಲಿ ಈ ಉದ್ದಿಮೆಯನ್ನು ಬೆಳೆಸುವುದು ಅಗತ್ಯವಾಗಿದೆ. ಈಗಾಗಲೇ ವಿದೇಶಗಳಲ್ಲಿ ಇಂತಹ ಪ್ರಾಣಿ ಪಕ್ಷಿಗಳ ಬೊಂಬೆಗಳನ್ನು ಇಟ್ಟು ಶಿಕ್ಷಣಕ್ಕೆ ಬಳಸಿಕೊಳ್ಳುತ್ತಿರುವುದಕ್ಕೆ ಇತ್ತೀಚಿಗಷ್ಟೆ ಚನ್ನಪಟ್ಟಣದಿಂದ ಯುರೋಪಿಗೆ ರಫ್ತಾದ ಪ್ರಾಣಿಗಳ ಬೊಂಬೆಗಳು ಸಾಕ್ಷಿಯಾಗಿವೆ. ಹೀಗೆ ಆಟದ ಜೊತೆಗೆ ಜ್ಞಾನಕ್ಕೆ ಮಾರ್ಗವಾಗುತ್ತಿವೆ ಚನ್ನಪಟ್ಟಣದ ಚಿನ್ನದ ಗೊಂಬೆಗಳು. ಎಂಟು–ಹತ್ತು ತಿಂಗಳ ವಯಸ್ಸಿನ ಮಗುವು ಹೆಜ್ಜೆ ಇಡಲು ಪ್ರಯತ್ನಿಸುವಾಗ ಅದರ ನಡಿಗೆಗೆ ಸಹಾಯಕವಾಗಲು ಇಂದು ಬಳಸುವ Walker ಈ ಕರಕುಶಲ ಉದ್ದಿಮೆಯ ಕೊಡುಗೆ ಎಂದರೆ ತಪ್ಪಾಗಲಾರದು. ಏಕೆಂದರೆ ಮರದಲ್ಲಿ ಬಳಕೆಯಲ್ಲಿದ್ದ ಮೂರು ಚಕ್ರದ ಗಾಡಿಯ ಆಧುನಿಕ ರೂಪಾಂತರವೇ ಇಂದಿನ Walker ಇಂದಿನ ತಂತ್ರಜ್ಞಾನವು ಅದೇ ಬಳಕೆಯಲ್ಲಿದ್ದದನ್ನು ಗಮನಿಸಿದರೆ ಕುಶಲಕರ್ಮಿಗಳ ಕಲಾ ನೈಪುಣ್ಯತೆ ನಮಗೆ ತಿಳಿದುಬರುತ್ತದೆ.

ಪ್ಲಾಸ್ಟಿಕ್, ರಬ್ಬರ್ ಆಟಿಕೆ ವಸ್ತುಗಳ ಪರಿಚಯವಾದಂತೆಲ್ಲಾ ಮರದ ಆಟಿಕೆಗಳಿಗೆ ಬೇಡಿಕೆ ಕಡಿಮೆಯಾಗಿ ಪೈಪೋಟಿ ಎದುರಾದಂತೆ ಕುಶಲಕರ್ಮಿಗಳು, ಉದ್ದಿಮೆದಾರರೂ ಹೊಸ ವಸ್ತುಗಳ ಅನ್ವೇಷಣೆಯಲ್ಲಿ ತೊಡಗಿ ನಂತರ ರಚನೆಯಾದವುಗಳೇ ಇಂದು ಶೈಕ್ಷಣಿಕ ಸಾಮಾಗ್ರಿಗಳಾಗಿ ಬಳಸುತ್ತಿರುವ ಮರದ ವಸ್ತುಗಳು. ಇಲ್ಲಿಯೂ ಈ ಉದ್ದಿಮೆಯು ಉತ್ಪಾದಿಸಿದ ಹೊಸ ಶೈಕ್ಷಣಿಕ ಸಾಧನಗಳು ಅದರ ಕೆಲಸದಲ್ಲಿನ ತಲ್ಲೀನತೆಗೆ ಸಾಕ್ಷಿಯಾಗಿವೆ. ಒಂದು ಕಾಲಕ್ಕೆ ಹೆಚ್ಚಾಗಿ ಗೃಹಾಲಂಕಾರ, ಗೃಹೋಪಯೋಗಿ, ಅಲಂಕಾರಿಕ, ಆಟಿಕೆಗಳಾಗಿ ಲಭ್ಯವಾಗುತ್ತಿದ್ದ ಈ ವಸ್ತುಗಳು ಇಂದು ಶೈಕ್ಷಣಿಕ ರಂಗಕ್ಕೆ ಬಹುವಾಗಿ ಹರಡಿಕೊಂಡಿವೆ. ಆಧುನಿಕ ಕಲಿಕಾ ರೀತಿಯಾದ ಚಟುವಟಿಕೆಯಾಧಾರಿತ ಕಲಿಕೆಗೆ ಈ ವಸ್ತುಗಳು ಸಹಕಾರಿಯಾಗಿವೆ. ಉದಾ: ಇಂದು ಈ ಮರದ ವಸ್ತುಗಳಲ್ಲಿ ಮಕ್ಕಳು ಬಣ್ಣವನ್ನು ಗುರ್ತಿಸಲು ಹಾಗೂ ಗಾತ್ರವನ್ನು ಗುರ್ತಿಸಲು ಅನುಕೂಲವಾಗುವಂತೆ ಮಣಿಗಳನ್ನು ತಯಾರಿಸಲಾಗುತ್ತಿದೆ (ಚಿತ್ರ–23). ರೇಖಾಗಣಿತದ ವಿವಿಧ ಮಾದರಿಗಳನ್ನು ಸಹ ಇದರಲ್ಲಿ ತಯಾರಿಸಿ ಮಕ್ಕಳು ಆಕಾರಕ್ಕೆ ತಕ್ಕಂತೆ ಅವುಗಳನ್ನು ಹುಡುಕಿ ಹೊಂದಿಸುವ ಮಾದರಿಗಳು ಲಭ್ಯವಿದೆ (ಚಿತ್ರ–24). ಅಷ್ಟೇ ಅಲ್ಲದೆ ಒಂದು ಚಿತ್ರದ ವಿವಿಧ ಭಾಗಗಳನ್ನು ಬೇರ್ಪಡಿಸಿ ಅವುಗಳನ್ನು ಹುಡುಕಿ ಸರಿಹೊಂದಿಸುವ ಕೌಶಲವನ್ನು ಮಕ್ಕಳಲ್ಲಿ ಅಭಿವೃದ್ಧಿ ಪಡಿಸಲು ಸಹಾಯಕವಾಗುವ ಮಾದರಿಗಳಿವೆ. ಮಕ್ಕಳಿಗೆ ಎಣಿಕೆಗೆ ಅನುಕೂಲವಾಗುವ ಅಬಾಕಸ್ ಮಾದರಿಯು ಸುಲಭವಾಗಿ ಮಕ್ಕಳನ್ನು ಗಣಿತದೆಡೆಗೆ ಆಸ್ತಕರನ್ನಾಗಿಸುತ್ತದೆ (ಚಿತ್ರ–25). ಇವಷ್ಟೇ ಅಲ್ಲದೇ ಇನ್ನೂ ಹತ್ತು ಹಲವು ರೀತಿಯಲ್ಲಿ ಇಂದು ಶೈಕ್ಷಣಿಕ ರಂಗದಲ್ಲಿ ಇವುಗಳ ಬಳಕೆಯಾಗುತ್ತಿದೆ. ಶೈಕ್ಷಣಿಕ ಸಾಧನಗಳ ಅವಿಷ್ಕಾರವಾದಂತೆ, ಆರೋಗ್ಯ ಸಾಧನಗಳಾಗಿಯೂ ಇವು ರಚನೆಗೊಂಡವು. ಬೆನ್ನು ನೋವು, ಮೈ–ಕೈ ನೋವಿನಿಂದ ಮುಕ್ತವಾಗಲು ಈ ಸಾಧನಗಳು ಸಹಕಾರಿಯಾಗಿದ್ದು

ಸುಲಭ ರಕ್ತ ಸಂಚಲನಕ್ಕೆ ಅನುಕೂಲವಾಗಿವೆ. ರಕ್ತದೊತ್ತಡ ನಿಯಂತ್ರಿಸಲು ಮಧುಮೇಹ ನಿಯಂತ್ರಣಕ್ಕೂ ಇವು ಉಪಯುಕ್ತವಾಗಿದೆ (ಚಿತ್ರ–26). ಬಡವ ಶ್ರೀಮಂತರೆನ್ನದೆ, ಜಾತಿಧರ್ಮವೆನ್ನದೆ ಎಲ್ಲರೂ ತಮ್ಮ ವಯೋಮಾನ ಆಸಕ್ತಿಗನುಗುಣವಾಗಿ ಇಷ್ಟಪಡುವ ಈ ಬಣ್ಣದ ಬೊಂಬೆಗಳು ಉಳಿದು ಬರಬೇಕು.[1] ಈ ದಿಸೆಯಲ್ಲಿ ಈ ಅಧ್ಯಯನವನ್ನು ನಡೆಸಲಾಗಿದೆ.

ಮರದ ಕರಕುಶಲತೆಯು ಆರಂಭವಾದಂದಿನಿಂದ ಇಂದಿನವರೆಗೂ ಇಲ್ಲಿ ಉತ್ಪನ್ನವಾಗುವ ವಸ್ತುಗಳು ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿವೆ. ಆರಂಭದಲ್ಲಿ ರಚನೆಯಾಗುತ್ತಿದ್ದ ವಿವಿಧ ಭಾರತೀಯ ಜೋಡಿಗಳಾದ ಪಂಜಾಬಿಗಳು, ಮದ್ರಾಸಿಗರು, ಮೈಸೂರಿಗರು ಇತರೆ ಗೊಂಬೆಗಳು ವಿವಿಧ ರಾಜ್ಯಗಳನ್ನು ಪ್ರತಿನಿಧಿಸಿದರೆ, ನಂತರದಲ್ಲಿ ಉತ್ಪಾದನೆಯಾದ ರಾಮನು ಯುದ್ಧಕ್ಕೆ ಹೊರಟ ಚಿತ್ರಣವಿರುವ ಬೊಂಬೆಗಳು, ಮಹಾಭಾರತದ ಪಾತ್ರಗಳನ್ನೊಳಗೊಂಡ ಬೊಂಬೆಗಳು, ವಿವಿಧ ದೇವರ ವಿಗ್ರಹಗಳು, ಜಗದ್ವಿಖ್ಯಾತ ಮೈಸೂರು ದಸರೆಯ ಜಂಬೂ ಸವಾರಿಯ ಬೊಂಬೆಗಳೂ ಸಂಗೀತ ವಾದ್ಯಗೋಷ್ಠಿಯ ಬೊಂಬೆಗಳು ನಮ್ಮ ಕಲೆ ಸಂಸ್ಕೃತಿಯನ್ನು ಎತ್ತಿ ಹಿಡುಯುವುದಷ್ಟೆ ಅಲ್ಲದೆ ನಮ್ಮ ಮುಂದಿನ ಜನಾಂಗಕ್ಕೂ ಸಂಸ್ಕೃತಿಯ ರವಾನೆಗೆ ದಾರಿ ಮಾಡಿಕೊಟ್ಟಿದೆ. ಗ್ರಾಮೀಣ ಬದುಕಿನ ಸಂಸ್ಕೃತಿಯನ್ನು ಪರಿಚಯಿಸುತ್ತಿರುವ ಈ ಬೊಂಬೆಗಳು ಕರಕುಶಲತೆಗೆ ಗರಿ ಮೂಡಿಸಿದಂತೆಯೇ ಸರಿ. ಆಧುನಿಕತೆಯ ಭರಾಟೆಯಲ್ಲಿ ನಮ್ಮ ಗ್ರಾಮೀಣ ಬದುಕು ಕಣ್ಮರೆಯಾಗುತ್ತಿರುವಾಗ ಈ ಬೊಂಬೆಗಳು ಆ ಬದುಕನ್ನು ಪುನರ್ ಪ್ರತಿಷ್ಠಾಪಿಸುತ್ತಿವೆ. ಹುಲ್ಲಿನ ಹೊರೆ ಹೊತ್ತ ಕೃಷಿಕ ದಂಪತಿಗಳು, ಕೈಯಲ್ಲಿ ಕಂಕುಳಲ್ಲಿ ಕೊಡಗಳನ್ನು ಹೊತ್ತು ನಡೆಯುವ ಗ್ರಾಮೀಣ ಮಹಿಳೆ, ಬಾವಿಯಿಂದ ನೀರು ಸೇದಿ ತರುವ ಹೆಂಗಳೆಯರು, ಬುಟ್ಟಿ ಹಿಡಿದು ಹೊಲಗಳಿಗೆ ಹೊರಟ ಮಹಿಳೆಯರ ಬೊಂಬೆಗಳು ಗ್ರಾಮದ ನೈಜ ಬದುಕನ್ನು ಅರಿಯಲು ಸಾಧ್ಯವಾಗಿದೆ (ಚಿತ್ರ–27). ಅಷ್ಟೇ ಅಲ್ಲದೇ ಬೆಸ್ತನ, ಹವಾಡಿಗನ ಗೊಂಬೆಗಳು ಮರೆಯಾಗುತ್ತಿರುವ ವೃತ್ತಿಗಳನ್ನು ನೆನಪಿಸಿದರೆ, ಹಳ್ಳಿಯ ಜಾತ್ರೆಗಳಲ್ಲಿ ಕಂಡು ಬರುತ್ತಿದ್ದ ಎತ್ತರದಿಂದ ತಿರುಗುವ ಜೋಕಾಲಿಗಳನ್ನು ಪ್ರತಿಬಿಂಬಿಸುವ ಬೊಂಬೆಗಳು ಜಾತ್ರೆಯ ವಾತಾವರಣಕ್ಕೆ ನಮ್ಮನ್ನು ಕೊಂಡೊಯ್ಯುತ್ತವೆ. ಹೀಗೆ ಭಿನ್ನ ಭಿನ್ನವಾಗಿ ಸಂಸ್ಕೃತಿಯ ಪ್ರಸರಣಕ್ಕೆ ಇವು ದಾರಿಯಾಗಿವೆ.

ಇಷ್ಟೆಲ್ಲಾ ಉಪಯುಕ್ತ ಸಾಧನಗಳಾಗಿರುವ ಈ ಮರದ ಅಟಿಕೆಗಳಿಗೆ ಮನಸೋಲದವರಿಲ್ಲ. ಇತ್ತೀಚೆಗಷ್ಟೇ ಭಾರತಕ್ಕೆ ಭೇಟಿ ನೀಡಿದ ಅಮೇರಿಕದ ಅಧ್ಯಕ್ಷ ಬರಾಕ್ ಒಬಾಮಾ ಚನ್ನಪಟ್ಟಣದ ಬೊಂಬೆಗಳಿಗೆ ಆಕರ್ಷಿತರಾಗಿ ಇಲ್ಲಿಂದ ಬೊಂಬೆಗಳನ್ನು ಒಯ್ದದ್ದೂ ಇದೆ. ಭಾರತ ದೇಶದ ಕರ್ನಾಟಕ ರಾಜ್ಯದ ಒಂದು ತಾಲ್ಲೂಕಾಗಿರುವ ಈ ಚನ್ನಪಟ್ಟಣದ ಬೊಂಬೆಗಳು ಇಂದು ಅಮೇರಿಕದ ಶ್ವೇತ ಭವನದಲ್ಲಿ ರಾರಾಜಿಸುತ್ತಿರುವುದು ಅವುಗಳ ಮಹತ್ವಕ್ಕೆ ಹಿಡಿದ ಕನ್ನಡಿಯಾಗಿದೆ.

ಚನ್ನಪಟ್ಟಣದ ಬೊಂಬೆಗಳ ಉದ್ಯಮ ಹೀಗೆ ಬೃಹತ್ ಪ್ರಮಾಣದಲ್ಲಿ ಬೆಳೆದು ಜಗತ್ತಿನೆಲ್ಲೆಡೆ ಜನಪ್ರಿಯಗೊಂಡಿದ್ದರೂ ಇದಕ್ಕೆ ಸರ್ಕಾರದಿಂದ ಅಗತ್ಯ ಪ್ರೋತ್ಸಾಹ ದೊರೆಯುತ್ತಿಲ್ಲವೆಂಬ ಕೊರಗು ಕಲಾಕಾರರಲ್ಲಿ ಇದ್ದೇ ಇದೆ.[2] ಹೀಗೆ ಗೃಹೋಪಯೋಗಿ ವಸ್ತುಗಳಾಗಿ ಅಲಂಕಾರಿಕ, ಆಭರಣಗಳಾಗಿ, ಮನರಂಜನೀಯ ಆಟಿಕೆಗಳಾಗಿ, ಶೈಕ್ಷಣಿಕ ಹಾಗೂ ಆರೋಗ್ಯ ಸಾಧನಗಳಾಗಿ ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿರುವ ಈ ಮರದ ಕರಕುಶಲ ವಸ್ತುಗಳ ಉದ್ದಿಮೆ ಇಂದು ಹಲವಾರು ಸಂಕಷ್ಟಗಳನ್ನು ಎದುರಿಸುತ್ತಿದೆ. ಈ ಕಲೆಯನ್ನು ಮೂಲವೃತ್ತಿಯಾಗಿಸಿ ಕೊಂಡವರ ಜೀವನ ಶೋಚನೀಯವಾಗಿದೆ.[3] ಹಾಲೆಮರಗಳನ್ನು ಕಡಿಯಲು ಸರ್ಕಾರ ವಿಧಿಸಿರುವ ನಿರ್ಬಂಧ, ಸೂಕ್ತ ಮಾರುಕಟ್ಟೆ ಇಲ್ಲದಿರುವುದು, ಮಧ್ಯವರ್ತಿಗಳ ಹಾವಳಿ, ಸರ್ಕಾರದಿಂದ ಸೂಕ್ತ ಪ್ರೋತ್ಸಾಹದ ಕೊರತೆ ಈ ಉದ್ದಿಮೆಯನ್ನು ಅವಸಾನದ ಅಂಚಿಗೆ ತಳ್ಳುತ್ತಿದೆ ಎಂದರೆ ತಪ್ಪಾಗಲಾರದು. ಈ ಉದ್ದಿಮೆಯ ಉಪಯುಕ್ತತೆಯನ್ನು ಅರಿತವರು ಯಾರೇ ಆದರು ಇದರ ರಕ್ಷಣೆಗೆ ಒಲವು ತೋರಲೇ ಬೇಕು. ಈ ನಿಟ್ಟಿನಲ್ಲಿ ಸಂಶೋಧಿಸಿದಾಗ ಕಂಡು ಬಂದ ಅಂಶಗಳೆಂದರೆ ಈ ಉದ್ದಿಮೆಯು ಉಳಿಯಬೇಕಾದರೆ ಸರ್ಕಾರವು ಮುಖ್ಯವಾಗಿ

- ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಪದಾರ್ಥಗಳನ್ನು ಒದಗಿಸಿಕೊಡುವುದು.
- ಕಾರ್ಮಿಕರಿಗೆ ಕನಿಷ್ಠ ಕೂಲಿ ನಿಗಧಿಪಡಿಸಿ ಸೇವಾಭದ್ರತೆಯನ್ನು ಕಾಪಾಡುವುದು.
- ಕೈಗಾರಿಕಾ ಹಣಕಾಸು ಸಂಸ್ಥೆಗಳು ಹಾಗೂ ಬ್ಯಾಂಕುಗಳ ಮುಖಾಂತರ ಕಡಿಮೆ ಬಡ್ಡಿ ದರದಲ್ಲಿ ಸಾಲದ ಸೌಲಭ್ಯಗಳನ್ನು ನೀಡುವುದು.
- ಉತ್ಪಾದಕರು ತಯಾರು ಮಾಡಿದ ಪದಾರ್ಥಗಳನ್ನು ನೇರವಾಗಿ ವಿದೇಶಗಳಿಗೆ ರಫ್ತು ಮಾಡುವ ಅವಕಾಶ ಮತ್ತು ಅನುಕೂಲತೆಗಳನ್ನು ಒದಗಿಸುವುದು.
- ಸರ್ಕಾರದ ವತಿಯಿಂದ ನಡೆಯುತ್ತಿರುವ ತರಬೇತಿ ಕೇಂದ್ರಗಳನ್ನು ಆಧುನೀಕರಣಗೊಳಿಸಿ ಹೆಚ್ಚು ಜನಕ್ಕೆ ತರಬೇತಿ ನೀಡುವುದು.
- ಸರ್ಕಾರ ಗೊಂಬೆಗಳಿಗೆ ಸರಿಯಾದ ಸ್ಥಳೀಯ ಮಾರುಕಟ್ಟೆ ಒದಗಿಸುವುದು.[4]

ಈ ಎಲ್ಲಾ ಅನುಕೂಲತೆಗಳನ್ನು ಒದಗಿಸಿದ್ದೇ ಆದರೆ ಚನ್ನಪಟ್ಟಣದ ಗೊಂಬೆ ಕೈಗಾರಿಕೆ ಮತ್ತೆ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಭಾರತ ಮಾತ್ರವಲ್ಲದೆ ಇತರೆ ದೇಶಗಳಲ್ಲಿ ತನ್ನ ಹೆಸರು ಗಳಿಸಬಹುದು.

ಚನ್ನಪಟ್ಟಣದ ಮತ್ತೊಂದು ಕರಕುಶಲ ಉದ್ದಿಮೆಯಾದ ಕುಂಬಾರಿಕೆಯು ಇಂದು ಕುಂಟುತ್ತಾ ಸಾಗುತ್ತಿದೆ. ಹಳೆಯ ಶಿಲಾಯುಗದ ಮಾನವನು ನವ ಶಿಲಾಯುಗಕ್ಕೆ

ಕಾಲಿಡುತ್ತಿದ್ದಂತೆ ವ್ಯವಸಾಯ ಆರಂಭಿಸಿದಾಗ ಅದರಿಂದ ಉತ್ಪನ್ನವಾದ ಧಾನ್ಯಗಳ ಸಂಗ್ರಹಣೆಗಾಗಿ ಆವಿಷ್ಕಾರಗೊಂಡ ಉದ್ದಿಮೆಯೇ ಈ ಕುಂಬಾರಿಕೆ. ಪ್ರಾಗೈತಿಹಾಸಿಕ ಕಾಲದಿಂದಲೂ ಮಾನವನ ಜೀವನದಲ್ಲಿ ಹಾಸು ಹೊಕ್ಕಾಗಿರುವ ಈ ಕುಂಬಾರಿಕೆಯು ಇಂದಿನ ದಿನಗಳಲ್ಲಿ ಬೇಡಿಕೆ ಕಳೆದುಕೊಂಡು ಆಧುನಿಕತೆಯಲ್ಲಿ ಮರೆಯಾಗುತ್ತಿದೆ. ನಮ್ಮ ಪೂರ್ವಜರು ಅಡಿಗೆ ಮಾಡಲು, ನೀರು ಸಂಗ್ರಹಿಸಲು, ಧವಸ ಧಾನ್ಯಗಳ ಸಂಗ್ರಹಣೆಗೆ, ಧಾರ್ಮಿಕ ವಿಧಿ ವಿಧಾನಗಳಿಗೆ ಬಳಸುತ್ತಿದ್ದ ಈ ಮಣ್ಣಿನ ವಸ್ತುಗಳು ಇಂದು ಆಧುನಿಕತೆಯ ಸೋಗಿನಲ್ಲಿ ಬಚ್ಚಿಟ್ಟುಕೊಳ್ಳುತ್ತಿವೆ. ಪೂರ್ವಜರ ಕಾಲದಲ್ಲಿ ಬಳಸುತ್ತಿದ್ದ ಈ ಮಡಿಕೆ ಕುಡಿಕೆಗಳು ಮನುಷ್ಯನ ಆರೋಗ್ಯಕ್ಕೆ ಉತ್ತಮವಾಗಿದ್ದಷ್ಟೇ ಅಲ್ಲದೆ, ಪರಿಸರಕ್ಕೆ ಹಾಗೂ ಜೀವ ಸಂಕುಲಕ್ಕೆ ಯಾವುದೇ ತರಹದ ಹಾನಿಯನ್ನು ಉಂಟು ಮಾಡುತ್ತಿರಲಿಲ್ಲ.

ಆದರೆ ಇಂದು ಬಳಸುವ ವಸ್ತುಗಳಲ್ಲಿ ಬಹಳಷ್ಟು ಬದಲಾವಣೆಗಳಾಗಿದ್ದು ಪ್ಲಾಸ್ಟಿಕ್ ಹಾಗೂ ಅಲ್ಯೂಮಿನಿಯಂ ವಸ್ತುಗಳ ಬಳಕೆ ತೀವ್ರ ಗೊಂಡಿದೆ. ಪ್ಲಾಸ್ಟಿಕ್ ಬಳಕೆಯು ಜೀವಕ್ಕೆ ಹಾನಿಕಾರಕ ಪರಿಸರಕ್ಕೆ ಮಾರಕ ಎಂದು ತಿಳಿದಿದ್ದರೂ ಅವುಗಳ ಬಳಕೆಯ ನಂತರ ಸೂಕ್ತ ರೀತಿಯಲ್ಲಿ ಸಂಸ್ಕರಣೆ ಮಾಡದಿರುವುದು ಜೀವ ಸಂಕುಲದ ವಿನಾಶಕ್ಕೆ ಎಡೆ ಮಾಡಿಕೊಟ್ಟಿದೆ. ಈ ನಿಟ್ಟಿನಲ್ಲಿ ಸರ್ಕಾರ ಕ್ರಮಕೈಗೊಂಡಾಗ ಕೆಲವು ದಿನಗಳು ಸಾರ್ವಜನಿಕ ಸ್ಥಳಗಳಲ್ಲಿ ನೀರಿನ ಬಳಕೆಗೆ ಮಣ್ಣಿನ ಲೋಟಗಳ ಉಪಯೋಗ ಕಡ್ಡಾಯ ಮಾಡಿದ್ದು ಅದು ಸೂಕ್ತ ರೀತಿಯಲ್ಲಿ ಅನುಸರಣೆಯಾಗದೆ ವಿಫಲಗೊಂಡಿತು.

ಆರೋಗ್ಯದ ದೃಷ್ಟಿಯಿಂದ, ಮುಂದಿನ ಪೀಳಿಗೆಯ ಉಳಿವಿಗಾಗಿ ಆರೋಗ್ಯಕರ ಪರಿಸರದ ನಿರ್ಮಾಣಕ್ಕಾಗಿ ಇನ್ನೊಮ್ಮೆ ಈ ಕುಂಬಾರಿಕೆಯ ಉದ್ಯಮವನ್ನು ಪುನಶ್ಚೇತನಗೊಳಿಸುವ ಅಗತ್ಯತೆ ಇದೆ. ಎಷ್ಟೇ ಆಧುನೀಕರಣಗೊಂಡರೂ ಹಿಂದು ಸಂಪ್ರದಾಯದಂತೆ ಇಂದಿಗೂ ದೇವರ ಕಾರ್ಯಗಳಿಗೆ ಈ ಮಡಿಕೆ-ಕುಡಿಕೆಗಳ ಉಪಯೋಗವಾಗುತ್ತಿದ್ದು, ಅದು ಅಷ್ಟಕ್ಕೇ ಸೀಮಿತಗೊಳ್ಳದೆ ಅದರ ವ್ಯಾಪ್ತಿಯನ್ನು ವಿಸ್ತರಿಸುವ ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ.

ಚನ್ನಪಟ್ಟಣದ ಕರಕುಶಲ ಉದ್ದಿಮೆಗಳಲ್ಲಿ ಒಂದಾಗಿದ್ದ ವೀಣೆ ತಂತಿಯ ತಯಾರಿಕೆಯು ಇಂದು ಸಂಪೂರ್ಣವಾಗಿ ಕಣ್ಮರೆಯಾಗಿದ್ದು, ಹರಳು ಉದ್ದಿಮೆ ಅಲ್ಪ ಪ್ರಮಾಣದಲ್ಲಿ ನಡೆದುಕೊಂಡು ಬರುತ್ತಿದೆ. ಗಣಿ ಹಾಗೂ ಭೂವಿಜ್ಞಾನ ಇಲಾಖೆಯು ಇದರ ಬಗ್ಗೆ ಸೂಕ್ತ ಗಮನ ಹರಿಸಿ, ಉದ್ದಿಮೆದಾರರಿಗೆ ನೀಡುವ ಪರವಾನಗಿಗಳನ್ನು ನವೀಕರಿಸಿ ಅವರಿಗೆ ಸೂಕ್ತ ಪ್ರೋತ್ಸಾಹ ನೀಡಿ ಉದ್ದಿಮೆಯನ್ನು ಬೆಂಬಲಿಸುವ ಅಗತ್ಯತೆ ಇದೆ.

ಟಿಪ್ಪುವಿನಿಂದ ಪರಿಚಿತಗೊಂಡ ರೇಷ್ಮೆ ಉದ್ದಿಮೆಯು ಇಂದು ಚನ್ನಪಟ್ಟಣ ತಾಲ್ಲೂಕಿನಾದ್ಯಂತ ಹರಡಿದ್ದು ಎಷ್ಟೋ ಕೃಷಿಕ ಕುಟುಂಬಗಳಿಗೆ ಜೀವನಾಧಾರವಾಗಿದ್ದು

ಒಂದು ಕಾಲಕ್ಕೆ ಉತ್ತಮ ವಿದೇಶಿ ವಿನಿಯಮ ಗಳಿಸುತ್ತಿದ್ದ ಈ ಉದ್ದಿಮೆಯು ಇಡೀ ಏಷ್ಯಾ ಖಂಡಕ್ಕೆ ದೊಡ್ಡ ಮಾರುಕಟ್ಟೆಯು ಈ ತಾಲ್ಲೂಕಿನ ಹತ್ತಿರದ ರಾಮನಗರದಲ್ಲಿದ್ದು ಈ ರೇಷ್ಮೆ ಉದ್ದಿಮೆ ಇಂದು ವಿದೇಶಿ ಸುಂಕದ ಸಡಿಲಿಕೆಯಿಂದಾಗಿ ತೀವ್ರ ಹಿನ್ನಡೆಯನ್ನು ಎದುರಿಸುತ್ತಿದ್ದು ಸರ್ಕಾರವು ಸೂಕ್ತ ಬೆಂಬಲ ಬೆಲೆಯೊಂದಿಗೆ ಈ ಉದ್ದಿಮೆಯನ್ನು ಉಳಿಸಿ ನಡೆಸುವ ಜವಾಬ್ದಾರಿಯನ್ನು ಹೊರಬೇಕಿದೆ.

ಅಧ್ಯಯನಕ್ಕೆ ಸಂಪೂರ್ಣವಾಗಿ ಐತಿಹಾಸಿಕ ವಿಧಾನಗಳಾದ ಮಾಹಿತಿ ಸಂಗ್ರಹಣೆ, ಮಾಹಿತಿ ವಿಶ್ಲೇಷಣೆ, ವಿಮರ್ಶೆ ಹಾಗೂ ಸಂಯೋಜನಾ ವಿಧಾನಗಳನ್ನು ಅಳವಡಿಸಿಕೊಂಡಿದ್ದು ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ಪ್ರಾಥಮಿಕ ಹಾಗೂ ಮಾಧ್ಯಮಿಕ ಆಧಾರಗಳನ್ನು ಬಳಸಿಕೊಳ್ಳಲಾಗಿದೆ. ಅಲ್ಲದೆ ಕ್ಷೇತ್ರ ಕಾರ್ಯ, ಸಂದರ್ಶಗಳ ಮೂಲಕವೂ ಮಾಹಿತಿಯನ್ನು ಸಂಗ್ರಹಿಸಿರುವುದರ ಜೊತೆಗೆ ಕರ್ನಾಟಕ ರಾಜ್ಯ ಪತ್ರ, ಮೈಸೂರು ರಾಜ್ಯ ಪತ್ರಗಳನ್ನು, ಮಿಥಿಕ್ ಸೊಸೈಟಿ ಗ್ರಂಥಾಲಯಗಳಿಂದಲೂ ಮಾಹಿತಿ ಸಂಗ್ರಹಣೆ ಮಾಡಿ ಅಧ್ಯಯನವನ್ನು ನಡೆಸಲಾಗಿದೆ.

ಒಟ್ಟಾರೆಯಾಗಿ ಪ್ರಸ್ತುತ ಐತಿಹಾಸಿಕ ಅಧ್ಯಯನದಿಂದಾಗಿ ಈ ಕರಕುಶಲತೆಯ ಇತಿಹಾಸ ಪ್ರಾಚೀನತೆಯ ಅರಿವು ಮೂಡಿದೆ. ಈವರೆಗಿನ ಸಮೀಕ್ಷೆಗಳಲ್ಲಿ ಬೊಂಬೆ ತಯಾರಿಕಾ ವೃತ್ತಿಯಿಂದಾಗಿ ಬೊಂಬೆಯ ನಗರಿ ಎಂದು ಪ್ರಖ್ಯಾತಿಗೊಂಡಿದ್ದ ಚನ್ನಪಟ್ಟಣದಲ್ಲಿ ಬೊಂಬೆಯ ತಯಾರಿಕೆಗೆ ಅಗತ್ಯವಿರುವ ಕಚ್ಚಾವಸ್ತುಗಳು, ಅವುಗಳ ವಿಶಿಷ್ಟತೆ, ಅದರ ವ್ಯಾಪಾರ–ವಾಣಿಜ್ಯದ ಬಗ್ಗೆ ಸ್ಥೂಲ ಅವಲೋಕನವಾಗಿತ್ತೇ ವಿನ: ಈ ಕರಕುಶಲ ಕಲೆಯ ಇತಿಹಾಸವನ್ನು ಹುಡುಕುವ ಪ್ರಯತ್ನವಾಗಿರಲಿಲ್ಲ. ಪ್ರಸ್ತುತ ಅಧ್ಯಯನವು ಕರಕುಶಲ ಕಲೆಯ ಪ್ರಾರಂಭಕ್ಕೆ ಸಂಬಂಧಿಸಿದ ಮೂಲವನ್ನು ಶೋಧಿಸುವಲ್ಲಿ ಯಶಸ್ವಿಯಾಗಿದೆ. ಮುಸಲ್ಮಾನ ವ್ಯಕ್ತಿಯಿಂದ ಆರಂಭವಾದ ಈ ಕಲೆ ನಂತರದಲ್ಲಿ ಹಲವಾರು ಜನರಿಗೆ ತರಬೇತಿ ನೀಡುವುದರ ಮೂಲಕ ವ್ಯಾಪಕವಾದಂತೆ ದೇಶ–ವಿದೇಶಗಳಲ್ಲಿ ಖ್ಯಾತಿ ಹೊಂದುತ್ತಾ ವಿಸ್ತರಿಸಿದ್ದು, ಮುಖ್ಯವಾಗಿ ಈ ಕಲೆಯು ಸಂಸ್ಕೃತಿಯ ಪ್ರಸಾರಕ್ಕೆ ಸಹಕಾರಿಯಾಗಿರುವುದು ಸಂಶೋಧನೆಯಿಂದಾಗಿ ತಿಳಿದು ಬಂದಿದೆ. ಕೇವಲ ಸಂಸ್ಕೃತಿ ಮಾತ್ರವಲ್ಲದೆ ಶೈಕ್ಷಣಿಕ ಸಾಧನಗಳಾಗಿಯೂ ಈ ಮರದ ಆಟಿಕೆಗಳು/ವಸ್ತುಗಳು ಸಹಕಾರಿಯಾಗುತ್ತಿದ್ದು ಇಂದು ಚಟುವಟಿಕೆಯಾಧಾರಿತ ಶಿಕ್ಷಣದಲ್ಲಿ ಪ್ರಮುಖ ಪಾತ್ರವಹಿಸಿವೆಯಷ್ಟೆ ಅಲ್ಲದೆ ಆರೋಗ್ಯ ಸಾಧನಗಳಾಗಿಯೂ ಸಹ ಕಾರ್ಯ ನಿರ್ವಹಿಸುತ್ತಿರುವ ಮರದ ಆಟಿಕೆಗಳ ಅಧ್ಯಯನದಿಂದ ಅವುಗಳ ಮಹತ್ವದ ಅರಿವಾಗಿದೆ.

ಕೌಶಲ್ಯವನ್ನು ಬಿಂಬಿಸಲಿಕ್ಕಾಗಿ ಸಣ್ಣದಾಗಿ ಆರಂಭವಾದ ಈ ಉದ್ದಿಮೆ ನಂತರದ ದಿನಗಳಲ್ಲಿ ಹಲವು ವರ್ಗಗಳ ಜನರು ಈ ವೃತ್ತಿಯನ್ನು ಆಶ್ರಯಿಸಿ ಮುಂದೆ ಸಾವಿರಾರು ಜನರು ಈ ವೃತ್ತಿಯನ್ನು ಕೈಗೊಳ್ಳಲು ಕಾರಣವಾದ ಅಂಶಗಳನ್ನು

ಸಂಶೋಧಿಸಲಾಗಿದೆ. ಅಧ್ಯಯನದಿಂದಾಗಿ ಸ್ಥಳೀಯ ಮಟ್ಟದಲ್ಲಿದ್ದ ಈ ಮರದ ಬೊಂಬೆಗಳ ವ್ಯಾಪಾರವು ರಾಷ್ಟ್ರೀಯ ಹಾಗು ಅಂತರಾಷ್ಟ್ರೀಯ ಮಟ್ಟಕ್ಕೇರಲು ಕಾರಣವಾದ ಸಂದರ್ಭಗಳು, ಸಹಕರಿಸಿದ ವ್ಯಕ್ತಿಗಳ ಚಿತ್ರಣ ಸಾಧ್ಯವಾಗಿದ್ದು, ಇಂದಿನ ಕುಶಲಕರ್ಮಿಗಳ ಸ್ಥಿತಿ-ಗತಿಗಳು ಶೋಚನೀಯವಾದುದರ ಜೊತೆಗೆ ಕೈಗಾರಿಕೆಗಳು ಅವಸಾನದತ್ತ ಸಾಗಲು ಕಾರಣೀಭೂತವಾದ ಅಂಶಗಳು ಬೆಳಕಿಗೆ ಬಂದಿವೆ. ಇಷ್ಟೇ ಅಲ್ಲದೆ ಇಂದು ಈ ಕೈಗಾರಿಕೆಗಳ ಉಳಿಯುವಿಕೆಗೆ ಸರ್ಕಾರ ಕೈಗೊಳ್ಳ ಬೇಕಾದ ಕ್ರಮಗಳನ್ನು ಪ್ರಸ್ತಾಪಿಸಲಾಗಿದೆ.

ಇಷ್ಟೇಲ್ಲಾ ಮಹತ್ವವುಳ್ಳ ಕರಕುಶಲ ಕೈಗಾರಿಕೆಯ ಅಧ್ಯಯನದಿಂದಾಗಿ ಈ ಉದ್ದಿಮೆಯ ಉಗಮ ಇತಿಹಾಸ, ಬೆಳವಣಿಗೆ, ಉದ್ದಿಮೆಯ ಅವಲಂಬಿತ ವರ್ಗಗಳು, ವ್ಯಾಪಾರ-ವಾಣಿಜ್ಯದ ಪರಿಚಯವಾಗಿ ಮುಂದಿನ ಪೀಳಿಗೆಗೆ ಕರಕುಶಲ ಉದ್ದಿಮೆಯ ಮಹತ್ವದ ಅರಿವನ್ನು ರವಾನಿಸುವ ಪ್ರಯತ್ನ ಸಾಧಿತವಾಗಿದೆ.

ಇಂದಿನವರೆಗೂ ಬಹುಸಂಖ್ಯಾತರಿಗೆ ಅಪರಿಚಿತವಾಗಿದ್ದ ಹರಳು ಉದ್ದಿಮೆಯ ಮೂಲ, ಬೆಳವಣಿಗೆ, ಆಶ್ರಿತ ವರ್ಗ ಸಮುದಾಯದ ಮೇಲೆ ಬೆಳಕು ಚೆಲ್ಲುವ ಕಾರ್ಯ ಯಶಸ್ವಿಯಾಗಿದೆ. ಅಷ್ಟೆ ಅಲ್ಲದೆ ಈ ಅಧ್ಯಯನವು ಚನ್ನಪಟ್ಟಣದ ಪ್ರಾಚೀನ ಕರಕುಶಲತೆಯಲ್ಲೊಂದಾದ ವೀಣೆ ತಂತಿ ತಯಾರಿಕಾ ಉದ್ಯಮವನ್ನು ಇಂದಿನ ಪೀಳಿಗೆಗೆ ಪರಿಚಯಿಸಲು ಸಾಧ್ಯವಾಗಿದೆ. ಈ ಸಂಶೋಧನೆಯಿಂದ ಕರಕುಶಲತೆಯ ಮಹತ್ವದ ಅರಿವು ಸ್ಥಳೀಯ ಜನರನ್ನು, ಸರ್ಕಾರವನ್ನು ಎಚ್ಚರಿಸಿ ಅವುಗಳ ಉಳಿಯುವಿಕೆಗೆ ಬೆಂಬಲ ದೊರೆತು ಮುಂದಿನ ದಿನಗಳಲ್ಲಿ ಇದರ ವ್ಯಾಪ್ತಿ ಇನ್ನಷ್ಟು ವಿಸ್ತಾರವಾಗುತ್ತದೆಂಬುದು ನಮ್ಮ ಆಶಯವಾಗಿದೆ.

ಅಡಿಟಿಪ್ಪಣಿಗಳು :

1. ಎಂ.ಬೈರೇಗೌಡ, ತಾ.ಸಿ.ತಿಮ್ಮಯ್ಯ (ಸಂ.), 'ಅರ್ಕಾವತಿ', ಪು.282.
2. ಕರೀಗೌಡ ಬೀಚನಹಳ್ಳಿ (ಸಂ.), 'ಕನ್ನಡ ವಿಶ್ವವಿದ್ಯಾಲಯ, ವಿಶ್ವಕೋಶ-2, ಕರಕುಶಲ ಕಲೆಗಳು', ಪು.336.
3. ಹೆಚ್.ಕೃಷ್ಣೇಗೌಡ ಮತ್ತು ದೇ.ನಾರಾಯಣಸ್ವಾಮಿ (ಸಂ.), 'ಕಣ್ವಸಿರಿ', ಪು.29.
4. ಎಸ್.ಬಸವರಾಜು (ಸಂ.), 'ಚೈತ್ರ' ಪು.10.

ಪರಾಮರ್ಶನ ಗ್ರಂಥಗಳು

ಪರಾಮರ್ಶನ ಗ್ರಂಥಗಳು

ಕನ್ನಡ ಕೃತಿಗಳು :

1. ಅಂಬಳಿಕೆ ಹಿರಿಯಣ್ಣ : 'ಕನ್ನಡ ವಿಷಯ ವಿಶ್ವಕೋಶ (ಇತಿಹಾಸ ಮತ್ತು ಪುರಾತತ್ವ)'
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು–2009.

2. ಕರೀಗೌಡ ಬೀಚನಹಳ್ಳಿ : 'ಕನ್ನಡ ವಿಶ್ವವಿದ್ಯಾಲಯ, ವಿಶ್ವಕೋಶ–2, ಕರಕುಶಲ ಕಲೆಗಳು',
ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ, 2000.

3. ಕರ್ನಾಟಕ ಸರ್ಕಾರ : 'ಮೈಸೂರು ದಸರಾ ವಸ್ತು ಪ್ರದರ್ಶನ ಪ್ರಕಾಶಿಕೆ–1961',
ದಸರಾ ವಸ್ತು ಪ್ರದರ್ಶನ ಪ್ರಕಾಶಿಕೆಯ ಉಪಸಮಿತಿ, ವಿಧಾನಸೌಧ,
ಬೆಂಗಳೂರು, 1961.

4. ಕೃಷ್ಣೇಗೌಡ, ಹೆಚ್. ಮತ್ತು ದೇ.ನಾರಾಯಣಸ್ವಾಮಿ : 'ಕಣ್ವಸಿರಿ ಸ್ಮರಣ ಸಂಚಿಕೆ',
ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು,
ಚನ್ನಪಟ್ಟಣ, 2011.

5. ಗೋಪಾಲರಾವ್, ಹೆಚ್.ಎಸ್ : 'ನೆಲದ ಸಿರಿ ನೆನಪಿನ ಸಂಚಿಕೆ'
ಬೆಂಗಳೂರು ಗ್ರಾಮಾಂತರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, 1997.

6. ಚಕ್ಕಲೂರು ಚನ್ನಪ್ಪ : 'ಜನಪದವಾಣಿ',
ಚನ್ನಪ್ಪ, ಚಕ್ಕಲೂರು,
ಚನ್ನಪಟ್ಟಣ–2011.

7. ಚಿಕ್ಕಪುಟ್ಟೇಗೌಡ, ಬಿ.ಟಿ. ಮತ್ತು ಆರ್.ವಿ. ನಾರಾಯಣ : 'ಕನಕ ಸಂಪದ ಸ್ಮರಣ ಸಂಚಿಕೆ'
ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು,
ರಾಮನಗರ, 2010.

8. ಚಿಕ್ಕಪುಟ್ಟೇಗೌಡ, ಬಿ.ಟಿ. ಮತ್ತು ಮುನಿರಾಜಪ್ಪ : 'ಕಟ್ಟಾಣಿ, ಪ್ರಥಮ ಸಾಹಿತ್ಯ ಸಮ್ಮೇಳನದ ಜಿಲ್ಲಾದರ್ಶನ', ಕನ್ನಡ ಸಾಹಿತ್ಯ ಪರಿಷತ್, ರಾಮನಗರ ಜಿಲ್ಲಾ ಘಟಕ, ರಾಮನಗರ, 2010.

9. ನಂಜರಾಜ ಅರಸು, ಪಿ.ವಿ. : 'ಮೈಸೂರು: ನೂರಿನ್ನೂರು ವರ್ಷಗಳ ಹಿಂದೆ', ಅಭಿರುಚಿ ಪ್ರಕಾಶನ, ಸರಸ್ವತೀಪುರಂ, ಮೈಸೂರು, 2007

10. ಬಸವರಾಜು, ಎಸ್. : 'ಚೈತ್ರ ವಾರ್ಷಿಕ ಸಂಚಿಕೆ', ಶ್ರೀ ಹೊಂಬೇಗೌಡ, ಶಿಕ್ಷಣ ಸಂಸ್ಥೆ (ರಿ), ಶ್ರೀ ಕುವೆಂಪು ಪ್ರಥಮದರ್ಜೆ ಕಾಲೇಜು, ಕೆಂಗಲ್, ಚನ್ನಪಟ್ಟಣ, 2008.

11. ಬೈರೇಗೌಡ, ಎಂ. ಮತ್ತು ತಾ.ಸಿ. ತಿಮ್ಮಯ್ಯ : 'ಅರ್ಕಾವತಿ ಸ್ಮರಣ ಸಂಚಿಕೆ', ಅಖಿಲ ಭಾರತ 67ನೇ ಕನ್ನಡ ಸಾಹಿತ್ಯ ಸಮ್ಮೇಳನ, ಕನಕಪುರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು–18, 1999

12. ರಮ, ಕೆ.ಎಸ್. : 'ಜೀವನ ಚರಿತ್ರೆ ಮಾಲೆ–12', ಮೈಸೂರು ಹುಲಿಟಿಪ್ಪುಸುಲ್ತಾನ್, ಮೆಸರ್ಸ್ ಟಿ. ನಾರಾಯಣ ಅಯ್ಯಂಗಾರ್, ಪ್ರಕಾಶಕರು ಹಾಗೂ ಪುಸ್ತಕ ವ್ಯಾಪಾರಿಗಳು, ಬಳೇಪೇಟೆ, ಬೆಂಗಳೂರು–2000

13. ರಾಜಪ್ಪ, ಡಿ.ಸಿ. : 'ಮೈಸೂರು ರಾಜ್ಯದಲ್ಲಿ ವಾಣಿಜ್ಯ ಮತ್ತು ಕರಕುಶಲ ಕಲೆಗಳು (1800–1881)' ಅಕ್ಷರ ಪ್ರಕಾಶನ, ಹೆಗ್ಗೋಡು ಸಾಗರ, ಕರ್ನಾಟಕ, 1995

ಆಂಗ್ಲಕೃತಿಗಳು :

1. Francis Buchanan : 'Journy from Madras through the countries of Mysore, Canara and Malabar', Vol-1, London, 1807.

2. Hazrath Syed Nizam : 'Autography of Hazrath Syed Nizam' Unpublished.

3. Suryanath.U. Kamath : 'Karnataka State Gazetter, Bangalore, Rural District,' Govt. of Karnataka Publication, Bangalore,1989

4. Thampson, R.A. : 'Compbell's Directory for Mysore and Bangalore', Mrs. Compbell and Sons, 1920

5. Suryanth U. Kamath : 'Karnataka State Gazetter-Mysore Distict', Govt. of Karnataka Publication, Bangalore -1988

ಮೌಖಿಕ ಸಂದರ್ಶನ ಪಡೆದ ವ್ಯಕ್ತಿಗಳ ವಿವರ :

ಅಬ್ದುಲ್ ರೆಹಮಾನ್, ಕೆ. : ಬೊಂಬೆ ವ್ಯಾಪಾರಿಗಳು,
ಚನ್ನಪಟ್ಟಣ.

ಈಶ್ವರ ರಾಜು : ಶ್ರೀ ಟಾಯ್ಸ್ ಫ್ಯಾಕ್ಟರಿ,
ಚನ್ನಪಟ್ಟಣ.

ಏಲಕ್ಕಿ ತಿಮ್ಮಶೆಟ್ಟಿ : ಕುಡಿಕೆ ಬೇವೂರು,
ಚನ್ನಪಟ್ಟಣ.

ಕೃಷ್ಣೇಗೌಡ, ಹೆಚ್.ಕೆ. : ಸಹಾಯಕ ಪ್ರಾಧ್ಯಾಪಕರು,
ಚನ್ನಪಟ್ಟಣ.

ಕೃಷ್ಣ : ಹರಳು ತಯಾರಕರು,
ಮದಿನಾಚೌಕ್, ಚನ್ನಪಟ್ಟಣ.

ನಾಗಮ್ಮ : ಕುಡಿಕೆ ಬೇವೂರು,
ಚನ್ನಪಟ್ಟಣ.

ನಾಗರತ್ನ : ಮೇಲ್ವಿಚಾರಕರು,
ಮಾಯಾ ಆರ್ಗನಿಕ್ ಸರ್ವಿಸ್, ಚನ್ನಪಟ್ಟಣ

ಪ್ರಕಾಶ್ : ಸಹಾಯಕ ಬೋಧಕರು, ಅರಗುಬಣ್ಣ ವಿಭಾಗ,
ಕರಕುಶಲ ತರಬೇತಿ ಕೇಂದ್ರ, ಚನ್ನಪಟ್ಟಣ.

ಮಾಲಿನಿ : ಶ್ರೀ ಟಾಯ್ಸ್ ಫ್ಯಾಕ್ಟರಿ,
ಚನ್ನಪಟ್ಟಣ.

ಮೋಹನ್ ಕುಮಾರ್	:	ತರಬೇತುದಾರರು, ಹಗ್ಗ ತಯಾರಿಕಾ ಉದ್ಯಮಿ, ತಿಟ್ಟಮಾರನಹಳ್ಳಿ, ಚನ್ನಪಟ್ಟಣ
ರಮೇಶ್	:	ಗಣಿ ಮಾಲೀಕರು, (ಹರಳು ಉದ್ಯಮ) ಹೊನ್ನನಾಯಕನಹಳ್ಳಿ, ಚನ್ನಪಟ್ಟಣ.
ರಾಮೇಗೌಡ, ಸು.ತ.	:	ಸಂಪಾದಕರು, ಬಯಲುಸೀಮೆ ಪತ್ರಿಕೆ, ಚನ್ನಪಟ್ಟಣ.
ಶಿವರಾಮೇಗೌಡ ನಾಗವಾರ	:	ನಿವೃತ್ತ ಪ್ರಾಂಶುಪಾಲರು, ಚನ್ನಪಟ್ಟಣ.
ಶ್ರೀನಿವಾಸ್	:	ಮೇದರಜನಾಂಗದ ಹಿರಿಯವ್ಯಕ್ತಿ, ಮೇದರ ಬೀದಿ, ಚನ್ನಪಟ್ಟಣ.
ಸಯ್ಯದ್ ಬಸಾರತ್ ವುಲ್ಲಾ	:	ಬೊಂಬೆ ತಯಾರಕರು ಹಾಗೂ ವ್ಯಾಪಾರಿಗಳು, ಮೆಹದವಿಯ ವೃತ್ತ, ಚನ್ನಪಟ್ಟಣ.
ಹನುಮಂತಪ್ಪ, ಸಿ.	:	ನೇಕಾರರು, ಎಲೇಕೇರಿ, ಚನ್ನಪಟ್ಟಣ.

ಅನುಬಂಧ

1. ಕರಕುಶಲ ಉದ್ದಿಮೆಗಳ ಛಾಯಾಚಿತ್ರಗಳು
2. ಅಧ್ಯಯನದ ಸ್ಥಳವನ್ನು ಸೂಚಿಸುವ ನಕ್ಷೆ



ಚಿತ್ರ–1 : ಚನ್ನಪಟ್ಟಣದ ಜೀವನಾಡಿ ಕಣ್ವ ಜಲಾಶಯ



ಚಿತ್ರ–2 : ಚೋಳರ ಕಾಲದಲ್ಲಿ ನಿರ್ಮಾಣಗೊಂಡಿರುವ ಅಪ್ರಮೇಯ ಸ್ವಾಮಿದೇವಸ್ಥಾನ (ದೊಡ್ಡಮಳೂರು)



ಚಿತ್ರ–3 : ಬೊಂಬೆ ತಯಾರಿಕೆಗೆ ಬೇಕಾದ ಮೂಲಕಚ್ಚಾವಸ್ತು – ಹಾಲೆ ಮರ



ಚಿತ್ರ–4 : ಚನ್ನಪಟ್ಟಣದ ಬೊಂಬೆ ತಯಾರಿಕಾ ವೃತ್ತಿ ಪರಿಚಯಿಸಿದ ಬಾವಸ್‌ಮಿಯಾರವರು



ಚಿತ್ರ–5 : ಕೊಲೊಂಬೋ ಯೋಜನೆಯಡಿ ಜಪಾನಿನಲ್ಲಿ ತರಬೇತಿ ಪಡೆದ ಸಯ್ಯದ್ ನಿಜಾಂರವರು



ಚಿತ್ರ–6 : ಉದ್ದಿಮೆಯ ಬೆಳವಣಿಗೆಗೆ ಕಾರಣರಾದ ಎಂ. ಲಿಂಗಯ್ಯರವರು



ಚಿತ್ರ–7 : ಬೇವೂರಿನ ಕುಡಿಕೆಗಳು



ಚಿತ್ರ–8 : ಮಡಿಕೆಗಳನ್ನು ತಯಾರಿಸುವ ಚಕ್ರ



ಚಿತ್ರ–9 : ಮಣ್ಣಿನಿಂದ ರಚನೆಯಾದ ವಿವಿಧ ವಸ್ತುಗಳು



ಚಿತ್ರ–10 : ಮೂಲ ಹರಳು ಉದ್ದಿಮೆದಾರ ಶ್ರೀ ಕಾಡಯ್ಯ ಶೆಟ್ಟಿಯವರು



ಚಿತ್ರ–11 : ಕಚ್ಚಾ ರೂಬಿ ಕೊರುನಮ್ ಹರಳುಗಳು



ಚಿತ್ರ–12 : ನಕ್ಷತ್ರಾ ಕೃತಿಯನ್ನು ಹೊಂದಿರುವ ರೂಬಿ ಕೊರುನಮ್ ಹರಳು



ಚಿತ್ರ–13 : ರೇಷ್ಮೆ ನೂಲಿನಿಂದ ಬಟ್ಟೆ ನೇಯುತ್ತಿರುವುದು



ಚಿತ್ರ–14 : ಮರದ ಪ್ರಮುಖ ಆಟಿಕೆಗಳು



ಚಿತ್ರ–15 : ರೇಷ್ಮೆ ಗೂಡಿನಿಂದ ನೂಲು ಎಳೆಗಳ ಸಂಗ್ರಹಣೆ




ಚಿತ್ರ–16 : ಯಾಂತ್ರೀಕೃತ ಲೇತ್‌ಗಳಿಂದ ಬೊಂಬೆ ತಯಾರಿಕೆ



ಚಿತ್ರ–17 : ಮೇದರಿಂದ ತಯಾರಾದ ಬಿದಿರಿನ ವಿವಿಧ ಉತ್ಪನ್ನಗಳು



ಚಿತ್ರ–18 : ಚಿನ್ನಾಭಾರಣ ತಯಾರಿಸುವ ಅಕ್ಕಸಾಲಿಗರು



ಚಿತ್ರ–19 : ತೆಂಗಿನ ನಾರಿನಿಂದ ಹಗ್ಗ ತಯಾರಿಕೆ



ಚಿತ್ರ–20 : ಲೇತ್‌ಗಳಿಂದ ತಯಾರಾಗುತ್ತಿರುವ ಬೊಂಬೆಗಳಿಗೆ ಬಣ್ಣ ಹಚ್ಚುತ್ತಿರುವುದು



ಚಿತ್ರ–21 : ಮಕ್ಕಳ ಅಡಿಗೆ ಸಾಮಗ್ರಿಗಳ ಆಟಿಕೆಗಳು



ಚಿತ್ರ–22 : ಮರದಲ್ಲಿ ಬಿಂಬಿತವಾಗಿರುವ ಪಕ್ಷಿ ಸಂಕುಲ



ಚಿತ್ರ–23 : ಮರದ ಶೈಕ್ಷಣಿಕ ಸಾಧನಗಳು



ಚಿತ್ರ–24 : ಮರದಿಂದ ರಚಿತವಾಗಿರುವ ರೇಖಾಗಣಿತದ ವಿವಿಧ ಮಾದರಿಗಳು




ಚಿತ್ರ–25 : ಮಕ್ಕಳಿಗೆ ಸಂಖ್ಯೆಗಳ ಎಣಿಕೆಗೆ ಬಳಕೆಯಾಗುವ ಅಬಾಸತ್ ಮಾದರಿ



ಚಿತ್ರ–26 : ಮರದಿಂದ ತಯಾರಾದ ಆರೋಗ್ಯ ಸಾಧನಗಳು



ಚಿತ್ರ–27 : ಗ್ರಾಮೀಣ ನೈಜ ಬದುಕಿನ ಪ್ರತಿರೂಪ ಗೊಂಬೆಗಳು


ಅಧ್ಯಯನದ ಸ್ಥಳ :
ಚನ್ನಪಟ್ಟಣ
ರಾಮನಗರ ಜಿಲ್ಲೆ
ಮಾಗಡಿ
ರಾಮನಗರ
ಚನ್ನಪಟ್ಟಣ
ಕನಕಪುರ
ಭಾರತ
ಕರ್ನಾಟಕ